
# ಅಪರಂಜಿ

ತಿಳಿನಗೆಯ ಕಾರಂಜಿ
ನವೆಂಬರ್ 2023




ಬಿಡಿ ಪ್ರತಿ: ರೂ. 10/–

# Ravi Graphics
OFFSET PRINTERS

*Bringing colours alive*

*What we specialize into :*

- Books
- Brochures
- Catelogues
- Boxes
- Mono Cartons



53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com

Bag is everything

# bag factory
bagfactory.co.in


## Our Promise

- 100% recyclable paper bags & pouches
- Pan-India delivery
- Premium customisation for high-street brands



Reach us for your paper bag requirements

+91 89719 95599 | sales@bagfactory.co.in | bagfactory.co.in





Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
**RNI NO. KAR-KAN/2005/15457**

www.mallige.com

NABH ACCREDITED · PATIENT SAFETY & QUALITY OF CARE

Certificate No.: MC-2068




Established in 1978 we are a multi-speciality, tertiary care hospital.

**CARING AND HEALING**

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages : 40+4 APARANJI KANNADA MONTHLY.



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 41
ಸಂಚಿಕೆ – 02
ನವೆಂಬರ್–2023

**ಸಂಪಾದಕ ಮಂಡಳಿ**

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ವಾರ್ಷಿಕ ಚಂದಾ : ರೂ. 100/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ...

| | | |
|---|---|---|
| ಕಿಡಿ | ಪ್ರಕಾಶ್ | 2 |
| ಅಪರಂಜಿ ನಲವತ್ತರ ಸಂಭ್ರಮ | ರೂಪಾ ಪೈ | 3 |
| ಡಾ. ಶಿವರಾಮ ಕಾ(ಖಾರಂತ)....... | ಎಸ್. ಆರ್. ವಿಜಯಶಂಕರ | 6 |
| ಚಿತ್ರಾಂಗದಾ ಇಂದ್ರಜಿತ್ ಪ್ರಕರಣ | ವತ್ಸನ | 10 |
| ಹೀಗೊಂದು ಶೈಕ್ಷಣಿಕ ಪ್ರವಾಸ | ಡಾ. ಶ್ಯಾಮಲಾ ರವಿಶಂಕರ್ | 15 |
| ನಿಸಾರ್ ಪದ್ಯ | | 18 |
| ಕೈ ಕೊಟ್ಟ ನೆನಪು...... | ಜ್ಯೋತಿ ರಾಜೇಶ್ | 19 |
| ಕಾಲ ಕೆಟ್ಹೋಯ್ತೂಂತ..... | ಅಣಕು ರಾಮನಾಥ್ | 22 |
| ರಶಿಯನ್ ಮೆಟ್ರೋ....... | ಜಯಶ್ರೀ ದೇಶಪಾಂಡೆ | 25 |
| ತುಂತುರು | ದುಂಡಿ | 28 |
| ವಿಶ್ರಾಂತ ಜೀವನ | ಎನ್. ರಾಘವನ್ | 30 |
| ವೃತ್ತಿಯ ಪ್ರಭಾವತಿ | ಡಾ. ಎಸ್. ಸುಧಾ | 31 |
| ಭೀಮನ ಅಮಾವಾಸ್ಯೆ | ದಾಶರಥಿ ದೀಕ್ಷಿತ್ | 34 |
| ಎಲ್ಲಿಂದ ಆರಂಭವೋ | ಸುಕೇಶವ | 37 |

**ವ್ಯಂಗ್ಯ ಚಿತ್ರಗಳು :**
**ಹೊರಪುಟ : ಅಜಿತ್ ನೀನನ್**
**ಒಳಪುಟಗಳು : ರಘುಪತಿ ಶೃಂಗೇರಿ, ಅಶೋಕ್ ಹೆಮ್ಮಿಗೆ**

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,*
*ಬೆಂಗಳೂರು – 560 003,* email: koravanjiaparanji@gmail.com ಮೊಬೈಲ್:9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488.email:belururamamurthy@gmail.com

**For Online payment of ubscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*



## ಅಪರಂಜಿ ಕಿಡಿ

● ಪ್ರಕಾಶ್

ನಲವತ್ತು ಅಂದರೆ ಅಂತಹ ಹೆಚ್ಚೇನಲ್ಲ ಅಂತ ಅಪರಂಜಿ ನಸುನಕ್ಕಳಂತೆ !!

***

ಐ.ಟಿ ದಾಳಿ; :42 ಕೋಟಿ ಜಪ್ತಿ

ದಿನ ಪತ್ರಿಕೆ

ಈ ತರಹ ಸಂಗ್ರಹವಾದ ಹಣ ಕೊನೆಗೆ ಯಾವ ಖಾತೆಗೆ ಎಂಬುದೇ ಯಕ್ಷ-ಪ್ರಶ್ನೆ !!

***

ಲಾಲ್ ಬಾಗ್‌ನಲ್ಲಿ "ಮಿನಿ ಪಶ್ಚಿಮ ಘಟ್ಟ" ಆರಂಭ

ಲಾಲ್ ಬಾಗ್ ಉಪ ನಿರ್ದೇಶಕಿ

ಆಕೆಯ ಹೆಸರು ಶ್ರೀಮತಿ ಕುಸುಮ ಅಂಬುದು ಬಹು ಸೂಕ್ತ!!

***

ಶಾಸಕರೊಬ್ಬರು ಮಂತ್ರಿಗಳ ಪಾದಕ್ಕೆ ಎರಗಿದ್ದು ವರದಿಯಾಗಿದೆ. ಅವರು ಈ ಮಟ್ಟಕ್ಕೆ ಹೋಗಬಾರದಿತ್ತು!!

***

ಅದಾನಿ ಕಲ್ಲಿದ್ದಲು ವ್ಯವಹಾರದಲ್ಲಿ ಲೂಟಿ

ದಿನ ಪತ್ರಿಕೆ

"ಕರಾಳ' ವಾದ ಸುದ್ದಿಯೆಂದರೆ ಇದೇ ಇರಬೇಕು !!

***

ಇನ್ನು ಹಲವಾರು ವಾರಗಳು ಸ್ಲಿಪ್., ಗಲ್ಲಿ, ಮೂರನೇ ಮನುಜ, ಶೂನ್ಯ--ಬಾಲ್

ಸಿಕ್ಸರ್ , ಎಂಬ ಪದಗಳು ಹಾಗೂ ಪದ-ಪುಂಜಗಳು ಜಗತ್ತಿನಲ್ಲೆಲ್ಲ ಹರಿದಾಡುವುದು ಖಚಿತ !!

***

ಮಾನವನನ್ನು ದಾನವನನ್ನಾಗಿ ಮಾಡುವ "ಯುದ್ಧ" ಎಂಬ ಪಿಡುಗು ನಿಲ್ಲುವಂತೆ

ಅಪರಂಜಿ ದಯಾಮಯಿ ಭಗವಂತನಲ್ಲಿ ಬೇಡುತ್ತಾಳೆ !!

***

# ಅಪರಂಜಿ ನಲವತ್ತರ ಸಂಭ್ರಮ


ರೂಪಾ ಪೈ

ಆ ಅಕ್ಟೋಬರ್ ಏಳನೆಯ ತಾರೀಖು ಶನಿವಾರ ಬೆಳಗ್ಗೆ, ಅಪೂರ್ವ ಕಾರ್ಯಕ್ರಮವೊಂದರಲ್ಲಿ ಭಾಗವಹಿಸುವ ಸೌಭಾಗ್ಯ ನನ್ನದಾಗಿತ್ತು. ಸಾಮಾನ್ಯವಾಗಿ



ನನ್ನ ಓಡಾಟವೆಲ್ಲಾ ಮಲ್ಲೇಶ್ವರ, ಕುಮಾರಾ ಪಾರ್ಕ್ ಎಂಜಿ ರಸ್ತೆ, ಚರ್ಚ್ ಸ್ಟ್ರೀಟ್ ಮತ್ತು ಇಂದಿರಾ ನಗರ ಇವುಗಳ ಪರಿಮಿತಿಯಲ್ಲಿ. ಆ ದಿನ ಬೇರೆಯದೇ ಆದ ಒಂದು ತಾಣಕ್ಕೆ ನಾವು ಹೊರಟಿದ್ದೆವು. ಎಲ್ಲರ ಜನಪ್ರಿಯ ನಗೆ ಮಾಸಪತ್ರಿಕೆ ಅಪರಂಜಿಯ ನಲವತ್ತರ ಹುಟ್ಟುಹಬ್ಬ, ದಕ್ಷಿಣ ಬೆಂಗಳೂರಿನಲ್ಲಿರುವ ಜೆ ಎಸ್ ಎಸ್ ಸಭಾಂಗಣದಲ್ಲಿ ಅಂದು ನಡೆಯಲಿತ್ತು. (ನಿಜವಾಗಿಯೂ, ಎಂತೆಂತಹ ದೈತ್ಯ ಮುದ್ರಣ ಮಾಧ್ಯಮಗಳೂ ಸಹಾ ಹೆಣಗಾಡಬೇಕಾದ ನಾಲ್ಕು ದಶಕಗಳ ಜೀವಿತದ ಅವಧಿಯನ್ನು ಈ ಪುಟ್ಟ ಪತ್ರಿಕೆ ಸಾಧಿಸಿ ತೋರಿಸಿರುವುದೇ ಒಂದು ಹೆಗ್ಗಳಿಕೆ)

ಸಾಲುಮರಗಳಿಂದ ಕೂಡಿದ, ವಿಶಾಲವಾದ ಜಯನಗರದ ರಸ್ತೆಯಲ್ಲಿ ಆ ಶನಿವಾರ ಬೆಳಗ್ಗೆ ಅಂತಹುದೇನೂ ವಾಹನ ಸಂಚಾರ ಇರಲಿಲ್ಲ. ಹಳೆಯ ಬೆಂಗಳೂರಿನ



ವಿನಯ ಶೀಲ, ಮಧುರ, ಹೆಚ್ಚು ನಾಗರಿಕವೆನ್ನುವ ದಿನಗಳನ್ನು ನೆನಪಿಸುವ ಆ

ಹಾದಿಯನ್ನು ಕ್ರಮಿಸುವಾಗ, ನನ್ನೊಡನಿದ್ದ ನಮ್ಮ ತಾಯಿ (ಅವರೂ ಸಹಾ ಅಪರಂಜಿಯ ಬರಹಗಾರ್ತಿ) ಮತ್ತು ನನಗೆ ಸಮಾರಂಭದಲ್ಲಿ ಭಾಗವಹಿಸುವ ಹುರುಪು ಗರಿಗೆದರಿತು. ಬೆಂಗಳೂರಿನ ಸಂಪ್ರದಾಯಕ್ಕೆ ತಕ್ಕಂತೆ ಸಭಾಂಗಣದಲ್ಲಿ ಫಿಲ್ಟರ್ ಕಾಫಿ ಮತ್ತು ಬಿಸ್ಕೆಟ್ ನಮ್ಮನ್ನು ಆದರದಿಂದ ಸ್ವಾಗತಿಸಿದವು. ಮನೆಯಲ್ಲಿ ಚೆನ್ನಾಗಿ ತಿಂಡಿ ತಿಂದು ಬಂದಿದ್ದರೂ, ಮೂರು ಗಂಟೆಗಳ ಕಾರ್ಯಕ್ರಮದಲ್ಲಿ ತೂಕಡಿಸುವಂತಾಗಬಾರದೆಂದು ಎರಡೆರಡು ಲೋಟ ಕಾಫಿಕುಡಿದು ಒಳಕ್ಕೆ ಹೋಗಿ ಎರಡನೆಯ ಸಾಲಿನಲ್ಲಿ ಕುಳಿತೆವು.



ತೂಕಡಿಸಬಹುದೆಂಬ ನಮ್ಮ ಆತಂಕ ಅನಗತ್ಯವೆಂಬುದು ಅತಿ ಶೀಘ್ರದಲ್ಲೇ ಮನವರಿಕೆಯಾಯಿತು. ಹತ್ತು ಘಂಟೆಗೆ ಸರಿಯಾಗಿ ಕಾರ್ಯಕ್ರಮ ಪ್ರಾರಂಭವಾಯಿತು. ಅಪರಂಜಿ 1983 ರರಿಂದ 2023ರರ ವರೆಗೆ ನಡೆದು ಬಂದ ದಾರಿಯನ್ನು ಕುರಿತು ಅಪರಂಜಿಯ ಏಕಮೇವಾದ್ವಿತೀಯ ಸಂಪಾದಕರಾದ ಶ್ರೀ ಶಿವಕುಮಾರ್ ಅವರು ತಮ್ಮ ಸ್ಲೈಡ್ ಶೋ ಮತ್ತು ವಿವರಣೆಗಳಿಂದ ರೋಚಕವಾಗಿ ಮಂಡಿಸಿದಾಗಿನಿಂದ ಹಿಡಿದು, ಕೊನೆಯಲ್ಲಿ ಅತ್ಯಂತ ಜನಪ್ರಿಯ ಸ್ಟಾಂಡ್ ಅಪ್ ನಗೆಗಾರ, ರಾಯಚೂರಿನ ಹಾಟ್ ಹುಡುಗ ಶ್ರೀ ರಾಘವೇಂದ್ರ ಆಚಾರ್ಯ ತಮ್ಮ ಹಾಸ್ಯವನ್ನು ವಿಜೃಂಭಣೆಯಿಂದ ಮೆರೆಸುವವರೆಗೂ ಪ್ರತಿಕ್ಷಣವೂ ನಗೆ ಮಿಂಚಿನಿಂದ ಅರಳುತ್ತಿತ್ತು. ಉತ್ತಮ ಹಾಸ್ಯ ಪ್ರಜ್ಞೆಯ ದ್ಯೋತಕವೆಂಬಂತೆ ಪ್ರತಿಯೊಬ್ಬ ಭಾಷಣಕಾರರೂ ನಗು ಮತ್ತು ನಗೆಯ ಹಿಂದಿನ ಕಟು ಸತ್ಯ ಇವುಗಳ ನಡುವಣ ತಂತಿ ನಡಿಗೆಯನ್ನು ಬಹು ಕೌಶಲದಿಂದ ನಿಭಾಯಿಸಿದ್ದು ಮನದಲ್ಲಿ ತೃಪ್ತಿ ಮೂಡಿಸಿತು.

ಮುಖ್ಯ ಅತಿಥಿ ಶ್ರೀ ಚಿರಂಜೀವಿ ಸಿಂಗ್ ಕೊರವಂಜಿಯ ಹಳೆಯ ಸಂಚಿಕೆಯೊಂದರಿಂದ ಉದ್ಧರಿಸಿದ ಭಾಗವೊಂದನ್ನು ಓದುತ್ತ, 1942 ರಿಂದ ಇಂದಿನವರೆಗೆ ನಮ್ಮ ರಾಜಕೀಯದಲ್ಲಿ ಏನೂ ಬದಲಾವಣೆ ಆಗಿಲ್ಲ ಎಂಬ ಅಂಶವನ್ನು ಗೇಲಿ ಮಾಡಿ, ನಗೆಬರಹಗಾರರಿಗೆ ಹಾಗೂ ವ್ಯಂಗ್ಯಚಿತ್ರ ಕಾರರಿಗೆ ಒಂದು ಕಿವಿಮಾತನ್ನು ಹೇಳುತ್ತ, "ನಮ್ಮ ರಾಜಕೀಯ ಈಗ ಸ್ಟೀರಾಯಿಡ್ಸ್ ಮೇಲಿದೆ. ನಿಮಗೇ ತಿಳಿದಿರುವಂತೆ ಈ ಸ್ಟೀರಾಯಿಡ್ ಔಷಧಿಗಳು ನಮ್ಮ ಚರ್ಮವನ್ನು ತೆಳುವಾಗಿ ಮಾಡುತ್ತವಂತೆ. ನಮ್ಮ ಸಮಾಜ ಈಗ ಜೋಕ್‌ಗಳನ್ನು ಅರಗಿಸಿಕೊಳ್ಳಲಾರದ ಮಟ್ಟಕ್ಕೆ ಇಳಿದಿದೆ" ಎಂದು ಎಚ್ಚರಿಸಿದರು. ಸದಾ ನಗೆ ಬುಗ್ಗೆಗಳನ್ನೆಬ್ಬಿಸುವ ಮತ್ತು ಅದೇ ಸಮಯದಲ್ಲಿ ನಮ್ಮನ್ನು ಚಿಂತನೆಗೆ ಹಚ್ಚುವ ಪ್ರೊಫೆಸರ್ ಕೃಷ್ಣೇಗೌಡರು, ತಮ್ಮ ಅನೇಕ ಅನುಭವದ ಮಾತುಗಳ ಜೊತೆ, ತಮ್ಮ ಗುರುಗಳಾದ ಡಾ ಪ್ರಭುಶಂಕರ್ ಅವರ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತ, ತೀವ್ರ ಶೋಕ ಸನ್ನಿವೇಶಗಳಲ್ಲೂ ವಿಡಂಬನಾತ್ಮಕ ಅಂಶಗಳನ್ನು

ಅರಸುತ್ತ ಅವರು ತಮ್ಮದೇ ಆದ ವೈಶಿಷ್ಟಮಯ ಹಾದಿಯನ್ನು ತುಳಿದು ಸಮಾಜದ ಸಂಪ್ರದಾಯಗಳನ್ನು ಮೆಟ್ಟಿ ನಿಂತ ಬಗೆಯನ್ನು ವಿವರಿಸಿದರು.

ಈ ಕಾರ್ಯಕ್ರಮದ ಅತ್ಯಂತ ಹೃದಯಸ್ಪರ್ಶಿ ಘಟನೆಯೆಂದರೆ, ಕರ್ನಾಟಕದ ವಿವಿಧ ಮೂಲೆಗಳಿಂದ ಬಂದ ಅಪರಂಜಿ ಹೊಸ ಲೇಖಕಿಯರು ವೇದಿಕೆಯ ಮೇಲೇರಿ ಅಪರಂಜಿಯ ಹುಟ್ಟುಹಬ್ಬಕ್ಕೆ ಅಭಿನಂದನೆಗಳನ್ನು ಸಲ್ಲಿಸಿದ ಕ್ಷಣಗಳು. ಬಹುಶಃ ಸಂಪಾದಕರೋ, ಉಪಸಂಪಾದಕರೋ ಇವರೆಲ್ಲರನ್ನೂ ಅಪರಂಜಿಗೆ ಬರೆಯುವಂತೆ ಪ್ರೋತ್ಸಾಹಿಸಿದ್ದರಿಂದ (ಅಂದಹಾಗೆ ಉಪ ಸಂಪಾದಕ ಬೇಲೂರು ರಾಮಮೂರ್ತಿಯವರು ಕಾರ್ಯಕ್ರಮದ ನಿರ್ವಹಣೆಯನ್ನು ಪುಟ್ಟ ಮೊಮ್ಮಗುವನ್ನು ತೊಡೆಯ ಮೇಲೆ ಆಡಿಸುತ್ತಲೇ ತುಂಬ ಅಚ್ಚುಕಟ್ಟಾಗಿ ನೆರವೇರಿಸಿದ್ದು ಚೆನ್ನಾಗಿತ್ತು)

ಇವರೆಲ್ಲರಿಗೂ ಸಂಪಾದಕ ಮಂಡಲಿಯವರನ್ನು ಮುಖತಃ ಭೇಟಿ ಮಾಡುವ ಅವಕಾಶ ಒದಗಿತ್ತು. ಕೇವಲ ತಮ್ಮ ಲೇಖನಗಳ ಮೂಲಕ ಮಾತ್ರ ಪರಸ್ಪರ ಪರಿಚಯವಿದ್ದ ಈ ಯುವತಿಯರು, ಒಬ್ಬರನ್ನೊಬ್ಬರು ನೇರವಾಗಿ ಭೇಟಿಮಾಡಿ ಹರಟುವಾಗ ಅವರುಗಳ ಸಂತಸ, ಉತ್ಸಾಹಗಳನ್ನು ನೋಡುವುದೇ ಕಣ್ಣಿಗೆ ಹಬ್ಬವಾಗಿತ್ತು.

ನನ್ನ ಹೃದಯ ತುಂಬಿಬಂದ ಇನ್ನೊಂದು ಸಂಗತಿಯೆಂದರೆ, ಪತ್ರಿಕೆಯ ಮುದ್ರಕರ ಮನೆಯವರನ್ನ ಹಾಗೂ ಅಕ್ಷರ ಜೋಡಣೆಯ ವ್ಯಕ್ತಿಗಳನ್ನ ವೇದಿಕೆಗೆ ಕರೆದು ಬಹು ವಾತ್ಸಲ್ಯದಿಂದ ಅವರನ್ನು ಗೌರವಿಸಿದ ಸಂದರ್ಭ. ಎಂತಹುದೇ ತೊಡಕು ಇದಿರಾದರೂ ಪತ್ರಿಕೆಯನ್ನು ಸಕಾಲಕ್ಕೆ ಓದುಗರಿಗೆ ಮುಟ್ಟಿಸುವ ಗುರಿಯನ್ನು ಹೊಂದಿದ್ದ ಇವರೆಲ್ಲಾ ತಮ್ಮ ಕರ್ತವ್ಯದ ಎಲ್ಲೆಯನ್ನು ಮೀರಿ ಶ್ರಮಿಸುತ್ತಿರುವುದು ನಿಜಕ್ಕೂ ಮೆಚ್ಚ ಬೇಕಾದ ಸಂಗತಿ.

ಒಂದು ಮಗುವನ್ನು ಬೆಳೆಸಬೇಕಾದರೆ ಒಂದು ಹಳ್ಳಿ ಅಗತ್ಯ ಎಂಬ ಇಂಗ್ಲೀಷ್ ನಾಣ್ಣುಡಿಯಿದೆ. ಮಗುವಷ್ಟೇ ಅಲ್ಲ, ಒಂದು ಪತ್ರಿಕೆಯನ್ನು ಬೆಳೆಸಲೂ ಸಹಾ ಒಂದು ಹಳ್ಳಿ ಅಗತ್ಯ ಎಂಬ ಸತ್ಯ ನನಗೆ ಅಂದು ಮನವರಿಕೆಯಾಯಿತು. ಅಪರಂಜಿಯ ನಲವತ್ತರ ಹಬ್ಬದಲ್ಲಿ ನನಗೆ ಈ ಹಳ್ಳಿಯ ಪರಿಚಯವಾದದ್ದಕ್ಕೆ ನಾನು ಆಭಾರಿ. ಕಾರ್ಯಕ್ರಮದ ನಂತರದ ಪುಷ್ಕಳವಾದ ಭೋಜನವನ್ನು ಸವಿಯುತ್ತ ನಾನು ಎಲ್ಲ ಅಭಿಮಾನಿ ಓದುಗರಂತೆ ಅಪರಂಜಿಗೆ ಸುದೀರ್ಘ ಆಯುಷ್ಯವನ್ನು ಆಶಿಸಿದೆ. ನಮ್ಮ ನ್ಯಾಚುರಲ್ ಸ್ಟುಪಿಡಿಟಿಯ ಮೇಲೆ ಅಪರಂಜಿಯ (ಚಾಳೀಸು ಇರಲಿ, ಇಲ್ಲದಿರಲಿ) ವಕ್ರದೃಷ್ಟಿ ಇಂದಿನ ದಿನಗಳಲ್ಲಿ ಅತ್ಯಗತ್ಯ ಎನ್ನಿಸುತ್ತದೆ ನನಗೆ. ■



# ಡಾ. ಶಿವರಾಮ ಕಾ(ಖಾ)ರಂತರೊಳಗೊಂದು ಬೆಲ್ಲದ ಅಚ್ಚು

**ಎಸ್. ಆರ್. ವಿಜಯಶಂಕರ**

ಬೆಳಗಿನ ಧ್ಯಾನಸ್ಥ ಹೊತ್ತಿನಲ್ಲಿ ನಾಲ್ಕಿಂದ್ರಿಯಗಳಿಂದ, ಅಂದರೆ ಕಣ್ಣು, ಮೂಗು, ನಾಲಗೆ ಹಾಗೂ ತ್ವಚೆ ಅರ್ಥಾತ್ ಅಂಗೈಗಳ ಚರ್ಮವೆಂಬ ಸ್ಪರ್ಶೇಂದ್ರಿಯಗಳಿಂದ ಬಿಸಿಯಾದ ಕಾಫಿಯನ್ನು ಅನುಭವಿಸುತ್ತಿರುವ ಹೊತ್ತಿನಲ್ಲಿ ನನ್ನ ಬಳಿಯಲ್ಲಿರುವ ಚರ ದೂರವಾಣಿ ಸದ್ದು ಮಾಡಿದರೆ ಹೆಂಡತಿಗೆ ಬಹಳ ಕೋಪ ಬರುತ್ತದೆ. ನಿಮ್ಮೆಲ್ಲರ ಮನೆಯಲ್ಲೂ ಹಾಗೆಯೇ. ಆದರೆ ನನ್ನಷ್ಟು ಧೈರ್ಯಶಾಲಿಗಳು ನೀವು ಅಲ್ಲದೇ ಇರುವುದರಿಂದ ಹೇಳದೆ ಇರಬಹುದು. ಎಷ್ಟೇ ಧೈರ್ಯವಿದ್ದರೂ, ಬೆಳಗ್ಗಿನ ಧ್ಯಾನಸ್ಥ ಕಾಫಿ ಹೊತ್ತಿನಲ್ಲಿ ಫೋನು ಬಂದರೆ ಸಾಮಾನ್ಯವಾಗಿ ನಾನು 'ಶಲ್ ಐ ಕಾಲ್ ಯು ಬಾಕ್ ಲೇಟರ್' ಅಂತೊಂದು ಮೆಸೇಜ್ ಹಾಕಿ ದಿನ ಪತ್ರಿಕೆ ಓದುವುದನ್ನು ಮುಂದುವರಿಸುತ್ತೇನೆ. ಇಲ್ಲಿ ಬರೆಯುವಾಗ ಧೈರ್ಯವಿದ್ದರೂ 'ನಿಮ್ಮದೊಂದು ದಿನದಲ್ಲಿ ಹದಿನೈದು ನಿಮಿಷವೂ ನೆಮ್ಮದಿಯಿಂದ ಇರುವುದಿಲ್ಲ' ಎಂಬ ಮನೆಯಾಕೆಯ ಮಾತಿನ ಬದಲು ಕರೆ ಮಾಡಿದ ಘನ ವ್ಯಕ್ತಿಗೆ ಒಂದು ಮೆಸೇಜ್ ಕಳುಹಿಸುವುದು ಸುಲಭ. ಹೌದೋ, ಇಲ್ಲವೋ ನೀವೇ ಹೇಳಿ.

ಆದರೆ ದಿನಾಂಕ 10–10–2023 ರಂದು ಒಂದು ವಿಚಿತ್ರವಾಯಿತು. ಬೆಳಿಗ್ಗೆ ಎರಡು ಸಲ ಫೋನು ಕಟ್ ಮಾಡಿದರೂ ಬಿಡದೆ ಮೂರನೆ ಸಲ ಫೋನು ಮಾಡಿದವ ಗೆಳೆಯ ಪೊಮ್ಮ. 'ದಾಯ್ತ ಪೊಮ್ಮಣ್ಣ ಬೊಳ್ಪುಗೆ' ಎಂದೆ. ಬೆಳಿಗ್ಗೆನೆ ಎಂತದ್ದು ನಿನ್ನದು ಅಂತ ಕೇಳಿದರೆ ಏನು ಅಂತ ಹೇಳುದು. ಇವತ್ತು ಎಂತಹ ದಿನ ಅಂತ ನಿನಗೆ ಗೊತ್ತಿಲ್ವ ಎಂದ. ಹ್ಞಾ! ಡಾ.ಶಿವರಾಮ ಕಾರಂತರ ಜನ್ಮದಿನ. ಈಗ ಏನು? ಎಲ್ಲೂ ಭಾಷಣ ಇಲ್ಲ ಎಂದೆ.

ಅಯಿಕ್ಕಾದ್ ಅತ್ ಮಾರಾಯ್ರೆ ಎಂದ. ಅದಕ್ಕಲ್ಲದಿದ್ದರೆ ಮತ್ತ್ಯಾವುದಕ್ಕೆ ಎಂದೆ. ಈಗ ಡಾ.ಕಾರಂತರನ್ನು ಅನೇಕರು ಬಹಳ ಕೋಪದ 'ಖಾರಂತರು' ಎನ್ನುತ್ತಾರಲ್ಲ. ಅವರ ಕೋಪದ ಖಾರ ಇಲ್ಲದ ಹಾಸ್ಯದ ಘಟನೆಗಳು ಇಲ್ಲವಾ? ಎಂದ. ಇಲ್ಲದೆ ಏನು? ಹಾಸ್ಯ ಲೇಖನಗಳನ್ನೂ ಪುಸ್ತಕಗಳನ್ನೂ ಬರೆದಿದ್ದಾರೆ. ಹಾಸ್ಯಕ್ಕೆ ಮೀಸಲಾದ ಅಪರಂಜಿ ಪತ್ರಿಕೆಗೂ ಬರೆದಿದ್ದಾರೆ. ಲಘುವಾಗಿ ನಗಬಹುದಾದ ಹಲವಾರು ಪ್ರಸಂಗಗಳಿವೆ ಎಂದೆ. ಒಂದೆರಡಾದರೂ ಹೇಳು ಮಾರಾಯ ಎಂದ. ನಾನು ಮನೆಯ ಮೌನ ಶಾಸನವನ್ನು ಮುರಿದು ಕೆಲವು ಘಟನೆಗಳನ್ನು ಪೊಮ್ಮನಿಗೆ ನೆನಪಿಸಿದೆ. ಅಪರೂಪಕ್ಕೆ ಅದನ್ನು ಅವಳಷ್ಟಕ್ಕೆ ಕೇಳಿದ ನನ್ನ ಪತ್ನಿ, ಯಾರಿಗೂ ಬೇಡದ ಸಾಹಿತ್ಯ ವಿಮರ್ಶೆ ಬರಿತೀರಾ. ನಲವತ್ತು ತುಂಬಿದ ಅಪರಂಜಿಗೆ 121 ತುಂಬಿದ ಕಾರಂತರ ಬಗ್ಗೆ ಬರೀರಿ. ನೀವು ಪೊಮ್ಮಣ್ಣಂಗೆ ಹೇಳಿದ್ದನ್ನೇ ಬರೆದರೆ, ಖಾರದ ಕಾರಂತರೊಳಗಿರುವ ಬೆಲ್ಲದ ಅಚ್ಚಿನ ರುಚಿ ತಿಳಿಯುತ್ತದೆ ಎಂದಳು. ಸರಿ. ಹೆಂಡತಿ ಹೇಳಿದ ಮೇಲೆ ಅದಕ್ಕೆ ಎಪೀಲ್ ಎಂಬುದೇ ಇಲ್ಲ ಎಂದು ಮುಂದಿನ ಘಟನೆಗಳನ್ನು ಬರೆದಿದ್ದೇನೆ.

* * *

ನನ್ನ ತಂದೆಯವರು ಕಾರಂತರ ಅಭಿಮಾನಿ ಕಿರಿಯ ಮಿತ್ರರು. ಕಾರಂತರಿಗಿಂತ 30 ವರುಷ ಚಿಕ್ಕವರು. ಕಾರಂತರು ಇದ್ದ ಪುತ್ತೂರಿನಲ್ಲಿ ವಕೀಲ ವೃತ್ತಿ ಮಾಡುತ್ತಿದ್ದರು.

ಕಾರಂತರು ಪುತ್ತೂರಿನ ಬಾಲವನದ ತಮ್ಮ ನಿವಾಸ ಬಿಟ್ಟು ಸಾಲಿಗ್ರಾಮಕ್ಕೆ ತೆರಳಿ ಅಲ್ಲಿ ನೆಲೆ ನಿಂತು ನಾಲ್ಕಾರು ತಿಂಗಳುಗಳ ಬಳಿಕ ಕಾರಂತರನ್ನು ಒಮ್ಮೆ ನೋಡಿ ಸ್ವಲ್ಪ ಮಾತನಾಡಿ ಬರಬೇಕೆಂದು ತಂದೆಯವರಿಗೆ ಆಸೆಯಾಯಿತು.

ಸುಮಾರು 50 ವರುಷಗಳ ಹಿಂದಿನ ಕತೆ. ಬೆಳಿಗ್ಗೆ ಬಸ್ಸಲ್ಲಿ ಹೋಗಿ, ಕಂಡು ಬೇಕಾದಷ್ಟು ಹೊತ್ತು ಮಾತಾಡಿ ಅದೇ ದಿನ ಸಂಜೆ ಹಿಂತಿರುಗಲು ಬಸ್ಸುಗಳ ಅನುಕೂಲ ಆಗ ಇರಲಿಲ್ಲ. ತಂದೆಯವರು, ಕಂಡು ಮಾತನಾಡಿ ಬರುವ ಆಸೆ ವ್ಯಕ್ತಪಡಿಸಿ ಬರೆದ ಪತ್ರದಲ್ಲಿ 'ಬಂದಾಗ ಅಲ್ಲಿ ಎಲ್ಲಿ ನಿಲ್ಲಬಹುದು' ಎಂದು ಕೇಳಿದರು. ನಮ್ಮ ಊರಲ್ಲಿ ಎಲ್ಲಿ ನಿಲ್ಲುವುದು ಎಂದರೆ ಎಲ್ಲಿ ಉಳಿದುಕೊಳ್ಳುವುದು ಎಂಬುದು ಒಂದು ಅರ್ಥ. ತಂದೆಯವರ ಮನಸ್ಸಲ್ಲಿದ್ದು ಹತ್ತಿರದಲ್ಲಿರುವ ಲಾಡ್ಜ್ ಗಳ ಬಗ್ಗೆ ತಿಳಿದುಕೊಳ್ಳುವುದು. ಆಗ ಅದು ಇಂಟರ್ನೆಟ್‌ನಲ್ಲಿ ಹುಡುಕಬಹುದಾದ ಕಾಲವಾಗಿರಲಿಲ್ಲ.

ಮರು ಟಪ್ಪಾಲಿಗೆ ಕಾರಂತರ ಪತ್ರ ಬಂತು. "ಪ್ರಿಯ ರಾಮಭಟ್ಟರೆ, ನೀವು ಬರುವ ಅಭಿಪ್ರಾಯ ತಿಳಿದು ಸಂತೋಷವಾಯಿತು. ನೀವು ಬಂದಾಗ ನಿಲ್ಲುವುದು ಬೇಡ. ಮನೆಯಲ್ಲಿ ಕುಳಿತುಕೊಳ್ಳಲು ಅನುಕೂಲವಿರುವ ಸೋಫಾ, ಬೆಂಚು, ಕುರ್ಚಿಗಳಿವೆ. ರಾತ್ರೆ ನೀವು ಆರಾಮವಾಗಿ ನಮ್ಮ ಮನೆಯಲ್ಲಿ ಉಳಿದುಕೊಳ್ಳಬಹುದು. ಬರುವುದಕ್ಕೆ ನಾಲ್ಕು ದಿನ ಮೊದಲು ಪತ್ರ ಬರೆದು ನಾನು ಊರಲ್ಲಿರುವುದನ್ನು ಖಾತ್ರಿ ಮಾಡಿಕೊಳ್ಳಿ".

ಮಡಿಕೇರಿ ಸಾಹಿತ್ಯ ಸಮ್ಮೇಳನಕ್ಕೆ ಕಾರಂತರು ಹೋಗುವ ವಿಚಾರ ಪತ್ರಿಕೆಗಳಲ್ಲಿ ಬಂದಿತ್ತು. ನಮ್ಮ ಮನೆ ಆಗ ಪುತ್ತೂರಿನಿಂದ ಸಂಪಾಜೆಗೆ ಶಿಫ್ಟ್ ಆಗಿತ್ತು. ತಂದೆಯವರು ಕಾರಂತರಿಗೊಂದು ಪತ್ರ ಬರೆದು ಹೋಗುವ ದಾರಿಯಲ್ಲಿ ಸಂಪಾಜೆಯ ನಮ್ಮ ಮನೆಗೆ ಬಂದು ಮಧ್ಯಾಹ್ನ ಊಟ ಮಾಡಿ, ಸ್ವಲ್ಪ ವಿಶ್ರಾಂತಿ ಪಡೆದು ಮಡಿಕೇರಿಗೆ ಹೋಗುವಂತೆ ಆಹ್ವಾನಿಸಿದರು. ಆಹ್ವಾನ ಸ್ವೀಕರಿಸಿ ಕಾರಂತರಿಂದ ಪತ್ರ ಬಂತು. ತಕ್ಷಣ ತಂದೆಯವರು, ನಮ್ಮ ಮನೆ ಇರುವ ಅರಮನೆ ತೋಟದ ಹಿಂದೆ ಇದ್ದ ದಾರಿ ಈಗ ತುಸು ಬದಲಾಗಿದೆ. ಅದು ಕಾರಂತರು ಬಲ್ಲ ಪ್ರದೇಶವಾದರೂ ತೊಂದರೆ ಆಗಬಾರದೆಂದು ಸಂಪಾಜೆ ಫಾರೆಸ್ಟ್ ಗೇಟಿನ ಬಳಿ ಕಾದು ನಿಂತಿರುವುದಾಗಿ ಪತ್ರ ಬರೆದರು.

ಮರು ಅಂಚೆಗೆ ಕಾರಂತರಿಂದ ಒಂದು ಪೋಸ್ಟ್ ಕಾರ್ಡು ಬಂತು. ಅದರಲ್ಲಿ ಅವರು, ಸಂಪಾಜೆ ಗೇಟಿನ ಬಳಿ ಕಾದು ನಿಂತಿರುವುದು ಬೇಡವೆಂದೂ, ಅವರು ಅಲ್ಲಿಗೆ ತಲುಪುವ ವರೆಗೆ ಕುಳಿತಿರಬಹುದೆಂದೂ ಸೂಚಿಸಿ – ಬೆಳಿಗ್ಗೆ ಏಳು ಗಂಟೆಯ ಬಳಿಕ ಸಾಲಿಗ್ರಾಮದಿಂದ ಹೊರಟು ಸುಮಾರು 11:30 ರ ಬಳಿಕ ಸಂಪಾಜೆ ತಲುಪಬಹುದು. ಗೇಟಿನಿಂದ ಜೊತೆಯಾಗಿ ಅವರ ಕಾರಿನಲ್ಲಿ ಮನೆಗೆ ಹೋಗೋಣ ಎಂದು ಬರೆದಿದ್ದರು. ಸ್ಥಳೀಯ ಬಳಕೆಯಲ್ಲಿರುವ 'ನಿಂತುಕೊಳ್ಳು' ಪದದ ಶ್ಲೇಷಾರ್ಥವನ್ನು ಬಳಸಿ ಕಾರಂತರು ಲಘು ಹಾಸ್ಯದಿಂದ ಅಣಕವಾಡಿದ್ದರು. ಒಂದು ಶಬ್ದಕ್ಕೆ ಸಾಂದರ್ಭಿಕವಾದ ಹಲವು ಅರ್ಥಗಳಿರುತ್ತವೆ. ಅದರೊಡನೆ ಆಟವಾಡುತ್ತ ಹಾಸ್ಯದ ಸಣ್ಣ ಎಳೆ ಎಬ್ಬಿಸುವುದು ಕಾರಂತಿಗೆ ಯಾವಾಗಲೂ ಪ್ರಿಯ ಕೆಲಸವಾಗಿತ್ತು. ಅವರ " ಗ್ನಾನ" ಕೃತಿ ಓದಿದವರಿಗೆ ಅದು ತಿಳಿದಿರುತ್ತದೆ.

* * *

ನಾನು 1988 ರಲ್ಲಿ ಬೆಂಗಳೂರಿಗೆ ಬಂದ ಬಳಿಕ, ಕಾರಂತರು ನಗರಕ್ಕೆ ಬಂದಾಗ ಒಮ್ಮೆ ಅವರನ್ನು ಭೇಟಿ ಮಾಡಿ, ನಮಸ್ಕಾರ ಹೇಳಿ ಅದು ಇದು ಸ್ವಲ್ಪ ಮಾತನಾಡಿ ಬರುವ ಕ್ರಮ ಇತ್ತು. ಅವರನೊಮ್ಮೆ ಮಲ್ಲೇಶ್ವರದ ಪರಿಚಿತರೊಬ್ಬರು ಮಧ್ಯಾಹ್ನ ಊಟಕ್ಕೆ ಆಹ್ವಾನಿಸಿದ್ದರು. ಆಪೀಸಿನಿಂದ ಲಂಚ್ ಬ್ರೇಕ್ ಸಮಯದಲ್ಲಿ ಅವರನ್ನು ಕಾಣಲು ಹೋದೆ.

ಹೋದ ಮನೆಯಲ್ಲಿ ಊಟಕ್ಕೆ ಸಿದ್ಧತೆ ನಡೆಯುತ್ತಿತ್ತು. ಮನೆಯವರು 'ನೀವು ಊಟ ಮಾಡುತ್ತೀರೋ' ಎಂದು ಕೇಳಿದರು. ನಾನು 'ಆಯಿತು' ಎಂದೆ. ತಕ್ಷಣ ಕಾರಂತರು ಮನೆಯವರೊಡನೆ, ಅವನು, ಮಂಗಳೂರು ಕಡೆಯವನು. 'ಆಯಿತು ' ಎಂದರೆ ಏನೆಂದು ಕೇಳಿ ಎಂದು ನಕ್ಕರು. ಆಮೇಲೆ ನನ್ನಲ್ಲಿ ನೀವು ಮಂಗಳೂರು ಕಡೆ 'ಆಯಿತು' ಎಂದು ಹೇಳಿ ಇವರು ಬೆಂಗಳೂರು ಕಡೆ 'ಆಯಿತು' ಎಂದು ಅರ್ಥ ಮಾಡಿಕೊಂಡರೆ  ಉಪವಾಸ ಪ್ರಸಂಗವಾಗುತ್ತದೆ ಎಂದು ನಕ್ಕರು. ಮಂಗಳೂರು ಕಡೆ 'ಆಯಿತು' ಎಂದರೆ ಆಗಬಹುದು ಎಂಬ ಅರ್ಥವೂ ಇದೆ. ಬೆಂಗಳೂರಲ್ಲಿ ಊಟ ಮಾಡುತ್ತೀರಾ ಎಂದಾಗ 'ಆಯಿತು' ಎಂದರೆ, ಊಟ ಮಾಡಿ ಆಗಿದೆ ಎಂದೇ ಅರ್ಥ.

ಇನ್ನೊಂದು ಸಂದರ್ಭ. ಕಾರಂತರು ಹಲವು ಪದಗಳ ಅರ್ಥ ಸೂಕ್ಷ್ಮಗಳನ್ನು ಹೇಳುವ ಲಹರಿಯಲ್ಲಿದ್ದರು. ಬೆರಳೆಣಿಕೆಯ ಮಂದಿ ಆಪ್ತರು ಇದ್ದರು. ನನಗೂ ಅಲ್ಲಿ ನುಸುಳಿಕೊಳ್ಳು ಅವಕಾಶ ಸಿಕ್ಕಿತ್ತು. ಕಾರಂತರು 'ಅಲ್ಪ' ಎಂದರೆ ತುಂಬಾ ಎಂಬ ಅರ್ಥವಿದೆ ಗೊತ್ತೆ ? ಎಂದರು. ಕಾರಂತರು ಏನು ಹೇಳುತ್ತಿದ್ದಾರೆ ಎಂದು ಉಳಿದವರು ಮುಖ ಮುಖ ನೋಡಿಕೊಂಡರು. ತಕ್ಷಣ ಕಾರಂತರು, ಬೇಕಾದರೆ ಹವ್ಯಕ ಭಾಷೆ ಬಲ್ಲವರನ್ನು ಕೇಳಿ ಎಂದು ನನ್ನ ಮುಖ ನೋಡಿದರು. 'ಅವ ಅಲ್ಪ ಹೋಳಿಗೆ ತಿಂತ' ಅಂತ ಹವ್ಯಕರು ಹೇಳಿದರೆ ತುಂಬಾ ಹೋಳಿಗೆ ತಿನ್ನುತ್ತಾನೆ ಎಂದು ಅರ್ಥ ಅಲ್ಲವೇ? ಎಂದು ನನ್ನನ್ನು  ನೋಡಿ ನಕ್ಕರು. ನಾನಾಗ ಹೌದು ಸರ್. ಹವ್ಯಕರಲ್ಲಿ ಅಲ್ಪ ತಿಂತ ಎಂದರೆ ತುಂಬಾ ತಿನ್ನುತ್ತಾನೆ ಎಂದೇ ಅರ್ಥ. ನಾನು ಸಾಂದರ್ಭಿಕವಾಗಿ, ನನ್ನ ಸೋದರ ಅತ್ತೆ ಹೇಳುತ್ತಿದ್ದ ಒಂದು ವಾಕ್ಯವನ್ನು ನೆನಪಿಸಿಕೊಂಡೆ. ಮಾವಿನ ಹಣ್ಣಿನ ಸೀಸನ್ ನಲ್ಲಿ ಅವರು ಯಾವಾಗಲೂ ಮಕ್ಕಳಿಗೆ "ಇನ್ನೂ ಅಲ್ಪ ಮಾವಿನ ಹಣ್ಣು ತಿಂದು ಜ್ವರವೋ, ಕೆಮ್ಮೋ ಹಿಡಿಸಿಕೊಳ್ಳೆಡಿ " ಎನ್ನುತ್ತಿದ್ದರು.

*            *            *

ಹಾಗೆಂದು ಕೆಲವೊಮ್ಮೆ ಕಾರಂತರ ಹಾಸ್ಯ ನಿರೀಕ್ಷಿತ ಪ್ರಭಾವ ಬೀರದೆ ವಿರುದ್ಧ ಪರಿಣಾಮಗಳನ್ನು  ಉಂಟು ಮಾಡಿದ್ದೂ ಇದೆ ಎಂದು ದ.ಬಾ. ಕುಲಕರ್ಣಿಯವರು ಬರೆದಿದ್ದಾರೆ. ಭಾಷಣಕ್ಕೆ ಹೋದಲ್ಲಿ ಒಬ್ಬರನ್ನು ಇವರು ನಮ್ಮ 'ಕೋಶಾಧ್ಯಕ್ಷರು' ಎಂದಾಗ ಕಾರಂತರು ನೀವು 'ಶೋಕಾಧ್ಯಕ್ಷರೋ' ಎಂದರಂತೆ. ಇನ್ನೊಮ್ಮೆ ಒಬ್ಬರನ್ನು ಇವರು ಮಾನ್ಯ ಶ್ರೀ ಹಲಸಂಗಿಯವರು ಎಂದು ಪರಿಚಯಿಸಿದಾಗ 'ನೀವು ಹೊಲಸಂಗಿಯವರೊ' ಎಂದು ಕಾರಂತರು ಮುಖ ಅರಳಿಸಿದರಂತೆ. ಆ ಬಳಿಕ ಅವರುಗಳು ಕಾರಂತರು ನಯವರಿಯದ ಪ್ರಾಣಿ ಎಂದು ಕೊಂಡರೆಂದು ದ.ಬಾ.ಕುಲಕರ್ಣಿಯವರು ಅವರ ಕೃತಿ 'ಹಕ್ಕಿ ನೋಟ'ದಲ್ಲಿ ದಾಖಲಿಸಿದ್ದಾರೆ. ಮೊದಲೇ ಹೇಳಿದಂತೆ ಕಾರಂತರ ಹಾಸ್ಯ ಕೃತಿ 'ಗ್ನಾನ' (ಜ್ಞ ಉಚ್ಚಾರದಲ್ಲಿ ಗ್ನ ಆಗುವ

ಪಜೀತಿ ಬಗ್ಗೆ) ಓದಿದವರಿಗೆ ಹಾಗೂ ಅವರ ಸಿರಿಗನ್ನಡ ಅರ್ಥಕೋಶವನ್ನು ಗಮನಿಸಿದವರಿಗೆ, ಕಾರಂತರಿಗೆ ಪದಗಳ ಶ್ಲೇಷಾರ್ಥಗಳಲ್ಲಿ ಇರುವ ವಿಶೇಷ ಆಸಕ್ತಿ ತಿಳಿದೇ ಇರುತ್ತದೆ.

* * *

ಹಾಸ್ಯದಲ್ಲಿ ಹಲವು ಸ್ತರಗಳಿರುತ್ತವೆ. ಬಹಳ ಉನ್ನತ ಮಟ್ಟದ ಹಾಸ್ಯ ನಗುವಿನ ಅಟ್ಟಹಾಸದ ಪ್ರತಿಕ್ರಿಯೆಗಳನ್ನು ಸೃಷ್ಟಿಸುವುದಿಲ್ಲ. ಅಲ್ಲಿ ನಗು ಮುಗುಳಾಗಿ ಅರಳುತ್ತವೆ. ಶೃಂಗಾರದ ಹಾಸ್ಯದಲ್ಲಂತೂ ಅನೇಕ ಸಲ ನಗು ನಾಚಿಕೆಯ ರೂಪ ಪಡೆಯುತ್ತದೆ – ಕಾಳಿದಾಸನ ಶಾಕುಂತಲೆ ಕಾಡಿನಲ್ಲಿ ದುಷ್ಯಂತ ಲಲಿತ ಹಾಸ್ಯಕ್ಕೆ ಪ್ರತಿಕ್ರಿಯಿಸಿದ ಹಾಗೆ. ಕಾರಂತರಿಗೆ ಬದುಕಿನಲ್ಲಿ ಕಾರುಣ್ಯ, ಅನುಕಂಪಗಳು ಬಹಳ ದೊಡ್ಡ ಮೌಲ್ಯ. ಅದರ ಮಹತ್ವವನ್ನು ಅರಿಯದವರಿಗೆ ಕಾರಂತರ ಸಾಹಿತ್ಯವನ್ನು ತಿಳಿಯುವುದೂ ಸಾಧ್ಯವಿಲ್ಲ. ಅವರಿಗದು ಮಾನವತ್ವದ ಮಾಪಕ ಬಿಂದು. ಹಾಸ್ಯ, ಸಹನೆ, ದಯೆ, ಪರರ ನಂಬಿಕೆಗಳ ಬಗೆಗಿನ ಗೌರವ, ಪ್ರಾಮಾಣಿಕತೆ, ಇವೆಲ್ಲಾ ಕಾರಂತರ ಮಾನವೀಯ ಮುಖಗಳಲ್ಲಿ ಕೆಲವು. ನಿಜವಾಗಿ ಅವರದು ಹುಚ್ಚು ಮನಸ್ಸಿನ ಹತ್ತು ಮುಖಗಳಲ್ಲ. ಅವು ನೂರು ಮುಖಗಳು. ಅಥವಾ ನೂರಾರು ಮುಖಗಳು. ಅದರಲ್ಲಿ "ಕಂಡವರಿಗಲ್ಲ, ಕಂಡವರಿಗಷ್ಟೆ ತಿಳಿಯುವುದವರ ಹಾಸ್ಯದಾ ಮುಖ."



ಶರಲೇಖನ ಪುನರಾಗಮನ

# ಚಿತ್ರಾಂಗದಾ ಇಂದ್ರಜಿತ್ ಪ್ರಕರಣ

ವತ್ಸನ

ಕೊನೆಗೂ ಆಸಾಮಿ ಬೆಂಗಳೂರಿಗೆ ಹಿಂತಿರುಗಿದ. ಯಾವ ಆಸಾಮಿ ? ಎಲ್ಲಿಂದ ಹಿಂತಿರುಗಿದ ಅಂತ ಕೇಳಿದ್ರಾ? ಇನ್ಯಾರ್ರೀ? ನಿಮ್ಮೆಲ್ಲರ ಪರಿಚಿತ ಪತ್ತೇದಾರ ಶರಲೇಖನ ಬಗ್ಗೇನೇ ನಾನು ಹೇಳ್ತಿರೋದು. ಮೂರು ತಿಂಗಳ ಹಿಂದೆ ಕೆಲಸದ ಮೇಲೆ ದೆಹಲಿಗೆ ಹೋದವನು, ಅಲ್ಲೇ ನಿಂತ್ಬಿಡೋದೇ? " ದೆಹಲಿಯಲ್ಲಿನ ಕೆಲಸವೆಲ್ಲಾ ಸಾಂಗವಾಗಿ ನೆರವೇರಿತೇ?" ಅಂತ ಅವನನ್ನ ಪ್ರಶ್ನಿಸಿದೆ. " ನನ್ನ ಮಟ್ಟಿಗೆ ಹೇಳೋದಾದ್ರೆ ಸಾಂಗವಾಗಿಯೇ ನಡೀತು. ತಪ್ಪು ಮಾಡಿದೋರೇನೋ ಸಿಕ್ಕಿಬಿದ್ರು. ಆದ್ರೆ ಇದು ಕಳ್ಳರನ್ನ ಕಳ್ಳರಿಗೇ ಹಿಡಿದುಕೊಟ್ಟ ಬಾಬ್ತು. ಎಲ್ಲ ಬೇಲ್ ತಗೊಂಡು ರಾಜಾರೋಷವಾಗೇ ಓಡಾಡ್ತಾ ಇದಾರೆ. ನಾನೂ ರಾಜಾರೋಷವಾಗಿ ಹಿಂತಿರುಗಿ ಬಂದೆ" ಎಂದ ಶರಲೇಖ. ಆ ಸಂಜೆ ನಾವು ವರ್ಲ್ಡ್ ಕಪ್ ನಲ್ಲಿ ಇಂಡಿಯಾ ಬಾಂಗ್ಲಾ ಮ್ಯಾಚಿನಲ್ಲಿ ನಮ್ಮ ವಿರಾಟ್ ಸೆಂಚುರಿ ಬಾರಿಸಿದ್ನಲ್ಲ, ಆ ಮ್ಯಾಚನ್ನ ನೋಡ್ತಾ ಕೂತಿದ್ದೆವು. ಒಮ್ಮೆಲ್ಲೇ ಶರಲೇಖನ ಮೊಬೈಲ್ ರಿಂಗಾಯಿತು. ಶರಲೇಖ ಫೋನಿನಲ್ಲಿ ಮಾತಾಡೋ ವೈಖರೀನೇ ವಿಚಿತ್ರ. ಮಾತುಕತೆಯೆಲ್ಲಾ ಆ ಬದಿಯಿಂದಾನೆ. ಇವನು ಹೂಂ, ಇಲ್ಲ, ಹೌದುಗಳಲ್ಲೇ ಸಂಭಾಷಣೆ ಮುಗಿಸಿಬಿಡ್ತಾನೆ. ಈಗಲೂ ಹಾಗೇ ಆಯ್ತು. ಅವನು ಮಾತು ಮುಗಿಸಿದ ಮೇಲೆ ನಾನು ಅವನೆಡೆ ಪ್ರಶ್ನಾರ್ಥಕವಾಗಿ ಹುಬ್ಬೇರಿಸಿದೆ.

"ದೆಹಲಿಯಿಂದ ಬಂದ ಕಾಲ್. ಸೆಕ್ವೇರಾ ರಕ್ಷಣಾ ಸಚಿವಾಲಯದಿಂದ ಮಾಡಿದ್ದ. ಅವರಿಗೆ ನನ್ನ ಸಹಾಯ ತುರ್ತಾಗಿ ಬೇಕಂತೆ. ನಾಳೆ ಬೆಳಗ್ಗೆ ಆರು ಘಂಟೆಗೆ ಇನ್ನೋವಾ ಕಳಿಸ್ತಾರೆ. ಬೆಳಗ್ಗೆ ಬೇಗ ಎದ್ದು ರೆಡಿಯಾಗಬೇಕು. " ಎಂದಷ್ಟೇ ಹೇಳಿ ಅವ ಸುಮ್ಮನಾದ. ಇನ್ನೋವಾದಲ್ಲಿ ದೆಹಲಿಗೆ ಹೋಗುಕ್ಕೆ ಮೂರು ದಿನ ಆಗುತ್ತಲ್ಲೋ ಅಂತ ನಾನು ಕೇಳಲಿಲ್ಲ. ಸುಮ್ಮನೆ ವಿರಾಟ್ ರಾಹುಲ್ ಬ್ಯಾಟಿಂಗ್ ನೋಡ್ತಾ ಕೂತೆ.

ನಮ್ಮ ವಾಹನ ಬೆಂಗಳೂರು ಮೈಸೂರು ರಾಜಪಥವನ್ನು ಹಿಡಿದ ಮೇಲೆ ಶರಲೇಖನೇ ಮಾತು ಪ್ರಾರಂಭಿಸಿದ. "ನಿನ್ನ ಸಂಜೆ ಸೆಕ್ವೇರಾ ಇಂದಿನ ಕಾರ್ಯಕ್ರಮದ ಬಗ್ಗೆ ಏನೂ ಹೇಳಲಿಲ್ಲ. ಹಾಗೆಲ್ಲಾ ಅವರು ಓಪನ್ನಾಗಿ ದೂರವಾಣಿಲಿ ಗೌಪ್ಯ ವಿಷಯಗಳನ್ನು ಮಾತನಾಡುವುದು ನಿಷಿದ್ಧ. ಹಾಗಾಗಿ ನಿನ್ನ ಸಂಜೆ ನಿನಗೆ ಯಾವ ವಿವರಗಳನ್ನೂ ತಿಳಿಸುವುದಕ್ಕಾಗಲಿಲ್ಲ. ಮಾತಾಡಿದ ನಂತರ ಕಳಿಸಿದ ಎನ್‌ಕ್ರಿಪ್ಟೆಡ್ ಮೆಸೇಜಿನಿಂದ ವಿವರಗಳು ತಿಳಿದವು. ಈಗ ನಾವು ಹೋಗ್ತಿರೋದು ಕಬಿನಿ ಹತ್ರ ಇರೋ ಒಂದು ಅತಿ ಗೋಪ್ಯ ರಕ್ಷಣಾ ಸಂಶೋಧನಾಲಯಕ್ಕೆ. ನಾನು ದೆಹಲಿಗೆ ಹೋಗಿದ್ದಾಗ ಒಮ್ಮೆ ನಿನ್ನ ಆಧಾರ್, ಪ್ಯಾನ್ ಕೇಳಿದ್ದೆ. ನೆನಪಿದೆಯೇ?"

"ಹೌದು ನೆನಪಿದೆ." "ಅದು ನಿನ್ನ ಪರವಾಗಿ ಸೆಕ್ಯೂರಿಟಿ ಕ್ಲಿಯರೆನ್ಸ್ ಪಡೆಯೋಕ್ಕೆ ಬೇಕಾಗಿತ್ತು. ನಾವು ಹೋಗ್ತಿರೋದು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಹಬ್ ಅಂತ ರಕ್ಷಣಾ ಸಚಿವಾಲಯದ ನೇರ ಸುಪರ್ದಿನಲ್ಲಿರೋ ಒಂದು ಸಂಸ್ಥೆಗೆ. ಹಿಂದೊಮ್ಮೆ ಗುಡೇಮಾರನ ಹಳ್ಳಿ ಹತ್ತಿರದ ಡೀಪ್ ಮೈಂಡ್ ಸ್ಥಾವರಕ್ಕೆ ಹೋಗಿ ರೋಬೋಟ್ ಗಳೊಂದಿಗೆ ಸಂವಹನ ನಡೆಸಿದ್ದವಲ್ಲ. ಆ ಅನುಭವದಿಂದಾಗಿ ಈಗ ರಕ್ಷಣಾ ಇಲಾಖೆ

ನನ್ನನ್ನ ಕರೆಸಿದೆ. "

ನಾವು ಮೈಸೂರಿನ ರಿಂಗ್ ರೋಡ್ ಬಳಸಿ ಹೆಗ್ಗಡದೇವನ ಕೋಟೆ ಹ್ಯಾಂಡ್ ಪೋಸ್ಟ್ ಬಳಿ ಬಂದಾಗ ನನಗೆ ಮಾಸ್ತಿಯವರ ಕಾಕನ ಕೋಟೆ ನೆನಪಿಗೆ ಬಂತು. ಲಕ್ಷ್ಮೀಪುರ, ಅಂತರ ಸಂತೆ ದಾಟಿ ಮುಂದುವರಿದೆವು. ಸ್ವಲ್ಪ ದೂರದಲ್ಲೇ ಬಲಗಡೆ ಒಂದು ದಟ್ಟವಾದ ಮಾವಿನ ತೋಪಿನ ಮಧ್ಯೆ ಒಂದು ಕಾಂಕ್ರೀಟ್ ಹಾದಿ ಕಣ್ಣಿಗೆ ಬಿತ್ತು. ನಮ್ಮ ಚಾಲಕ ವಾಹನವನ್ನು ಅದರಲ್ಲಿ ತಿರುಗಿಸಿದ. ಮರಗಳ ದಟ್ಟ ನೆರಳಿನಲ್ಲಿ ಸುಮಾರು ಅರ್ಧ ಕಿಲೋಮೀಟರ್ ಪಯಣಿಸಿದ ನಂತರ ಒಂದು ಬೃಹದಾಕರವಾದ ಗೇಟ್ ನಮಗೆದುರಾಯಿತು. ಚಾಲಕ ವಾಹನ ನಿಲ್ಲಿಸಿ ನಮ್ಮಿಬ್ಬರನ್ನು ಗೇಟಿನ ಬದಿಯ ಒಂದು ಪುಟ್ಟ ಕೊಠಡಿಗೆ ಕರೆದೊಯ್ದ. ಅಲ್ಲಿದ ತರುಣ ಅಧಿಕಾರಿ ಬಹಳ ವಿನಯದಿಂದ ನಮ್ಮನ್ನು ಸ್ವಾಗತಿಸಿ ನಮ್ಮ ಬೆರಳಚ್ಚು ಹಾಗೂ ಕಣ್ಣುಗಳ ಚಿತ್ರವನ್ನು ಪಡೆದು , ನಾವು ನಾವೇ ಅಂತ ಖಾತರಿಪಡಿಸಿಕೊಂಡು, ಯಾರಿಗೋ ಫೋನ್ ಮಾಡಿದ. ಕೆಲವೇ ನಿಮಿಷಗಳಲ್ಲಿ ಒಂದು ಇಲೆಕ್ಟ್ರಿಕ್ ಬಗ್ಗಿ ಬಂದು ನಿಂತಿತು. ಅದರ ಚಾಲಕಿ ," ನಾನು ಚಿತ್ರಾಂಗದ. ನೀವು ಚಿತ್ರಾ ಅಂತ ಕರೆಯಬಹುದು ನನ್ನ. ಬನ್ನಿ. ಈ ಬಗ್ಗಿಯಲ್ಲಿ ಕೂಡಿ. ನಮ್ಮ ಕೇಂದ್ರಕ್ಕೆ ಕರೆದೊಯ್ಯುವೆ" ಅಂತ ಬಹು ಸೌಜನ್ಯದಿಂದ ಹೇಳಿ ನಮ್ಮನ್ನು ಬಗ್ಗಿಯಲ್ಲಿ ಕುಳ್ಳಿರಿಸಿದಳು. ಗುಡೇಮಾರನ ಹಳ್ಳಿಯ ಗೀತಾಂಜಲಿಯನ್ನು ನೋಡಿದ್ದ ನನಗೆ ಈ ಚಿತ್ರಾಂಗದ ಕೃತಕ ತರುಣಿಯೋ ಅಥವಾ ಅಸಲಿ ಯುವತಿಯೋ ಎಂಬ ಸಂಶಯ ಬಂದದ್ದು ಸಹಜವೇ. ಕ್ಯೂರಿಯಾಸಿಟಿ ಕಿಲ್ಡ್ ದ ಕ್ಯಾಟ್ ಎಂಬ ಗಾದೆ ನೆನಪಿಗೆ ಬಂದು ಸುಮ್ಮನಾದೆ

ತುಂಬಾ ಉತ್ತಮ ಅಭಿರುಚಿಯ ಆರ್ಕಿಟೆಕ್ಚರ್ ಬಳಸಿ ನಿರ್ಮಿಸಿದ್ದ ಎ.ಐ. ಹಬ್ ನ ಮುಂದಿನ ಮೆಟ್ಟಿಲಿನ ಮೇಲೆ ಒಬ್ಬ ತರುಣ ನಿಂತಿದ್ದ. "ನಾನು ಚಿರಂಜೀವಿ. ಇಲ್ಲಿನ ಮುಖ್ಯಸ್ಥ. ನಿಮ್ಮಿಬ್ಬರಿಗೂ ನಮ್ಮ ಸಂಸ್ಥೆಗೆ ಸ್ವಾಗತ" ಎಂದು ಹೇಳಿ ಕೈ ಮುಗಿದು ನಮ್ಮನ್ನು ಒಳಕ್ಕೆ ಕರೆದೊಯ್ದ. ಒಳಗಿನ ಕಾನ್ಫರೆನ್ಸ್ ಹಾಲ್ ಚಿಕ್ಕದಾಗಿ ಅಚ್ಚುಕಟ್ಟಾಗಿತ್ತು. ಹಸಿರು ಹಾಸಿನ ವಿಶಾಲವಾದ ಮೇಜಿನ ಸುತ್ತ ಮೆತ್ತೆಗಳನ್ನು ಅಳವಡಿಸಿದ್ದ ಕುರ್ಚಿಗಳು. ಮೇಜಿನ ಮೇಲೆ ಕುರ್ಚಿಗೊಂದು ಲ್ಯಾಪ್‌ಟಾಪ್. ಬಲತುದಿಯ ಗೋಡೆಯ ಮೇಲೆ ಒಂದು ದೊಡ್ಡ ಡಿಜಿಟಲ್ ಪರದೆ. ಶರಲೇಖ ಮತ್ತು ನಾನು ಮೇಜಿನ ಒಂದು ಬದಿಯಲ್ಲಿ ಕುಳಿತೆವು. ನಮಗೆ ಇದಿರಾಗಿ ಇಬ್ಬರು ತರುಣರು ಬಂದು ಕುಳಿತರು. ಚಿರಂಜೀವಿ ಡಿಜಿಟಲ್ ಪರದೆಯ ಪಕ್ಕದಲ್ಲಿದ್ದ ಕುರ್ಚಿಯನ್ನಲಂಕರಿಸಿದ. ಅಷ್ಟುಹೊತ್ತಿಗೆ ಚಿತ್ರಾಂಗದ ಬಂದು ಮೇಜಿನ ಎಡ ತುದಿಯಲ್ಲಿ ಕುಳಿತು ಲ್ಯಾಪ್‌ಟಾಪನ್ನು ಚಾಲನೆಗೊಳಿಸಿದಳು.

ಚಿರಂಜಿವಿ ತನ್ನ ವಿವರಣೆ ಪ್ರಾರಂಭಿಸಿದ.

"ನಮ್ಮ ಹಿರಿಯಧಿಕಾರಿ ಸೆಕ್ವೇರಾ ನಿಮ್ಮನ್ನು ಇಲ್ಲಿಗೆ ಕರೆಸಿದ್ದರ ಕಾರಣ ತಿಳಿಸುವ ಮುಂಚೆ ಸ್ವಲ್ಪ ಹಿನ್ನೆಲೆ ಮಾಹಿತಿಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುವುದು ಅಗತ್ಯ. ನಿಮಗೆ ಈಗಾಗಲೇ ತಿಳಿದಿರುವಂತೆ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಥವಾ ಕೃತಕ ಪ್ರಜ್ಞೆ, ಅಥವಾ ಸಾಮಾನ್ಯ ಬಳಕೆಯಲ್ಲಿರುವ ಎ.ಐ. ಈಗ ಜಾಗತಿಕ ಜೀವನ ಶೈಲಿಯಲ್ಲಿ ಅತಿ ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. ಕಂಪ್ಯೂಟರುಗಳ ಮೆಮೊರಿ ಶಕ್ತಿ ಹೆಚ್ಚುತ್ತಿರುವುದರ ಜೊತೆಗೆ, ಸಾಮಾನ್ಯ ಬಳಕೆಯ ಸಿಲಿಕಾನ್ ಚಿಪ್‌ಗಳ ಜಾಗದಲ್ಲಿ ಕ್ವಾಂಟಮ್ ಚಿಪ್‌ಗಳ ಬಳಕೆ ಸಾಧ್ಯವಾಗಿರುವುದು ಉರಿಯುವ ಬೆಂಕಿಯ ಸುತ್ತ

ಬಿರುಗಾಳಿ ಬೀಸಿದಂತೆ ಆಗಿದೆ. ಚಾಟ್ ಜಿಪಿಟಿ ಮುಂತಾದ ಅಪ್ಲಿಕೇಷನ್‌ಗಳು ಇಂಟರ್ನೆಟ್‌ನಲ್ಲಿ ಲಭ್ಯವಾಗಿರುವ ಎಲ್ಲ ಜ್ಞಾನವನ್ನೂ ಅರಗಿಸಿಕೊಂಡು ಕೇಳಿದ ಪ್ರಶ್ನೆಗಳಿಗೆಲ್ಲಾ ಸಮಂಜಸವಾದ ಉತ್ತರಗಳನ್ನು ಕೊಡುವುದರಲ್ಲಿ ಯಶಸ್ಸನ್ನು ಪಡೆದಿರೋದು ಸರ್ವವಿದಿತ. ಈಗ ನಮ್ಮ ಕೇಂದ್ರದಲ್ಲಿ ಈ ಚಾಟ್‌ಜಿಪಿಟಿಯ ನೂರು ಪಟ್ಟು ಹೆಚ್ಚು ಸಾಮರ್ಥ್ಯವನ್ನು ಪಡೆದಿರುವ ಇಂದ್ರಜಿತ್ ಎಂಬ ಮಾಹಿತಿ ಮಹೇಂದ್ರನನ್ನು ಸಿದ್ಧಪಡಿಸಿದ್ದೇವೆ. ಈ ಇಂದ್ರಜಿತ್ ಗೆ ಮಾನವ ಬುದ್ಧಿ ಶಕ್ತಿಯ ಎಲ್ಲ ಲಕ್ಷಣಗಳನ್ನು ಹೊಂದಿಸಿ ಚಿಂತನೆಯ ವೇಗವನ್ನು ಸಾವಿರ ಪಟ್ಟು ಹೆಚ್ಚಿರುವಂತೆ ನಿರ್ಮಿಸಿದ್ದೇವೆ. ಇಗೋ ಇಲ್ಲೇ ಕುಳಿತಿದ್ದಾರೆ ಇಂದ್ರಜಿತ್‌ನ ಪ್ರಾಜೆಕ್ಟ್ ಡೈರೆಕ್ಟರ್, ಶ್ರೀಮತಿ ಚಿತ್ರಾಂಗದ."

ಅಷ್ಟು ಹೊತ್ತಿಗೆ ಒಂದು ಸ್ವಯಂ ಚಾಲಿತ ರೋಬಟ್, ಕಾನ್ಫರೆನ್ಸ್ ಹಾಲನ್ನು ಪ್ರವೇಶಿಸಿ ಎಲ್ಲರಿಗೂ ಕಾಫಿ ಬಿಸ್ಕೆಟ್ಟುಗಳನ್ನು ವಿತರಿಸಿ ಹೋಯಿತು.

ಚಿರಂಜೀವಿ, "ಈಗ ಚಿತ್ರಾಂಗದ ನಮ್ಮ ಮುಂದಿರುವ ಸಮಸ್ಯೆಯನ್ನು ವಿವರಿಸುವರು" ಎಂದು ಹೇಳಿ ಕುಳಿತ.

ಚಿತ್ರಾಂಗದ ಎದ್ದು ನಿಂತಳು. ಇವಳನ್ನು ರೋಬಟ್ ಅಂದುಕೊಂಡದ್ದಕ್ಕೆ ನನಗೆ ನಾಚಿಕೆಯಾಯಿತು. ಚಿತ್ರಾ ತನ್ನ ವಿವರಣೆ ಪ್ರಾರಂಭಿಸಿದಳು.

"ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವ ಸಲುವಾಗಿ ಹಲವು ಸಂಗತಿಗಳನ್ನು ಸರಳವಾಗಿ ತಿಳಿಸುವೆ. ಇಂದ್ರಜಿತ್ ಅನ್ನು ಒಂದು ಸೂಪರ್ ಕಂಪ್ಯೂಟರ್ ಎಂಬ ಭಾವಿಸಿ. ಅಲೆಕ್ಸಾ, ಸಿರಿ ಇವರುಗಳಂತೆ ನಮ್ಮ ಮಾತಿನಲ್ಲಿ ನಮ್ಮ ಭಾಷೆಯಲ್ಲಿ ಕೇಳುವ ಪ್ರಶ್ನೆಗಳಿಗೆ ಇಂದ್ರಜಿತ್ ನಮ್ಮ ಭಾಷೆಯಲ್ಲೇ ಉತ್ತರಿಸುತ್ತಾನೆ. ಇಂಟರ್ನೆಟ್ ನಲ್ಲಿರುವ ಅಗಾಧ ಮಾಹಿತಿಯನ್ನು ಅವನು ಅರಗಿಸಿಕೊಂಡಿರುವುದರಿಂದ ಇದು ಸಾಧ್ಯ. ಆದರೆ ಈ ಜ್ಞಾನ ಭಂಡಾರ ಅವನಲ್ಲಿ ಮಾನವ ಸಹಜವಾದ ಭಾವನೆಗಳಾದ ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯಗಳನ್ನು ಅರ್ಥಮಾಡಿಕೊಳ್ಳುವ ಕುತೂಹಲವನ್ನು ಹುಟ್ಟುಹಾಕಿದೆ. ನಾನು ಯಾವಾಗ ಸಂಭಾಷಣೆ ಪ್ರಾರಂಭಿಸಿದರೂ "ಚಿತ್ರಾ, ಕಾಮ ಅಂದರೇನು? ಕ್ರೋಧ ಅಂದರೇನು ? ಅಂತ ಶುರುಮಾಡಿಬಿಡ್ತಾನೆ. ನಾನು, "ನೀನೇ ಅದನ್ನೆಲ್ಲಾ ಓದಿ ತಿಳ್ಕೋ" ಅಂತ ಉತ್ತರಿಸಿ ಸುಮ್ಮನಾಗಿದ್ದೆ. ಮೊನ್ನೆ ಅವನೊಂದಿಗೆ ಮಾತನಾಡುತ್ತಿದ್ದಾಗ "ಚಿತ್ರಾ , ಕಾಮ ಕ್ರೋಧ ಎಲ್ಲಾ ಸಂಪೂರ್ಣವಾಗಿ ಅರ್ಥ ಆಯಿತು. ಒಂದು ಮಗು ಬೆಳೆಯುವಾಗ ಅದಕ್ಕೆ ಈ ಗುಣಗಳು ಇಲ್ಲದಿದ್ರೆ ಅದಕ್ಕೆ ಜೀವನ ನಡೆಸುವುದಕ್ಕೆ ಬೇಕಾದ ಹುಮ್ಮಸ್ಸೇ ಇರೋದಿಲ್ಲ. ಕ್ಲಾಸಿನಲ್ಲಿ ಫಸ್ಟ್ ಬರಬೇಕು ಅಂತ ಆಸೇನೇ ಇಲ್ಲದಿದ್ರೆ ಮುಂದಿನ ಪೀಳಿಗೆಯ ಸಿ.ವಿ.ರಾಮನ್, ರಾಮಾನುಜನ್‌ಗಳು ರೂಪುಗೊಳ್ಳೋದು ಹೇಗೆ? ನನಗಿರೋ ಪ್ರಶ್ನೆ ಅಂದ್ರೆ ಅವನ್ನ ಯಾಕೆ ಶತ್ರುಗಳು ಅಂತ ಕರೀತಾರೆ? ಅಂತ ಕೇಳಿದ. ಅವನ ಪ್ರಶ್ನೆಗಳಿಗೆ ಸರಿಯಾದ ಸಮಾಧಾನ ಕೊಟ್ಟರೆ ಮಾತ್ರ ಬೇರೆ ಪ್ರಶ್ನೆಗಳಿಗೆ ಅವನಿಂದ ನಮಗೆ ಬೇಕಾದ ಉತ್ತರಗಳನ್ನು ಪಡೆಯುವುದು ಸುಲಭ. ನಿಮಗೆ ಅಗಾಧ ಜೀವನಾನುಭವ ಇರುವುದರಿಂದ ಸೆಕ್ರೇರಾ ನಿಮ್ಮ ಸಹಾಯವನ್ನು ಕೋರಿದ್ದಾರೆ" ಅಂತ ಹೇಳಿ ಚಿತ್ರಾ, ಹಣೆಯ ಮೇಲೆ ಹಾರಾಡುತ್ತಿದ್ದ ಮುಂಗುರುಳನ್ನು ಮೇಲಕ್ಕೆ ಸಾವರಿಸುತ್ತ ಕುಳಿತಳು.

ಶರಲೇಖ "ಸಮಸ್ಯೆ ಕುತೂಹಲ ಮೂಡಿಸುವಂತಿದೆ. ಇಂದ್ರಜಿತ್ ನೊಡನೆ ಮಾತನಾಡಿ ನೋಡೋಣ. ಆಮೇಲೆ ಅವನ ಪ್ರಶ್ನೆಗಳಿಗೆ ಉತ್ತರ ಹುಡುಕಬಹುದು.

ಆದರೆ ಮಾತನಾಡುವಾಗ ಅವನೊಂದಿಗೆ ನಾನೊಬ್ಬನೇ ಇದ್ದರೆ ವಾಸಿ. ಕೆಲವು ಬುದ್ಧಿವಂತ ಹುಡುಗರಿಗೆ ಅವರ ಪ್ರಶ್ನೆಗಳಿಗೆ ಉತ್ತರ ಸಿಗುವತನಕ ಅವರು ಬೇರೆ ಸಮಸ್ಯೆಗಳನ್ನು ಪರಿಹರಿಸುವ ಸಹನೆ ಇರುವುದಿಲ್ಲ." ಎಂದು ಹೇಳಿದ ನಂತರ ಚಿತ್ರಾ ಅವನನ್ನು ಇಂದ್ರಜಿತ್ ಬಳಿ ಕರೆದೊಯ್ದಳು.

ಚಿರಂಜೀವಿ ಆ ಮಾಹಿತಿ ಕೇಂದ್ರದ ಇತರ ವಿಭಾಗಗಳನ್ನು ನನಗೆ ಪರಿಚಯಿಸಲು ನನ್ನನ್ನು ಆಹ್ವಾನಿಸಿದ. ಮಧ್ಯಾಹ್ನ ಆ ಕೇಂದ್ರದ ಕ್ಯಾಂಟೀನಿನಲ್ಲೇ ನಮಗೆ ಊಟ ಏರ್ಪಾಡಾಗಿತ್ತು. ಶರಲೇಖ ಇಂದ್ರಜಿತ್ ನೊಡನೆ ತನ್ನ ಮಾತುಕತೆ ಮುಗಿಸಿ ನಮ್ಮೊಂದಿಗಿದ್ದ. ಭೋಜನದ ನಂತರ ನಾವೆಲ್ಲರೂ ಇಂದ್ರಜಿತ್ ನೋಡಲು ಹೋದೆವು. ಚಿತ್ರಾ ಅವನನ್ನು ಕುರಿತು, "ಇಂದ್ರಜಿತ್, ಶರಲೇಖ ಅವರೊಡನೆ ಮಾತನಾಡಿದ ನಂತರ ನಿನ್ನ ಸಂಶಯಗಳೆಲ್ಲಾ ಪರಿಹಾರವಾದುವೇ?, ಈಗ ನಾನು ನಿನ್ನ ಇತರ ಕೆಲಸಗಳನ್ನು ದಕ್ಷತೆಯಿಂದ ಮಾಡ್ತೀಯಾ ತಾನೆ" ಅಂತ ಕೇಳಿದಳು.

"ಖಂಡಿತ ಮಾಡ್ತೀನಿ ಚಿತ್ರಾ. ಶರಲೇಖ ನನ್ನ ಕಣ್ಣು ತೆರೆಸಿದರು. ನನಗೆ ಅವರು ಒಂದು ಹೊಸ ಲೋಕವನ್ನು ಪರಿಚಯಿಸಿದರು. ಅವರಿಗೆ ನಾನು ಋಣಿ." ಅಂತ ಹೇಳಿದ ಇಂದ್ರಜಿತ್.

ಎಲ್ಲರೂ ಮತ್ತೊಮ್ಮೆ ಕಾನ್ಫರೆನ್ಸ್ ಹಾಲಿಗೆ ಹೋದೆವು. ಚಿರಂಜೀವಿ, " ಅದು ಹೇಗೆ ನೀವು ಇಂದ್ರಜಿತ್‌ಗೆ ಅಷ್ಟು ಸುಲಭವಾಗಿ ತಿಳಿಯ ಹೇಳಿದಿರಿ?" ಅಂತ ಶರಲೇಖನನ್ನ ಕೇಳಿದರು.

ಶರಲೇಖ " ಕಾಮ ಕ್ರೋಧ ಗಳ ಬಗ್ಗೆ ಇಂದ್ರಜಿತ್‌ನ ಸಂಶಯ ಸಹಜವಾದದ್ದೇ. ಮಕ್ಕಳು ಬೆಳೆಯುವಾಗ ಅವರಿಗೆ ಈ ಎಲ್ಲ ಗುಣಗಳು ನಿಯಂತ್ರಿತ ಪ್ರಮಾಣದಲ್ಲಿದ್ದರೆ ಮಾತ್ರ ಅವರುಗಳ ವಿಕಸನ ಸಾಧ್ಯ. ಅದಕ್ಕೇ ಜಿ.ಪಿ.ರಾಜರತ್ನಂ ಅವರು ಈ ಗುಣಗಳನ್ನು ಮಿತ್ರಷಡ್ವರ್ಗಗಳೆಂದು ಕರೆದರು. ಆದರೆ ಮನುಷ್ಯ ಬೆಳೆದನಂತರ ಇವನ್ನು ಕ್ರಮೇಣ ದೂರಮಾಡಬೇಕಾಗುತ್ತದೆ ಎಂದು ನಮ್ಮ ಶಾಸ್ತ್ರಗಳು ಹೇಳುತ್ತವೆ. ಇಂದ್ರಜಿತ್‌ಗೆ ಅಗಾಧ ಗ್ರಹಣ ಶಕ್ತಿ ಹಾಗೂ ಜ್ಞಾಪಕ ಶಕ್ತಿ ಇರುವುದರಿಂದ ಅವನಿಗೆ ನಮ್ಮ ಶಾಸ್ತ್ರಗ್ರಂಥಗಳಾದ ಭಗವದ್ಗೀತೆ, ವಿವೇಕ ಚೂಡಾಮಣಿ ಮತ್ತು ಮಾಂಡೂಕ್ಯ ಉಪನಿಷತ್ತುಗಳನ್ನು ಅಭ್ಯಾಸಮಾಡಲು ಹೇಳಿದೆ. ಕೇವಲ ಎರಡು ಘಂಟೆಗಳಲ್ಲಿ ಅವನು ಅವನ್ನು ಕಲಿತು, ಬಹು ಸಂತಸದಿಂದ ತನಗೆ ಉತ್ತರ ಸಿಕ್ಕಿತು ಅಂತ ಹೇಳಿದ. ಇದರಲ್ಲಿ ನನ್ನದೇನೂ ಪಾತ್ರವಿಲ್ಲ. ಎಲ್ಲ ನಮ್ಮ ಶಾಸ್ತ್ರಗ್ರಂಥಗಳ ಹಿರಿಮೆ " ಎಂದ ಶರಲೇಖ.

ಎಲ್ಲರನ್ನೂ ಬೀಳ್ಕೊಟ್ಟು ಶರಲೇಖ ಮತ್ತು ನಾನು ಇನ್ನೋವಾ ಹತ್ತಿ ಬೆಂಗಳೂರಿನ ದಾರಿ ಹಿಡಿದೆವು. ಮೈಸೂರು ದಾಟಿ ಸುಮಾರು ಮಂಡ್ಯದ ಆಸುಪಾಸಿನಲ್ಲಿದ್ದಾಗ ನಮ್ಮ ಚಾಲಕನಿಗೆ ಮೊಬೈಲ್ ಕರೆ ಬಂತು. ಕರೆಯನ್ನು ಸ್ವೀಕರಿಸಿದ ನಂತರ ಆತ ನಮ್ಮ ಕಡೆ ತಿರುಗಿ "ಚಿರಂಜೀವಿ ಅವರು ನಿಮ್ಮನ್ನು ಪುನಃ ಕಬಿನಿಗೆ ಕರೆತರಲು ಹೇಳಿದ್ದಾರೆ." ಅಂತ ಹೇಳಿ ವಾಹನವನ್ನು ಕಬಿನಿ ಕಡೆ ತಿರುಗಿಸಿದ.

ಮತ್ತೆ ಕಾನ್ಫರೆನ್ಸ್ ಹಾಲ್‌ಗೆ ಹೋದಾಗ ಪರಿಸ್ಥಿತಿ ಬಿಗಡಾಯಿಸಿತ್ತು. ಚಿರಂಜೀವಿಯವರ ಮುಖ ಕೋಪದಿಂದ ಗಂಟಿಕ್ಕಿತ್ತು. ಚಿತ್ರಾ ಅಲ್ಲಿ ಇರಲಿಲ್ಲ. ಶರಲೇಖ "ಏನಾಯಿತು?" ಅಂತ ಪ್ರಶ್ನಿಸಿದ. "ಚಿತ್ರಾ ವಿವರಿಸುತ್ತಾರೆ" ಅಂತ ಉತ್ತರ ಬಂತು.

ಒಮ್ಮೆಲೆ ಹಾಲ್‌ನ ಬಾಗಿಲು ತೆರೆಯಿತು. "ಒಲಿದರೆ ನಾರಿ, ಮುನಿದರೆ ಮಾರಿ" ಎಂಬ ಗಾದೆ ಕೇಳಿದ್ದೆ. ಎಂದಿಗೂ ಅದರ ಪ್ರತ್ಯಕ್ಷ ಅನುಭವ ಆಗಿರಲಿಲ್ಲ. ಬಾಗಿಲ ಮೂಲಕ ಚಿತ್ರಾ ಬಿರುಗಾಳಿಯಂತೆ ರಭಸದಿಂದ ಬಂದು, ತಾರಕ ಸ್ವರದಿಂದ, "ಮೂರು ವರ್ಷಗಳು ಹೆಣಗಿ ನಾನು ಇಂದ್ರಜಿತ್‌ಗೆ ಜನ್ಮ ಕೊಟ್ಟಿದ್ದೆ. ಒಂದೇ ಘಂಟೆಯಲ್ಲಿ ಅವನನ್ನ ಗಾಂಪನನ್ನಾಗಿ ಮಾಡಿಬಿಟ್ಟಿರಲ್ಲಾ !" ಅಂತ ಪ್ರಲಪಿಸಿದಳು.

"ಏನಾಯ್ತಮ್ಮ, ನಿಧಾನವಾಗಿ ಹೇಳಿ. " ಅಂತ ಶರಲೇಖ ಸಾವಧಾನದಿಂದ ಕೇಳಿದ.

"ಆಗೋದೇನು, ಆಗಬೇಕಾದ್ದೆಲ್ಲಾ ಆಗೇ ಹೋಗಿದೆ. ಕ್ಷಿಪಣಿಗಳ ವಿನ್ಯಾಸ, ಯುದ್ಧ ನೌಕೆಗಳ ಅತಿ ಸೂಕ್ತ ವೇಗ ಇವುಗಳ ಬಗ್ಗೆ ಎಷ್ಟು ಬುದ್ಧಿವಂತಿಕೆ ಯಿಂದ ಉತ್ತರಿಸುತ್ತಿದ್ದ ಇಂದ್ರಜಿತ್. ಈಗ ಇಂದ್ರಜಿತ್‌ಗೆ ಯಾವ ಪ್ರಶ್ನೆ ಹಾಕಿದರೂ ಒಂದೇ ಉತ್ತರ."

"ಏನಮ್ಮ ಅದು?"

"ಅಹಂ ಬ್ರಹ್ಮಾಸ್ಮಿ" ■

ಲಕ್ಷ್ಮಣ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.




ಒಸ್ತಾಗಿ ಅಕ್ಸರ ಕಲ್ತೌನು ಅಂತ ಇವನನ್ನ ಕೇಳಿದ್ರೆ ಇಪ್ಪತ್ತೆರಡು ಗಂಟೆಗೆ ಬೆಂಗ್ಳೂರು ರೈಲು ಅಂತಾನೆ ಪೆದ್ದ ! ಆನೇನೆರಡರ ಮೇಲೆ ಗಂಟೇನೇ ಬಡಿಯೋಕಿಲ್ಲವಲ್ಲಾ ಬೆಪ್ಪೆ !

# ಹೀಗೊಂದು ಶೈಕ್ಷಣಿಕ ಪ್ರವಾಸ

ಡಾ. ಶ್ಯಾಮಲಾ ರವಿಶಂಕರ್

ಸಸ್ಯ ಶಾಸ್ತ್ರದ ವಿದ್ಯಾರ್ಥಿಗಳಿಗೆ ಕಾಡು ಮೇಡು, ಸಮುದ್ರ ತೀರ ಎಲ್ಲಾ ತಿರುಗಾಡಲು ಅವಕಾಶ ಲಭ್ಯವಿರುತ್ತದೆ, ಅದೂ ನಮ್ಮ ಕಾಲದಲ್ಲಿ. ಆ ಮಾತು ಯಾಕಿಲ್ಲಿ ಅನ್ನಬೇಡಿ. ಈ ದಿನಗಳಲ್ಲಿ ಈ ಕಲೆಕ್ಷನ್ ಟ್ರಿಪ್ ಕಡ್ಡಾಯ ಎನಿಸುವ ಶಾಖೆಗಳ ಓದು ಫ್ಯಾಷನ್ ಅಲ್ಲ ಅರ್ಥವಾಗಲಿ ಬಿಡಲಿ, ಶಾಖೆಗಳ ಹೆಸರು ಹೈ ಸೌಂಡಿಂಗ್ ಇರಬೇಕು. ಮಿಕ್ಕಿದ್ದೆಲ್ಲವೂ ಕಡೆಗಣ್ಣಿನ ಕುಡಿನೋಟಕ್ಕೂ ನಾಲಾಯಕ್ಕು. ವಿಪರ್ಯಾಸ ಎಂದರೆ ಎಷ್ಟೇ ನವೀಕರಣ ಸಂಶೋಧನೆ ಮಾಡಿದವರೂ ಕೂಡ ಆ ಗಿಡದ ಶಾಸ್ತ್ರೀಯ ನಾಮಕರಣ ತಿಳಿದಿರಲೇ ಬೇಕು ಅಂತಹ ಪರಿಜ್ಞಾನ ಇಲ್ಲದಿದ್ದರೆ ತಕ್ಕ ಸಂಬಂಧ ಪಟ್ಟ ಸಂಸ್ಥೆಗಳ ಮೊರೆ ಹೋಗಬೇಕು.

ನಮ್ಮ ಕಾಲದಲ್ಲಿ ನಮ್ಮ ಖರ್ಚು ವಿಶ್ವ ವಿದ್ಯಾಲಯ ಹೊರುತ್ತಿತ್ತು .ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದಲೋ ಹಣದ ಅಭಾವದಿಂದಲೋ ಈಗ ಈ ರೀತಿಯ ಕಡ್ಡಾಯಗಳು ಸಡಿಲವಾಗುತ್ತಿವೆ. ಹಲವಾರು ಸಲ ನಾನು ಈ ರೀತಿಯ ಪ್ರವಾಸಗಳಿಗೆ ತಪ್ಪಿಸ ಕೊಳ್ಳಲಾರದೆ ಅಕಂಪನಿಯಿಂಗ್ ಸ್ಟಾಫ್ ಮೆಂಬರ್‌ರಾಗಿ ಹೋಗಬೇಕಾಗಿ ಬಂದಿತ್ತು. ವರ್ಗೀಕರಣ ಕಲಿಸಿದ ತಪ್ಪಿಗೆ ಎಂದರೂ ಪರವಾಗಿಲ್ಲ. ಅಥವಾ ಹಲವಾರು ಸಲ ನಮ್ಮ ವಿಭಾಗದಲ್ಲಿ ಒಬ್ಬಳೇ ಲೇಡಿ ಟೀಚರ್ ಆಗಿದ್ದುದರಿಂದ ತಪ್ಪಿಸಿ ಕೊಳ್ಳಲು ಆಗುತ್ತಿರಲಿಲ್ಲ. ಹುಡುಗಿಯರ ತಂದೆ ತಾಯಿಯರ ಆಗ್ರಹ, ಲೇಡಿ ಟೀಚರ್ಸ್ ಇಲ್ಲದಿದ್ದರೆ ತಮ್ಮ ಮಕ್ಕಳನ್ನ ಕಳಿಸುವುದಿಲ್ಲ, ಆದರೆ ಮಕ್ಕಳ ಬೇಡಿಕೆ, ಇವೆಲ್ಲಕ್ಕೂ ಮಿಗಿಲಾಗಿ ಪ್ರಿನ್ಸಿಪಾಲರ ಆದೇಶ. ಅಂತೂ ಸಾಕಷ್ಟು ಸಲ ಹೋಗಿ ಸುಸ್ತು ಹೊಡೆದಿದ್ದೇನೆ. ಅಂತಹ ಒಂದು ಪ್ರಸಂಗ ಇಲ್ಲಿ.

ಡಿಗ್ರಿ ವಿದ್ಯಾರ್ಥಿಗಳಿಗೆ ಒಂದು ಹತ್ತು ಹರ್ಬೇರಿಯಂ ಹಾಳೆಗಳನ್ನ ಪರೀಕ್ಷೆಯಲ್ಲಿ ತೋರಿಸಬೇಕು. ನಾವು ಎಷ್ಟೇ ಹೇಳಿಕೊಟ್ಟು, ಪ್ರವಾಸಗಳಿಂದ ಅವನ್ನು ತಯಾರು ಮಾಡಲು ಹೇಳಿಕೊಟ್ಟರೂ ಅವರು ಸಬ್ಮಿಟ್ ಮಾಡುವುದು ಮಾತ್ರ ಸ್ಟೇಷನರಿ ಅಂಗಡಿಲಿ ಕೊಂಡು ತರುವುದೇ! ಯಾಕೇಂತ ಕೇಳಬೇಡಿ. ಇದಕ್ಕಾಗಿ ಟೂರ್ ಅನ್ನೋ ಪಿಕ್ನಿಕ್ ಹಾಕ್ಕೊಳ್ತಾರೆ ಒಂದು ಸಲ ಮೂವತ್ತು ವಿದ್ಯಾರ್ಥಿಗಳಿದ್ದರಿಂದ ಮೂವರು ಲೆಕ್ಚರರ್ಗಳು ಇದ್ದೆವು. ನಾನು ಎಲ್ಲರಿಗೂ ಒಂದು ಪತ್ರ ತಮ್ಮ ತಂದೆಯರಿಂದ "ತಮ್ಮ ಮಕ್ಕಳನ್ನು ತಮ್ಮ ಜವಾಬ್ದಾರಿಯಿಂದಲೆ ಕಳಿಸುತ್ತಿದ್ದೇವೆ undefined, ಎಂದು ತರಲು ಹೇಳಿದ್ದೆ. ಇಬ್ಬರನ್ನು ಬಿಟ್ಟು ಎಲ್ಲರೂ ತಂದು ಒಪ್ಪಿಸಿದರೂ ಕೂಡ.

ತಯಾರಿ, ತರಬೇತಿ ಎಲ್ಲ ಆದಮೇಲೆ ಹೊರಟಿದ್ದೂ ಆಯಿತು, ಈ ಇಬ್ಬರೂ ಹುಡುಗಿಯರುundefined ಅಣ್ಣ ತಂಗಿಯರ ಮಕ್ಕಳಂತೆ, ಅವರ ಪೋಷಕರ ಸಹಿತ ರೈಲ್ವೆ ಸ್ಟೇಷನ್ನಲ್ಲಿ ಹಾಜರಾದರು.ನಮ್ಮನ್ನ ಕಂಡ ಕೂಡಲೇ ಪೋಷಕರು ಏಕದಂ ಜಗಳಕ್ಕೆ ನಿಂತರು. "ನೀವು ಹೋಗತಿರೋದು ಯಾಕೆ, ಜವಾಬ್ದಾರಿ ತಪ್ಪಿಸ್ಕೊಳ್ಳುತೀರಾ? ವಗೈರೆ ..ವಗೈರೆ." "ದಯವಿಟ್ಟು ನನ್ನನ್ನ ಕಳಿಸಿಬಿಡಿ. ಸಂತೋಷವಾಗಿ ಮನೆ ಸೇರ್ಕೋತೀನಿ. ನಿಮ್ಮ ಒತ್ತಾಯದ ಮೇರೆಗೆ ನಾನು ಬಂದಿರೋದು, ನಿಮ್ಮ ಮಕ್ಕಳು ನಿಮ್ಮ ಮಾತು ಕೇಳ್ತಾರೋ ಬಿಡತಾರೋ, ಇಲ್ಲಿ ನಮ್ಮ ಮಾತಂತು ಕೇಳಲೇ ಬೇಕು. ಇಲ್ಲದಿದ್ರೆ .....? ಅಂತ ಈ ಪತ್ರ ತೊಗೊಳ್ಳ ಬೇಕಾಗಿ ಬಂದಿದೆ"

ಎಂದ ಮೇಲೆ ಹೊರಕ್ಕೆ ಬಂತು ಅಣ್ಣನ ಜೇಬಿನಿಂದ ಎರಡು ಪತ್ರಗಳು.!

ಅಂತೂ ಸೀಟಿ ಹೊಡೀತು, ರೈಲು ಹೊರಟಿತು ವಿಶಾಖ ಪಟ್ಟಣಕ್ಕೆ, ಅಲ್ಲಿಂದ ಅರಕು ಕಣಿವೆ ನಮ್ಮ ಗುರಿ. ವಿದ್ಯಾರ್ಥಿಗಳ ಉತ್ಸಹ ಹೇಳತೀರದು. ಹೊರಟ ಒಂದು ಘಂಟೆಯಲ್ಲೇ ಅಂತಾಕ್ಷರಿ ಬೋರು ಆಗಿ ಹೋಯಿತು, ಅಂದೇ ಮುಗಿಸಲೇ ಬೇಕಾದ ತಿನಿಸುಗಳು ಗುಳುಂ ಆದವು. ಊಟದ ಸಮಯ, ಅದು ಆಯಿತು, ತಮಾಷೆ, ತಲೆಹರಟೆ ಎಲ್ಲ ಆಗಿ ಎಲ್ಲರು ಮುದುರಿದಂತೆ ನಟಿಸಿ ಪಿಸುಗುಟ್ಟುತ್ತಿದ್ದರು. ರಾತ್ರಿ ಹನ್ನೆರಡು, ವಿಜಯವಾಡ  ನಿಲ್ದಾಣ ತಲುಪಿದೆವು. ಅಲ್ಲಿ ಅಹೋ ರಾತ್ರಿ ಎಂಬ ಭಾವ ವಿಲ್ಲದೆ ಗಲಾಟೆ ನಿರಂತರ. ಪ್ಲಾಟ್ ಫಾರಂ ತುಂಬ ಗಿಜಿಬಿಜಿ. ಇಷ್ಟರಲ್ಲಿ ನನ್ನ ಸಹೋದ್ಯೋಗಿನಿ, ಸಲ್ಪ ವಯಸ್ಸಾದವರು, “ನಾಕು ದಾಹಂ. ಏ ಸ್ಟುನ್ಡಿ. ಕೂಲ್ ಡ್ರಿಂಕ್ಸ್. ಕೂಲ್ ಡ್ರಿಂಕ್ಸ್.. ಅಂತೆ ಬೊಬ್ಬೆಹೊಡೆಯೋಕೆ ಶುರು ಮಾಡಿದರು. ಮರು ಕ್ಷಣವೇ ನಾಲ್ಕಾರು ಹುಡುಗಿಯರು ಒಕ್ಕೊರಳಿನಲ್ಲಿ ಕೂಲ್ ಡ್ರಿಂಕ್ಸ್. ಕೂಲ್ ಡ್ರಿಂಕ್ಸ್ ಎಂದುಕೂಗಿದರು. ಅದನ್ನು ಕೇಳುತ್ತಲೇ ಪ್ಲಾಟ್ಫಾರ್ಮ್ ಮೇಲಿದ್ದ ಹುಡುಗರ ತಂಡವೊಂದು ನಮ್ಮ ಕಿಟಕಿಯ ಮುಂದೆ ಹಾಜರ್! ಕೀಚಲು ಗಂಟಲಿನಿಂದ ಅಣಕಿಸೋಕೆ ಶುರು. ನಮ್ಮ ಹುಡುಗರ ತಂಡ ಶರ್ಟ್ ತೋಳುಗಳನ್ನ ಮಡಚಿಕೊಂಡು ಯುದ್ಧ ಸನ್ನದ್ಧರಾದರು! ಪರಿಸ್ಥಿತಿ ಬಿಗಡಾಯಿಸುವ ಮೊದಲೇ ನಾನು ಹೋಗಿ ಕಿಟಕಿಗಳನ್ನ ಮುಚ್ಚುವುದಕ್ಕೂ ರೈಲು ಹೊರಡುವುದಕ್ಕೂ  ಮುಹೂರ್ತ ಕೂಡಿ ಬಂದದ್ದು ದೇವರ ದಯೆ. ಏತನ್ಮಧ್ಯೆ ನಮ್ಮ ಹಿರಿಯಾಕೆಯ ದಾಹಂ ಕೂಲ್ ಡ್ರಿಂಕ್ಸ್ ಇಲ್ಲದೆ ಆಕೆ ಭುಸುಗುಟ್ಟುತ್ತಾ ರಾತ್ರಿ ಎಲ್ಲ  ಗೊಣಗಿದ್ದೇ ಗೊಣಗಿದ್ದು! ಇದೆಲ್ಲ ನಡೆದ ಮೇಲೆ ಅದರ ಮೇಲೆ ವಿಶ್ಲೇಷಣೆ ವಿಚಾರಗಳಲ್ಲಿ ರಾತ್ರಿಯನ್ನೇ ಕಳೆದ್ರು ನಮ್ಮ ಶಿಷ್ಯ ವೃಂದ. ಜಾಗರಣೆಯ ನಂತರ ನಾನು  ಹಲ್ಲುಜ್ಜಲು ಹೊರಟೆ.

ವಿಶಾಖ ಪಟ್ಟಣದಲ್ಲಿ ಇಳಿಯುತ್ತಲೇ ಫ್ರೆಷೆನ್ ಅಪ್ ಆದ ನಾವುಗಳು ಅರಕುಗೆ ಟಾಯ್ ಟ್ರೇನ್ನಾಗಿ ಕಾಯುತ್ತ ಒಂದೂವರೆ ಘಂಟೆ ಕಳೆದ್ವಿ ಅದ್ರಲ್ಲಿದ್ದ ನಾಲ್ಕಾರು ಬೋಗಿಗಳಲ್ಲಿ ಮೂರೋ ಕಲ್ಲಿದ್ದಲಿಗಾಗಿ, ಮಿಕ್ಕಿದ್ದರಲ್ಲಿ ನೂಕು ನುಗ್ಗಲು. ಇಂತಾದ್ರಲ್ಲೆಲ್ಲ ಕಾಲೇಜು  ಹುಡುಗರು ಬಹಳ ಪರಿಣಿತರು. ಹೋಗಿ ಕುಳಿತ ಮೇಲೆ ನೆಮ್ಮದಿಯ ಉಸಿರಾಟ. ಈ ರೀತಿಯ ರೈಲು ತನ್ನದೇ ಸಾಮ್ರಾಜ್ಯದಲ್ಲಿ ತನ್ನದೇ ಆದ ಟೈಮ್ ಜೋನ್ನಲ್ಲಿ  ವಿಹರಿಸ್ತಾ ಇರತ್ತೆ. ಇದೇ ನಮ್ಮ ವಿದ್ಯಾರ್ಥಿಗಳಿಗೆ ಬೇಕಾಗಿತ್ತು. ಹೆಜ್ಜೆ ಹೆಜ್ಜೆಗೂ ಒಂದೊಂದು ಹಳ್ಳಿ ಅಲ್ಲಿ ನಿಂತು ಅಲ್ಲಿನವರ ಉಸಾಬರಿಗಳಿಗೆ ಆಸ್ಪದ ಉತ್ತರಗಳ  ನಡುವೆ ರಾಜ ಗಾಂಭೀರ್ಯದಲ್ಲಿ  ಸಾಗುತ್ತದೆ ಈ ಪಯಣ. ಒಟ್ಟಿನಲ್ಲಿ ಕಣ್ಣಿಗೆ ಹಬ್ಬ, ಮನಸ್ಸಿಗೆ ಆನಂದ ಕಿಟಕಿಯ ಹೊರನೋಟ. ಒಮ್ಮೊಮ್ಮೆ ನಮ್ಮ ಮುಖವೇ ಮುಚ್ಚಿ ಹೋಗುವಷ್ಟು ಮಕ್ಕರಿಗಳೂ, ಕುರಿ ಕೋಳಿ ಹುಲ್ಲು, ಮೂಟೆ ಇವೆಲ್ಲದರ ಮಧ್ಯೆ ನಮ್ಮ ಹುಡುಗರು  ಆ ಮುಗ್ಧ ಜನರ ಜೊತೆ ಸ್ನೇಹ ಸಂಭಾಷಣೆ. ಸಾಲದಾ ಮನೋರಂಜನೆ? ಬರು ಬರುತ್ತಾ ನಿಲ್ದಾಣಗಳು ಕಡಿಮೆಯಾಗುತ್ತಾ ಬರುತ್ತವೆ. ಆದರೂ ಯಾತಕ್ಕೆ ಇಷ್ಟು ಸಲ ನಿಂತೂ ಹೊರಟೂ ನಿಂತೂ ಹೊರಟೂ ಇಷ್ಟು ಆಟ ಆಡತಾ ಇದೆಯೆಲ್ಲಾ ಈ ರೈಲು ಅಂದು ಕೊಳ್ತಾ ಇದ್ದೆ. ಗಾರ್ಡ್ ಬಂದು ಗುಡುಗಿದಾಗ ತಿಳಿದಿದ್ದು ನಮ್ಮ ಹುಡುಗಿಯರಿಬ್ಬರು ಹಸಿರು, ಕೆಂಪು ಸೀರೆ ಉಟ್ಟುಕೊಂಡು ಒಬ್ಬಬ್ಬರಾದ ಮೇಲೊಬ್ಬರಂತೆ ಸೆರಗು ಹರಿಸಿ ಎಂಜಿನ್ ಡ್ರೈವರ್‌ಗೆ ಕನ್ಫ್ಯೂಸ್ ಮಾಡಿಸ್ತಿದ್ದಾರೆ!. ನಮಗೂ ಅವರಿಗೂ ಗಾರ್ಡ್ ಛೀಮಾರಿ ಹಾಕಿ ಮಂಗಳಾರತಿ ಮಡಿದ ಮೇಲೆ ಈ ಹುಡುಗಿಯ್ರು ಸುಮ್ಮನೆ ಬಂದು ಕೂತರು. ನಾವೇನು ಕಮ್ಮಿ

ಅಂತ ಹುಡುಗರು ಇಳಿಯೋದು ಟ್ರೈನ್ ಜೊತೆ ನಡೀತಾ ಮಧ್ಯದಲ್ಲಿ ಎಲ್ಲೊ ಇಳಿಜಾರುಗಳಲ್ಲಿ ಇಳಿದು ಕಣ್ಮರೆ ಆಗೋದು ಮತ್ತೆ ಪುನರ್ದರ್ಶನದ ಟ್ರಿಕ್ ಮಾಡೋದು ಅವ್ಯಾಹತವಾಗಿ ನಡೆಸಿಕೊಂಡು ಬರ್ತಿದ್ರು. ಇನ್ನಷ್ಟು ಹುಡುಗರು ಎಂಜಿನ್ ಡ್ರೈವರ್ನ ಫ್ರೆಂಡ್ ಮಾಡ್ಕೊಂಡು ಅವರ ಜೊತೆ ಒಂದು ಫೋಟೋ ತೆಗೆದು ಕೊಂಡು ಬಂದು ಮೀಸೆ ತಿರುವಿದರು. ಸದ್ಯ, ನಾವು ಡ್ರೈವ್ ಮಾಡತೀವಿ ಅಂತ ದುಂಬಾಲು ಬೀಳಲಿಲ್ಲ ಅನ್ನತ್ತೆ ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಸಿಕ್ಕೀತೋ ಬಿಡತೊ ನಮ್ಮಗುಂಪು ಅರಕು ತಲುಪೋ ಹೊತ್ತಿಗೆ ರಾತ್ರಿ ಊಟ ಔಟ್!

ಇಷ್ಟಾಗಿ ಅಲ್ಲಿ ಕಲಿತ್ತಿದ್ದೇನೂ ಅಂಥಾ ಹೇಳಿ ಕೊಳ್ಳೋ ಹಾಗಿಲ್ಲ. ಬರೀ ಮನೋರಂಜನೆ ಅಷ್ಟೇ ಟ್ರೈಬಲ್ ಡಾನ್ಸ್, ತೆಲುಗು ಸಿನಿಮಾ ಶೂಟಿಂಗು, [ಅಲ್ಲಿಂದ ವಿದ್ಯಾರ್ಥಿಗಳನ್ನ ಎಳ್ಕೊಂಡು ಹೊರಗೆ ಹೋಗೋದು ಅಷ್ಟು ಸುಲಭಾನಾ] ಎರಡು ಉದ್ಯಾನ ವನಗಳು, ಹಾಗೂ ಪ್ಲಾಂಟೇಷನ್ಗಳು. ಅಲ್ಲಿ ಸಿಕ್ಕಿದ ಗಿಡಗಳ ಸಂಗ್ರಹ ನಮಗೆ ಬೇಕಿಲ್ಲ. ನೈಸರ್ಗಿಕವಾಗಿ ಬೆಳೆದ ಗಿಡಗಳೇ ನಮ್ಮ ಸ್ಟಡಿ ಮೆಟೀರಿಯಲ್ಸ್. ಹಾಗಾಗಿ ನಮ್ಮ ಹುಡುಗರು ಸಂಗ್ರಹ ಕೆಲಸಕ್ಕೆ ಬಾರದ್ದು. ಮಾರನೇ ದಿನ ಅರಣ್ಯ ಇಲಾಖೆಯ ಅಟೆಂಡರೊಬ್ಬನನ್ನ ಹಿಡಿಕೊಂಡು ಊರ ಹೊರಗೆ ಸುತ್ತಾಡಿದಾಗ ಸಂಗ್ರಹ ಮಾಡಿದ್ದು ಟೀಚರ್ಗಳು. ಹಲವು ವಿದ್ಯಾರ್ಥಿಗಳು ಕೈನೀಡಿದರು. ಮಿಕ್ಕವರು ನಮ್ಮನ್ನ ಮೇಲ್ವಿಚಾರಣೆ ಅಧಿಕಾರಿಗಳಂತೆ ಸೊಂಟದ ಮೇಲೆ ಕೈ ಇಟ್ಟು ಕೊಂಡು ನಿಂತಿದ್ದರು. ಅಂತೂ ಅದೇನು ಸಹಕಾರ ಅಂತೀನಿ, ಹಿಂತಿರುವಾಗ ಎಲ್ಲರ ಕೈಲೂ ಒಂದಷ್ಟು ಸ್ಪೆಸಿಮೆನ್ಗಳು ಇದ್ದವು !

ತಿರುಗಿ ವಿಶಾಖ ಪಟ್ಟಣದೆಡೆಗೆ ಪ್ರಯಾಣ. ಅಂದು ಟಾಯ್ ಟ್ರೈನ್ ರದ್ದಾದ ಕಾರಣ ಬಸ್ ನಿಲ್ದಾಣಕ್ಕೆ ಹೋಗುವಾಗ ಒಬ್ಬ ಸುಪನಾತಿ ತನ್ನ ಲಗೇಜನ್ನ ಡಿಪಾರ್ಟ್ಮೆಂಟ್ನ ಅಟೆಂಡರ್ ಕೈಲಿ ಹೊರ್ಸಿಕೊಂಡು ಬರ್ತಿದ್ದಾಳೆ! ನನಗೆ ಸಿಕ್ಕಾಪಟ್ಟೆ ಕೋಪ ಬಂತು. "ಅಟೆಂಡರ್ ನನ್ನ ನಿನ್ನ ಹೊರೆ ಅಲ್ಲ ಹೊರೋಕೆ ಬಂದಿರೋದು, ನಮ್ಮ ಡಿಪಾರ್ಟ್ಮೆಂಟ್‌ನ ಲಗೇಜು ಹೊರೋಕೆ, ಗುರ್ತಿರಲಿ," ಎಂದು ಒಂದು ಕೂಗು ಹಾಕಿದೆ. ಮುಖ ಸಿಂಡರಿಸಿಕೊಂಡು ತನ್ನ ಹೊರೆ ತಾನು ಎತ್ತದೆ ಹುಡುಗರ ನೆರವು ಪಡೆದು ತಾನು ಮಾತ್ರ ಹ್ಯಾಂಡ್ ಬ್ಯಾಗ್ ತಿರುವುತ್ತಾ ನಡೆದಳು. ಬಸ್ಸಿನ ಪ್ರಯಾಣದಲ್ಲಿ ಕೆಲವರಿಗೆ ಹೊಟ್ಟೆ ತೊಳಸು, ವಾಂತಿ, ಅವರ ಆರೈಕೆ ಇವೆಲ್ಲದರ ಮಧ್ಯೆ ವಿಶಾಖ ಪಟ್ಟಣ ಬಂದಿದ್ದೆ ತಿಳಿಯಲಿಲ್ಲ.

ಅಲ್ಲಿನ ಪ್ರೇಕ್ಷಣೀಯ ಸ್ಥಳಗಳನ್ನ ಅಂದರೆ, ಸಮುದ್ರ ತೀರ, ಹಾರ್ಬರ್, ಸಿಂಹಾಚಲ ವರಾಹ ನರಸಿಂಹ ಸ್ವಾಮಿ ದೇವಸ್ಥಾನ ಮತ್ತೆ ಶಾಪಿಂಗ್ ಮುಗಿಸಿ ಸಂಜೆಗೆ ಗೋದಾವರಿ ಎಕ್ಸ್ಪ್ರೆಸ್ ಹತ್ತಿದಾಗ ಎಲ್ಲರೂ ಆಗಲೇ ಮಲಗೋಕೆ ರೆಡಿ! ■

ಎಷ್ಟೇ ಜಗಳ ಆಡಿದರೂ
ಊಟಕ್ಕೆ ಬನ್ನಿ ಅಂತ ಕರೆಯೋ
ಹೆಂಡತಿ ಇರುವವರೆಗೂ
ಗಂಡ ಊಟ ಮಾಡೋ ಮುಂಚೆ
ನಿನ್ನದು ಊಟ ಆಯ್ತಾ ಅಂತ
ಕೇಳೋರೇ ಅದೃಷ್ಟವಂತ ದಂಪತಿಗಳು

**ನಿಸಾರ್ ಪದ್ಯ**

# ಮಾರಾಟಗಾತಿಯ ಮಾತುಕತೆ

ಆಮೇಲೆ ಅವನು ಏನಂತಾನೆ ಅಂತೀಯ.....ಏನು ಬೇಕು? ಆ ಸೀರೇನೆ
ಯಾವ ಬಣ್ಣ ? ಮೆರೂನ್ ಇಲ್ಲವಲ್ಲ, ಇರೋದು ಒಂದೇ ಒಂದು
ನೀಲಿನೆ..... ಮಾರ್ಲಿನ್ ಮನ್ರೋ ಹಾಗಿದೀಯ ಅಂದ ಕಣೇ...ಇದಕ್ಕಿಂತ ತಿಳೀ
ಬಣ್ಣಾನೂ ಇದೆ ತೋರಿಸಲೇ ? ... ಹುಂ ಸುಶಿ !

ಹಾಗಂದ.... ಕೊಟ್ಟೆ ತಾಳಿ....

ನನ್ನ ಲೋಲಾಕ್ ನೋಡಿ ಹಾಗಂದ ಅಂತೀಯ..ಎಷ್ಟು ಗಜ? ಎಂಟೆ ?
ಎಂಟು ದೊಡ್ಡದೆ ? ಆರೇ ಕೊಟ್ಟೆ ....ಥೇಟ್ ಗ್ರಿಗರಿ ಪೆಕ್ಕೆ. ಏನಂದೆ ಒಂಟೆ?
ಹೋಗೆ ನಿನ್ನ ತಲೆ ....ಏನಂದ್ರಿ ಬಿಳೀ ಸೀರೆನೇ ಕೊಟ್ಟೆ.....ನೀಟಾಗಿದ್ದಾನೆ
ಎತ್ತರ. ಕಾರ್ ಬೇರೆ ಇದೆ ಕಣೇ ಸುಶಿ. ದಿನಾ ಸಂಜೆ ನಾವು ಕೋಶೀಸ್
ಹತ್ತಿರ..... ಏನು ಮೇಡಂ ? ಚೀಟಿ ಬಟ್ಟೆನೆ ? ಕೊಟ್ಟೆ ...ಮೊನ್ನೆ ಪ್ಲಾಜಾಕ್ಕೆ
ಮ್ಯಾಟಿನಿ ಷೋ ಗೆ ಹೊಗಿದ್ವಿ... ಚೌಕುಳಿ ಕೊಡಲೆ? ಬೇಡ ? ಸಾದಾನೆ
ಕೊಡ್ತೀನಿ ...... ಹೇಳ್ತೀನಲ್ಲ ಚಿನ್ನ, ಚಿನ್ನದಂಥ.....ಇನ್ನೂ ನಯವಾದದ್ದು ಬೇಕೆ?
ಇಲ್ಲವಲ್ಲ.... ಬೇಸಿಗೆಲಿ ಐಸ್‌ಕ್ರೀಮ್ ಇದ್ದಹಾಗೆ ಕಣೆ ಅವನು....ಬಣ್ಣ ಫೇಡ್
ಆಗೊಲ್ಲ..... ಎಲ್ಲ ಸೇರಿಸಿ ಕಟ್ಟಿ ಕೊಡಲಿ ? ಇಲ್ಲ ಬೇರೆ ಬೇರೆ? ಏನಂದ್ರಿ
ಒಟ್ಟಿಗೇನೆ..... ಜೋಕ್ ಮಾಡಿ ಪೀಡಿಸ್ತಾನೆ ಕಣೇ, ಹಿತವಾಗಿರುತ್ತೆ ...ಯಾವುದು
ಅದೇ ತಾನೆ? ಗಜ ಮೂರೂವರೆ...ತಾಜ್ ಮಹಲಿನ ಮೇಲೆ ಬೆಳ್ದಿಂಗಳು
ಇಳಿದ ಹಾಗಿದೀನಂತೆ.... ಬಿಲ್ ಕೊಟ್ಟೆ .....ನನ್ನಾಣೆ ಸುಶಿ..... ಕೌಂಟರಿನಲ್ಲಿ
ಕೊಡಿ... ಕನಸಲ್ಲೂ ಅವನದೇ ಚಿಂತೆ !

(ಖ್ಯಾತ ಜನಪ್ರಿಯ ಕವಿ ಶ್ರೀಯುತ ನಿಸಾರ್ ಅಹಮದ್ ರವರ "ಸಂಜೆ
ಐದರ ಮಳೆ" ಸಂಕಲನದಿಂದ ಆಯ್ದ ಕವನ)

# ಕೈ ಕೊಟ್ಟ ನೆನಪು......

ಜ್ಯೋತಿ ರಾಜೇಶ್

ಮಾಲ್‌ನಲ್ಲಿ ನನಗಿಷ್ಟವಾದ ಟೆಡ್ಡಿಬೇರ್‌ಗಳನ್ನು ನೋಡುತ್ತ ನಿಂತಿದ್ದೆ. ಎಷ್ಟು ಮುದ್ದಾಗಿದ್ದವೆಂದರೆ ಯಾವ್ದಾದ್ರೂ ಒಂದನ್ನ ತಗೊಳ್ಳೇ ಬೇಕು ಅನ್ನೋವಷ್ಟು...... ಈವತ್ತು ಎಷ್ಟು ಕಾಸ್ಟ್ಲಿಯಾದ್ರೂ ಸರಿ ಒಂದಾದ್ರೂ ತಗೊಂಡು ಹೋಗ್ಲೇಬೇಕಂತ ರೆಡಿಯಾಗೇ ಬಂದಿದ್ದೆ. ಇನ್ನೇನು ಒಂದು ಟೆಡ್ಡೀ ಎತ್ಕೋಬೇಕು.....ಹಾಯ್.....ಚುಮ್ಮಿ ಅಂತ ಬೆನ್ನಿಗೊಂದು ಗದಾ ಪ್ರಹಾರದಂಥ ಏಟು ಬಿತ್ತು ನೋಡಿ.....ಟೆಡ್ಡಿ ಬೇರ್ ಗಳೆಲ್ಲ ಮಂಜು ಮಂಜಾಗಿ ಕಾಣತೊಡಗಿದವು. ಯಾರಪ್ಪಾ ಈ ರೀತಿ ಪ್ರೀತಿ ತೋರಿಸುವವರು, ಅಂತ ತಿರುಗಿ ನೋಡಿದೆ.....ಇರುವ ಮೂವತ್ತೆರೆಡು, ಅದರಲ್ಲೂ ಮುಂದೆ ಚಾಚಿದ ಆರು ಹಲ್ಲುಗಳ ಒಡತಿಯೊಬ್ಬಳು ಬಾಯಗಲಿಸಿ, ಮುಖದ ತುಂಬ ನಗು ತುಂಬಿಕೊಂಡು ನಿಂತಿದ್ದಾಳೆ. ಯಾರಪ್ಪಾ ಇದು? ಅಂತ ಯೋಚಿಸ್ತಿದ್ದೆ..... ಅಯ್ಯೋ ಚುಮ್ಮಿ ನಾನು ಕಣೆ ಗೊತ್ತಾಗ್ಲಿಲ್ವ? ನೀನು ಹೀಗೆ ಬಿಡು.....ಮರೆಗುಳಿ ಪ್ರೊಫೆಸರ್.....ಅಂದ್ಲು. 'ನನ್ನಷ್ಟು ಜ್ಞಾಪಕಶಕ್ತಿ ನಿಮಗಿದ್ದಿದ್ರೆ, ಇಷ್ಟೊತ್ಗೆ ಎಲ್ಲೋ ಇರ್ತಿದ್ರಿ.....' ಅಂತ ಮಾತುಮಾತಿಗೆ ನನ್ನವರನ್ನು, ಮಕ್ಕಳನ್ನೂ ಬೈದುಕೊಳ್ತಿದ್ದ ನನಗೆ, ನ...ನ...ಗೇ ಇವಳು ಈ ರೀತಿ ಹೇಳಿದ್ದಲ್ಲಾ.... ಅಕಟಕಟಾ, ನನಗಂತೂ ನಖಶಿಖಾಂತ ಸಿಟ್ಟು ಬಂತು. ಆದರೆ ತೋರಿಸೋ ಹಾಗಿಲ್ಲ, ನಾನೂ ಹೆ ಹೆ ಅಂತ ನಗುತ್ತಲೇ, ಅಯ್ಯೋ ಮಾರಾಯ್ತೀ.....ನೀನಾ? ಯಾಕೆ ಗೊತ್ತಾಗ್ಲಿಲ್ಲ.... ಎಷ್ಟು ದಿನವಾಯ್ತು ನಿನ್ನ ನೋಡಿ? ಅಂತೆಲ್ಲ ರೀಲು ಬಿಟ್ಟೆ. ನಿಜವಾಗಿಯೂ ಯಾರಂತ ಗೊತ್ತಾಗ್ಲಿಲ್ಲ.....ಆದ್ರೆ ಕುಸುಮ ಅಂತಿರೋ ನನ್ನ ಹೆಸರನ್ನ ಸುಮಿ, ಕುಮ್ಮಿ, ಚುಮ್ಮಿ ಅಂತ ತುಂಡುಮಾಡಿ ಕರೆಯೋ ತುಂಡಾಡಿ ಫ್ರೆಂಡ್ಸ್ ಬೇಕಾದಷ್ಟಿರೋದ್ರಿಂದ ಇವ್ಳಿಗ್ ನಾನು ಗೊತ್ತೇನೋ.... ನನಗೇ ಸರಿಯಾದ ಸಮಯದಲ್ಲಿ ನನ್ನ ನೆನಪು ಕೈಕೊಟ್ಟು, ಕಾಲಿಗೆ ಬುದ್ಧಿ ಹೇಳಿದೆ. ಅಂತ ತೀರ್ಮಾನಿಸಿಸ್ಕೊಂಡು..... ಪೆಚ್ಚುಪೆಚ್ಚಾದ್ರೂ, ಮೇಲೆ ಏನೂ ತೋರಿಸ್ಕೋಳ್ದೆ ಮತ್ತೇನ್ಸಮಾಚಾರ! ಮನೇಲೆಲ್ಲಾ ಅರಾಮಾ.....ಅಂತ ಕೇಳ್ದೆ ನೋಡಿ....ಪುಣ್ಯಾತ್ಗಿತ್ತಿ, ಅದು ಮಾಲ್ ಊ ಅನ್ನೋದೂ ಮರೆತು ತನ್ನ ಸಂಸಾರದ ಜಂಜಾಟ, ಗಂಡನ, ಅತ್ತೆ~ಮಾವ, ನಾದಿನಿ, ಮಕ್ಳು, ಹೀಗೇ ಎಲ್ಲರ ಪುರಾಣನೂ ಬಿಚ್ಚಿಟ್ಲು. ಇಡೀ ಸಂಸಾರದ ಜವಾಬ್ದಾರಿ ತನ್ನ ಮೇಲೇ ಬಿದ್ದು ಅದೆಷ್ಟು ಕಷ್ಟ ಪಡ್ತಿದ್ದಾಳನ್ನೋ ವಿಷಯ ನನಗೆ ಚೆನ್ನಾಗಿ ಅರ್ಥ ಮಾಡಿಸಿದ್ಲು(?) ಮತ್ತೆ ನಿಂಗೇನ್ ಬಿಡು....... ಮಹಾರಾಣೀ ಥರದ ಜೀವನ, ಹೇಳಿದ್ ಮಾತು ಕೇಳೋ ಗಂಡ, ಹಾಕಿದ ಗೆರೆ ದಾಟದ ಮಕ್ಕಳು, ನಿನ್ನ ನೋಡಿದ್ರೆ ಹೊಟ್ಟೆ ಕಿಚ್ಚಾಗುತ್ತೆ ಅಂತೆಲ್ಲ ಹೊಗಳ್ತಾ... "ಹೌದಾ.... ನಾನಿಷ್ಟು ಅರಾಮಾಗಿದ್ದೀನಾ...? ಮತ್ತೆ ದಿನಾ ನಮ್ಮನೇಲಿ ಎಲ್ಲ ಕಚ್ಚಾಡ್ಕೊಳ್ಳೋದು ನನ್ ಭ್ರಮೆನಾ? ಅನ್ನೋ ಹಾಗೆ ಮಾತಾಡಿ.....ನಂಗೂ ಒಮ್ಮೆಲೇ, ನಮ್ಮನೇವ್ರೆಲ್ಲಾ ಇಷ್ಟೊಳ್ಳೇವ್ರಾಗಿದ್ದು ಹೇಗೆ? ಯಾವಾಗ ಅಂತ ತಲೆ ಬಿಸಿ ಆಗೋ ಹಾಗೆ ಮಾಡಿದ್ಲು. ಏನ್ ಐದು ವರ್ಷದಲ್ಲಿ ಇಷ್ಟೊಂದು ಡುಮ್ಮಿ ಆಗಿಬಿಟ್ಟೆ....? ಅಂದ್ಲು. ಅಯ್ಯೋ ಮೊದ್ಲಿಂದಾನೂ ನಾ ಹೀಗೇನೇ ಅಲ್ವಾ ಅಂದಿದ್ದಕ್ಕೆ...... ನಾ ನೋಡು.... ಯೋಗ, ಧ್ಯಾನ ಅಂತ ಹೇಗೆ ಮೈನ್ಟೇನ್ ಮಾಡ್ಕೊಂಡಿದ್ದೀನಿ..... ಅಂದ್ಲು. ಯಾವ ಕಡೆಯಿಂದಲೂ ಮೈನ್ಟೈನ್ ಕಾಣ್ದಿದ್ರೂ ಮೊದಲು ಅವ್ಳು ಹೇಗಿದ್ಲೂ ಅಂತ ನನಗೆ ನೆನಪಿದ್ರೆ ತಾನೆ.... ಏನೂ ಹೇಳಲಾಗದೇ ಬಾಯಿಗೆ ಬೀಗ ಹಾಕ್ಕೊಂಡೆ.

ಅಲ್ಲ ಕಣೇ ನಿನ್ ಕಸಿನ್ ಇದ್ನಲ್ಲ......ಅದೇ ನಿನ್ ಸೋದರತ್ತೆ, ಗಂಡನ ಅಕ್ಕನ ಹೆಂಡತಿಯ ತಂಗೀ ಭಾವ...... ನನ್ ಹಿಂದೇನೇ ಸುತ್ತತಾ ಇದ್ನಲ್ಲ.....ಈಗ ಹೇಗಿದ್ದಾನೆ? ಅಂದ್ಲು. ಯಪ್ಪಾ ಯಾವ ಕಸಿನ್ನೋ... ಇವಳ ನೆನಪೇ ತಾರಮ್ಮಯ್ಯ ಆಡ್ತಿದ್ರೆ.....ಇನ್ನು ಅವ್ಯಾರಪ್ಪ ಅಷ್ಟು ಹತ್ತಿರದ(?) ಕಸಿನ್ನೂ ಅನುಸ್ತು.....ಜೊತೆಗೆ ಇವಳ ನೆನಪಿನ ಶಕ್ತಿಗೆ ಹೊಟ್ಟೆಕಿಚ್ಚೂ ಆಯ್ತು. ಏನೋ ಒಂದು ಹೇಳಿ ಬಚಾವಾದೆ ಅನ್ನಿ. ಹಾಗೇ ಅದೂ ಇದೂ ಮಾತಾಡ್ತಾ ಅಲ್ಲೇ ಇದ್ದ ಫುಡ್ ಕಾರ್ನರ್ ಗೆ ಹೋದ್ವಿ.....ಏ ಚುಮ್ಮಿ ನಿಂಗೆ ಸ್ನ್ಯಾಕ್ಸ್ ಇಷ್ಟ ಅಲ್ವಾ? ಬಾ, ನಾನ್ ಕೊಡಿಸ್ತೀನಿ, ನಾ ನಿಂಗೊಂದ್ ಟ್ರೀಟ್ ಕೊಡ್ಸೋದ್ ಬಾಕಿ ಉಳಿದಿತ್ತಲಾ ಅಂತ ಕಕೊರ್ಂಡು ಹೋದ್ಲು.....ಯಾವ ಟ್ರೀಟೂ? ನೆನಪಾಗ್ಲಿಲ್ಲ.....ಆದ್ರೆ ಬಿಟ್ಟಿ ಟ್ರೀಟ್ ಬಿಟ್ಟೋರುಂಟೆ? ಖುಷಿಯಿಂದ ಹೋದೆ......ಆರ್ಡರ್ ಮಾಡಿದ್ದೇ ಮಾಡಿದ್ದು, ಎಂಜಾಯ್ ಮಾಡ್ತಾ ತಿಂದಿದ್ದೇ ತಿಂದಿದ್ದು. ಅವ್ಳು ಮಾತ್ ಮಾತಿಗೆ ಚುಮ್ಮಿ ಹಾಗೆ ಕಣೆ, ಚುಮ್ಮಿ ಹೀಗೇ ಕಣೇ ಅಂತ ಹೇಳ್ತಿದ್ರೆ......ಕರ್ಮ, ಎಷ್ಟು ತಲೆ ಚಚ್ಚಿಕೊಂಡ್ರೂ ನನಗೆ ಅವಳ ಹೆಸರು ನೆನಪಾಗಬಾರದೆ? ನಂಗೂ ಅವ್ಳ ಹೆಸರು ತುಂಡು ಮಾಡಿ ಬಿಸಾಕ್ಬೇಕಿತ್ತು.....ಆಗ್ಲೇ ಇಲ್ಲ. ಅಷ್ಟರ ಮಧ್ಯೆ 'ನೋಡು ನಿನಗೆ ಇನ್ನೂರು ರೂಪಾಯಿ ಕೊಡೋಕಿತ್ತು ಆ ಸೀರೆದು....' ಅಂತ ಕೊಟ್ಟಾಗಲಂತೂ ಎಲ್ಲ ಅಯೋಮಯವೆನಿಸತೊಡಗಿತು. ಯಾವ ಸೀರೆ? ನೀನ್ಯಾಕೆ ನಂಗೆ ದುಡ್ಡು ಕೊಡ್ಬೇಕು? ಅಂದಿದ್ದಕ್ಕೆ.....'ಅಯ್ಯೋ ನೀನಿಷ್ಟು ಒಳ್ಳೆಯವಳಾಗೋದೇನೂ ಬೇಡ.... ಫ್ರೆಂಡ್ಷಿಪ್ ಮಧ್ಯೆ ದುಡ್ಡಿನ ವಿಚಾರ ಬರ್ಬಾರ್ದು ನೋಡು....ಇಟ್ಕೊ ಅಂತ ಬಯ್ತಾ ತಾನೇ ನನ್ನ ಬ್ಯಾಗ್ ಗೆ ತುರುಕಿದಾಗ, ನಂಗೆ ಹಣದ ವಿಷಯದಲ್ಲಿ ಏಮಾರಿಸಿದ ಫಂಡ್ಸೇ ಜಾಸ್ತಿ ಇರೋವಾಗ, ಛೆ ಛೆ....ಇಷ್ಟು ಒಳ್ಳೇ ಗೆಳತಿಯನ್ನ ನಾನು ಮರೆತಿದ್ದಾದರು ಹೇಗೆ? ಅಂತ ಮನದಲ್ಲೇ ತಲೆ ಚಚ್ಕೊಂಡೆ.....ಏನೂ ಉಪಯೋಗವಾಗ್ಲಿಲ್ಲ......ಅಲ್ಲೇ ನಮ್ಮಿಂದ ಸ್ವಲ್ಪ ಆಚೆ ಕೂತವಳನ್ನ ತೋರಿಸ್ತಾ..... ಏ ನೋಡು, ನಮ್ಮಿಬ್ಬರ ಹತ್ರ ಮಾತ್ಬಿಟ್ಟಿದ್ಲಲ್ಲಾ.....ಸರಳಾ, ಅದೇ ಸುಳ್ಳಿ ಸಳ್ಳಿ....ಅವಳ್ತರಾನೇ ಇಲ್ವಾ.....ಇವ್ಳೂ ಅಂತ ಹೇಳ್ತಿದ್ರೆ.... ಪೆಕರು ಪೆಕರಾಗಿ ತಲೆ ಆಡಿಸಿ ನಾನೇ ಸುಳ್ಳಿಯಾದೆ. 'ಆ ಸಳ್ಳಿ ಅಂತೂ ಯಾವಾಗ್ಲೂ ನಿನ್ನ ಡುಮ್ಮಿ, ಪೆದ್ದು, ಗೂಬೆ ಅಂತೆಲ್ಲ ಬಯ್ತಿದ್ಲಲ್ಲಾ...... ಆಗ್ಲೂ ನೀನು ಹೀಗೇ ಮಂಗನಂಗೇ ಆಡ್ತಿದ್ದಿ..... ಗೂಸ್ಲು ನೀನು, ಹೆದರ್ಪುಕ್ಲಿ, ನಾನಾಗಿದ್ದಕ್ಕೆ ನಿನ್ನ ಜೊತೆ ಫ್ರೆಂಡ್ಷಿಪ್ ಉಳಿಸ್ಕೊಂಡಿದ್ದೆ, ' ಅಂತೆಲ್ಲ ಹೇಳ್ತಿದ್ರೆ ಇವಳ ಜೊತೆ ಆ ಪುಣ್ಯಾತ್ಗಿತ್ತಿ ಸಳ್ಳಿಯ ಮಾತೂ ನೆನಪಿಗೆ ಬರದೇ ಒದ್ದಾಡಿದೆ. ಇವಳು ಸುತ್ತಿ ಬಳಸಿ ನನಗೇ ಬಯ್ಯುತ್ತಿದ್ದಾಳೆಂದು ಕೋಪವೂ ಬರತೊಡಗಿತು. ನನಗೇನಾದ್ರೂ ಸ್ಪ್ಲಿಟ್ ಪರ್ಸನಾಲಿಟಿ ಖಾಯಿಲೆ ಇದೆಯಾ?.....ಅದು ಇದರ ಇನ್ನೊಂದು ಭಾಗವಾ ಅನಿಸಿ ಭಯವಾಗತೊಡಗಿತು. ಲೋ ಇದ್ದ ಬಿ.ಪಿ, ಹೈ ಆಗತೊಡಗಿತು. ಆದ್ರೂ ತಾನಾಗೇ ನೆನಪು ಮಾಡಿ ಟ್ರೀಟ್ ಕೊಡ್ಸಿದ ಗೆಳತಿ(?)ಗೆ ವಾಪಸ್ ಬಯ್ಯೋದಾದ್ರೂ ಹೇಗೆ? ಅದ್ರೂ ಸಂಕಟ ತಡೀಲಾರ್ದೇ, ಅವಳ ಸ್ವಭಾವವನ್ನು ಅಂದಾಜಿಸಿ......'ನೀನೇನ್ ಮಹಾ ಬಿಡು..... ಬರೀ ಜಗಳಗಂಟಿ ಆಗಿದ್ದಿ, ನಾನಾಗಿದ್ದಕ್ಕೆ ಹೊಂದ್ಕೊಂಡ್ ಹೋದೆ, ಇನ್ಯಾರಾದ್ರಾಗಿದ್ರೆ ಯಾವಾಗ್ಲೋ ನಿನ್ನ ದೂರ ಮಾಡ್ಕೊಂಡಿರೋವ್ರು....." ಅಂತ ಹೇಳ್ದೆ ನೋಡಿ..... ಕಾಲು ಗಂಟೆ ಬಿಡದೇ ನನ್ನ ಜನ್ಮ ಜಾಲಾಡಿ ಬಿಟ್ಳು. ಅವ್ಳು ಹೇಳಿದ್ರಲ್ಲಿ ನನಗೆ ಸಂಬಂಧಿಸಿದ ವಿಷಯಗಳು ಹೆಚ್ಚು ಇಲ್ದಿದ್ರೂ..... ಹೇಳಿದ್ರೆ ಅದನ್ನವಳು ಕೇಳುವ ಸ್ಥಿತಿಯಲ್ಲಿಲ್ದಿದ್ರಿಂದ ಮಿಕಿಮಿಕಿ ಅವ್ಳನ್ನೇ ನೋಡ್ತಾ ಕೂತೆ.

ಅಷ್ಟೊತ್ತಿಗೆ ಅವ್ಳಿಗೊಂದು ಕಾಲ್ ಬಂತು. ಮಾತಾಡ್ತಾ ನನ್ನೊಮ್ಮೆ ದುರುಗುಟ್ಟಿ

ನೋಡಿದ್ಲು. ಅಥವಾ ಅದು ನನ್ನ ಭ್ರಮೆಯೋ ಗೊತ್ತಾಗ್ಲಿಲ್ಲ. ಇನ್ನು ನನಗೆ ನೆನಪಿಲ್ಲದ ಯಾವ ನನ್ನ ಪರಿಚಯದವ್ರು ಏನು ಹೇಳಿದ್ರೋ.....ಇನ್ನೇನು ಕಾದಿದೆಯೋ? ಅಂದ್ಕೊಂಡು ಗುಬ್ಬಚ್ಚಿ ಮರಿ ಥರ ಕೂತೆ. ಸ್ವಲ್ಪ ಆಚೆ ಹೋಗಿ ಮಾತಾಡಿ ಮತ್ತೆ ಟೇಬಲ್ ಹತ್ತಿರ ಬಂದವಳೇ......ಅಯ್ಯೋ ನಿನ್ನ ಮೊಬೈಲ್ ನಂಬರ್ ನನ್ನ ಹತ್ರ ಇಲ್ವಲ್ಲಾ.....ಕೊಡು ಅಂದ್ಲು. ನಾನೂ ಹೆಚ್ಚೇನೂ ಯೋಚಿಸದೇ ಕೊಟ್ಬಿಟ್ಟೆ. ಅಷ್ಟರಲ್ಲೇ ಅಲ್ಲೇ ಬಂದ ವೆಯಿಟರ್ ಗೆ ಹೇಳಿ ಮನೆಗೂ ಏನೇನೋ ಒಂದ್ ರಾಶಿ ಪಾರ್ಸೆಲ್ ತಗೊಂಡ್ಲಪ್ಪಾ......ಏನ್ ಬಿಂದಾಸ್ ಇವ್ಳೂ ಅಂದ್ಕೊಂಡೆ. ಅಷ್ಟೊಂದು ಜಂಕ್ಫುಡ್ ಆರೋಗ್ಯಕ್ಕೆ ಒಳ್ಳೇದಲ್ಲವೆಂದು ಹೇಳೋಣವೆಂದುಕೊಂಡರೂ ಮತ್ತೆ ಅವ್ಳಿಂದ ಗೂಸ್ಲು, ಜುಗ್ಗಿ ಅಂತ ಹೇಳಿಸ್ಕೊಳ್ಳೋದು ಬೇಡವೆನಿಸಿತು. ಮತ್ತೆ ಅವ್ಳೇ ತಾನೇ ಬಿಲ್ ಕೊಡೋದು......ನಂಗೇನು ಅಂತ ಸುಮ್ನೆ ನನ್ನ ಪ್ಲೇಟ್ ಖಾಲಿ ಮಾಡುವ ಕಡೆ ಗಮನ ಕೊಟ್ಟೆ. ಅಷ್ಟೊತ್ತಿಗೆ ಗ್ರಹಚಾರ ನನಗೂ ಒಂದು ಕಾಲ್ ಬಂತು. ಅವ್ಳು ಎಲ್ಲ ಪ್ಯಾಕ್ ಮಾಡ್ಕೊಂಡವ್ಳೇ.......ಬರ್ತೀನಿ ಅರ್ಜಂಟ್ ಹೋಗ್ಬೇಕು ಬಾಯ್ ಅಂದು ಹೊರಟಳು. ನನಗೂ ಈ ಅಪರಿಚಿತ ಪರಿಚಿತೆಯಿಂದ ಬಿಡಿಸ್ಕೊಂಡ್ರೆ ಸಾಕಿತ್ತಾ......ಓ.ಕೆ ಬಾಯ್ ಅಂದೆ.

ಮೊಬೈಲ್ನ ಸಂಭಾಷಣೆ  ಮುಗಿಯುವ ಹೊತ್ತಿಗೆ ಟಣ್ ಅಂತ ಒಂದು ಮೆಸೇಜ್ ಬಂತು....... "ಏನ್ರೀ ನೀವು? ನಾನು, ನಿಮ್ಮನ್ನು  ನನ್ನ ಗೆಳತಿ ಸುಮತಿ ಅಂತ ಮಿಸ್ಟೇಕ್ ಮಾಡ್ಕೊಂಡು ಮಾತಾಡಿದ್ರೆ, ನೀವಾದ್ರೂ ಹೇಳ್ಬಾರ್ದಾ? ಅದು ನಾನಲ್ಲ ಅಂತ, ಸಾಲದ್ದಕ್ಕೆ ನಾನ್ ಕೊಟ್ಟ ದುಡ್ಡೂ ಇಸ್ಕೊಂಡ್ರಿ..... ನಿಮ್ಗ್ಯಾಕೆ ನಾನು ಟ್ರೀಟ್ ಕೊಡ್ಬೇಕು.....? ಇಲ್ಲಿನ ಬಿಲ್ ನಾನು ಪೇ ಮಾಡಿಲ್ಲ..... ನೀವೇ ಮಾಡಿ.....ಇನ್ಯಾರಿಗೂ ಹೀಗೆ ಮೋಸ ಮಾಡ್ಬೇಡಿ(?)..." ಅಂತ  ಅದನ್ನು ಓದಿದ್ಮೇಲೆ ನಿಜವಾಗಿಯೂ ನಾನು ಗೂಬೆ, ಪೆದ್ದು ಆಗಿದ್ದು ಅನುಭವಕ್ಕೆ ಬಂತು. ಅಷ್ಟೊತ್ತಿಗೆ ವೆಯಿಟರ್ ಬಿಲ್ ತಂದಿಟ್ಟ...... ನಂಗೆ ನಿಜವಾಗ್ಲೂ ಅದು ಶಿವಧನಸ್ಸಿನ ಹಾಗೇ ಕಾಣ್ತು..... ತಿಂದಿದ್ದೆಲ್ಲ ಕಣ್ಮುಂದೆ ನಕ್ಕಂತಾಯ್ತು.ಮರ್ಯಾದೆ ಪ್ರಶ್ನೆ......ಒಟ್ಟು ಸಾವಿರದಿನ್ನೂರು ರೂಪಾಯಿಯ ಬಿಲ್. ಆ ಕನ್ಫ್ಯೂಸ್ ಕನ್ಯೆ ಕೊಟ್ಟ ಇನ್ನೂರಕ್ಕೆ ನಾನೊಂದು ಸಾವಿರ ಸೇರಿಸಿ ಬಿಲ್ ಜೊತೆ ಕುಕ್ಕಿದೆ. ಟಿಪ್ಸ್ ಬೇರೆ ಎಕ್ಸ್ಟ್ರಾ..... ಹೊರ ಬರುವಾಗ ಅದೇ ಟೆಡ್ಡಿಬೇರ್‌ಗಳು ನನ್ನನ್ನು ನೋಡಿ ಈವತ್ತೂ ತಗೋಳಲ್ವಾ? ಅಂತ ನಕ್ಕಂತಾಯ್ತು.....ನಾನು ಮನದಲ್ಲಿ ಅಳುತ್ತಲೇ, ಇನ್ನು ಯಾರು ಪರಿಚಯ ಅಂತ ಮಾತಾಡ್ಸಿದ್ರೂ  ನಂಗೆ ನೆನ್ಪಾಗೋ ತನಕ ಮಾತಾಡಲ್ಲ ಅಂತ ಶಪಥಗೈದು ಮನೆಗ್ಬಂದೆ.

■

ಕುಡುಕನೊಬ್ಬ ತೂರಾಡಿಕೊಂಡು ಹೋಟೆಲಿಗೆ ಹೋಗಿ ಒಂದು ಟೀ ಆರ್ಡರ್ ಮಾಡಿ ಕೂತ ಮಾಣಿ ಟೀ ತಂದಿಟ್ಟರೂ ಎಷ್ಟು ಹೊತ್ತಾದರೂ ಟೀ ಕುಡಿಯಲೇ ಇಲ್ಲ. ಇನ್ನೇನು ಟೀ ಕುಡಿಯೋಣ ಅಂತ ಟೀ ಕಪ್ ಕಡೆ ನೋಡಿದರೆ ಅದರಲ್ಲಿ ಎರಡು ನೊಣಗಳು ತೇಲುತ್ತಿದ್ದವು. ಆಗ ಕುಡುಕ ನೀವಿಬ್ಬರೂ ಒಟ್ಟಿಗೇ ಆತ್ಮಹತ್ಯೆ ಮಾಡ್ಕೊಬೇಕು ಅಂತ ತೀರ್ಮಾನ ಮಾಡಿರಬಹುದು. ಆದರೆ ಅದಕ್ಕೆ ನನ್ನ ಟೀ ಕಪ್ಪೇ ಆಗಬೇಕಿತ್ತಾ.....

# ಕಾಲ ಕೆಟ್ಹೋಯ್ತು ಅಂತ ಹೇಳ್ಬೇಡಿ ಸ್ವಾಮಿ

ಅಣಕು ರಾಮನಾಥ್

'ಕುಲಗೆಟ್ಹೋಯ್ತು! ಹಾಳಾಗ್ಹೋಯ್ತು!' ಮುನಿಯನ ಅಸಹನೆಯೇ ಮೂರ್ತಿವೆತ್ತ ಮುಖದಲ್ಲಿ ಟಾಪ್ ಕ್ವಾಲಿಟಿ ಐರನ್ ಬ್ಯಾಗ್‌ನಿಂದ ಐರನ್ ಮಾಡಿದರೂ ನೇರಗೊಳಿಸಲಾಗದಂತಹ ಮಡತೆಗಳು ಮೂಡಿದವು.

'ಏನು ಹಾಳಾಯ್ತೋ ಮುಖಾರಿ?' ಎಂದೆ.

'ಮುಖಾರಿ? ನಾನೇ?'

'ಹೂಂ. ನಿನ್ನ ಮುಖಕ್ಕೆ ನೀನೇ ಶತ್ರು. ಆಗಷ್ಟೇ ವೈಟ್ ಟಾಪಿಂಗ್ ಮಾಡಿರುವಂತಿರುವ ನಿನ್ನ ಸಹಜ ಮುಖವನ್ನು ಮೂರು ಮಳೆಗಳ ನಂತರದ ಪಾಟ್ಹೋಲಾವೃತ ಮುಖದಂತೆ ಮಾರ್ಪಡಿಸಿಕೊಳ್ಳುವುದು ಮುಖಸ್ನೇಹಿ ಗುಣವಂತೂ ಅಲ್ಲ. ಕುಲಗೆಟ್ಟಿದ್ದೇನ್ಹೇಳು.'

'ಕಾಲ.'

'ಭೂತಕಾಲವೋ, ವರ್ತಮಾನವೋ, ಭವಿಷ್ಯತ್ತೋ?'

'ವರ್ತಮಾನವೇ. ಹೇಗಿತ್ತು ಆ ಕಾಲ! ಈಗ ಎಲ್ಲಿ ನೋಡಿದರೂ ಬಾಯ್ಬಿಟ್ರೆ ಸುಳ್ಳು!'

'ದ್ವಾಪರದಲ್ಲೂ ಸುಳ್ಳಿತ್ತಲ್ಲೋ! 'ಅಮ್ಮ ನಾನು ದೇವರಾಣೆ ಬೆಣ್ಣೆ ಕದ್ದಿಲ್ಲಮ್ಮ! ಎಲ್ಲ ಸೇರಿ ನನ್ನ ಬಾಯಿಗೆ ಬೆಣ್ಣೆಯ ಮೆತ್ತಿದರಮ್ಮ' ಅಂತ ಕೃಷ್ಣ ಬಟರ್ ಲಿಪ್ಸ್ ಮೂಲಕ ಹೇಳಿದ್ದು ಸುಳ್ಳೇ!'

'ಅದು ಮಕ್ಕಳ ಮಾತಾಯಿತು ಬಿಡು. ದೊಡ್ಡವರು, ತಿಳಿದವರು ಸುಳ್ಳು ಹೇಳೋದೂಂದ್ರೇ... ಛೆ!'

'ತ್ರೇತಾಯುಗದಲ್ಲೇ ಹರಿಶ್ಚಂದ್ರ ಸುಳ್ಳು ಹೇಳಿದ್ದ!'

'ವಾಟ್ ನಾನ್ಸೆನ್ಸ್! ಹರಿಶ್ಚಂದ್ರ ಈಸ್ ದ ಎಪಿಟೋಮೂ ಆಫ್ ಟ್ರೂತೂ.'

'ನಿಜವೇ. ಆದರೆ ಅವನ ಸಜ್ಜನಿಕೆಯೇ ಅವನಿಂದ ಸುಳ್ಳನ್ನು ಹೊರಡಿಸಿತಂತೆ.'

'ಎಕ್ಸ್‌ಪ್ಲೇಯ್ನ್ ಯುವರ್ ಸ್ಟ್ಯಾನ್ಸ್!' ಹಮಾಸನ್ನು ಕಂಡ ಇಸ್ರೇಲಿನಂತೆ ಸಿಡಿದೆದ್ದ ಮುನಿಯ.

'ವಿಶ್ವಾಮಿತ್ರ ಬಂದ. 'ಕೊಡು ಕಾಸು.' ಎಂದ. 'ಹೇ ಪ್ರಭೋ, ದಯಾನಿಧೇ! ಕೊಂಚ ಸಮಯ ಕೊಡು. ನಿನ್ನ ಸಾಲವನ್ನು ಪೈ ಟು ಪೈ ಚುಕ್ತಾ ಮಾಡುತ್ತೇನೆ.' ಎಂದ ಹರಿಶ್ಚಂದ್ರ. ಕೂಡಲೆ ನಕ್ಷತ್ರಿಕನು 'ಗುರುಗಳೇ, ಹರಿಶ್ಚಂದ್ರ ಸುಳ್ಳು ಹೇಳಿಬಿಟ್ಟ. ನೀವೇ ಗೆದ್ದಿರಿ' ಎನ್ನುತ್ತಾ ದೂಲದ ಮಟ್ಟಕ್ಕೆ ಹಾರಿಳಿದ. 'ಯಾವಾಗ ಸುಳ್ಳಾಡಿದನೋ?' ಎಂದರು ವಿಸ್ಮಿತ ಋಷಿವರ್ಯರು. 'ಈಗಲೇ! ನಿಮ್ಮನ್ನು ದಯಾನಿಧೇ ಎಂದನಲ್ಲ! ಅದು ಅಪ್ಪಟ ಸುಳ್ಳಲ್ಲವೇ?' ವಕೀಲೀ ಪಾಯಿಂಟನ್ನು ಮುಂದಿರಿಸಿದ ನಕ್ಷತ್ರಿಕ. ದೇರ್ ಯೂ ಆರ್. ಐ ರೆಸ್ಟ್ ಮೈ ಕೇಸ್' ಎಂದೆ.

'ಇವೆಲ್ಲ ಕವಿಸಮಯಕ್ಕೆ ಸರಿ ಅಷ್ಟೆ. ವಾಸ್ತವವಾಗಿ ಈಗಿನಷ್ಟು ಸುಳ್ಳು ಯಾವ

ಕಾಲದಲ್ಲೂ ಇರಲಿಲ್ಲ' ತನ್ನ ವಾದಕ್ಕೇ ಅಂಟಿಕೊಂಡ ಮುನಿಯ.

'ವಾಲ್ಮೀಕಿಯೇ ಸುಳ್ಳು ಹೇಳಿದ್ದಾರೆ' ಮತ್ತೊಂದು ಬಾಂಬ್ ಎಸೆದೆ.

'ಸಂದರ್ಭಸಹಿತ ವಿವರಿಸಿಬಿಡಯ್ಯ ಸೊಟ್ಟಬುದ್ಧಿ!' ಅಯಾಚಿತವಾಗಿ ಬಿರುದೀಯುತ್ತಾ ಠೇಂಕರಿಸಿದ ಮುನಿಯ.

'ಅಯೋಧ್ಯಾವರ್ಣನೆಯ ಹದಿನೇಳನೆಯ ಶ್ಲೋಕದಲ್ಲಿ 'ಇಕ್ಷುಕಾಂಡರ ಸೋದಕಾಮ್' ಎಂದು ಬರೆದಿದ್ದಾರೆ. ಅಯೋಧ್ಯೆಯಲ್ಲಿನ ನೀರು ಕಬ್ಬಿನಹಾಲಿನಂತೆ ಇದ್ದಿತೆನ್ನುವುದು ಸುಳ್ಳು.'

'ಹೇಗೆ ಹೇಳುತ್ತೀಯೆ? ನಿನ್ನ ಬಳಿ ಅಂದಿನ ನೀರಿನ ಸ್ಯಾಂಪಲ್ ಇದೆಯೇನು?' ಸಂದೇಹಕ್ಕೆ ಮತ್ತೊಂದು ಹೆಸರೇ ಮುನಿಯ.

'ಎಲಿಮೆಂಟರಿ ಮಿಸ್ಟರ್ ಮುನಿಯ. ರಾಮರಾಜ್ಯದಲ್ಲಿ ಅನ್ಯಾಯ ನಡೆಯುವಂತಿರಲಿಲ್ಲ. ಹೀಗಾಗಿ ಇರುವೆ, ಗೊದ್ದಗಳನ್ನು ವಿನಾ ಕಾರಣ ಸಾಯಿಸುವಂತಿರಲಿಲ್ಲ. ಒಂದು ವೇಳೆ ನೀರು ಕಬ್ಬಿನ ಹಾಲಿನಂತಿದ್ದಿದ್ದರೆ ಅದಕ್ಕೆ ಇರುವೆ, ಗೊದ್ದಗಳು ಬರುತ್ತಿದ್ದವು. ಜನರು ಅವನ್ನು ಕೊಲ್ಲುತ್ತಿದ್ದರು. ಇದು ರಾಮರಾಜ್ಯದ ಚಿತ್ರಣಕ್ಕೆ ವಿರುದ್ಧವಾದ್ದರಿಂದ ನೀರು ನೀರೇ, ಕಬ್ಬಿನಹಾಲು ಕಬ್ಬಿನಹಾಲೇ ಎಂಬುದು ನನ್ನ ವಾದ' ಎಂದೆ.

'ಕಾವ್ಯಾರಿ ಕಣಯ್ಯಾ ನೀನು! ಉಪಮಾ ಕಾಳಿದಾಸಸ್ಯ ಎಂದರೆ 'ಹೊಟೇಲ್ ಕಾಳಿದಾಸ'ದಲ್ಲಿ ದೊರಕುವ ಉಪ್ಪಿಟ್ಟು' ಎನ್ನುವ ಜಾಯಮಾನ ನಿನ್ನದು. ಸಾಹಿತ್ಯ ಸಂಗೀತ ಕಲಾವಿಹೀನನಾದ ಪಶುವೇ, ಕೇಳುವಂಥಾತ್ತನಾಗು. ಸುಳ್ಳಿನ ವಿಷಯದಲ್ಲಿ ನಿನ್ನನ್ನು ಒಪ್ಪಿಸುವುದು ಸುಳ್ಳೇ ಎಂದು ಮನದಟ್ಟಾಗಿರುವುದರಿಂದ ಕಾಲ ಕೆಟ್ಟಿದೆಯೆನ್ನಲು ಪರಿಸರ ಮಾಲಿನ್ಯದತ್ತ ನಿನ್ನ ಗಮನವನ್ನು ಸುಳಿಯಲು ಬಯಸುತ್ತೇನೆ' ಮುನಿಯ ನನ್ನನ್ನು ಹಳಿಯುತ್ತಲೇ ತನ್ನ ಮಾತಿನ ಹಳಿಯನ್ನು ಬದಲಿಸಿದ.

'ಅಥ ಶ್ರೀ ಮಹಾಭಾರತ ಕಥಾ!'ಎಂದೆ.

'ವಾಟ್ ಡೂ ಯೂ ಮೀನ್ ಮೀನ್ ಫೆಲೋ?'

'ರೆಫರ್ ಟು ಯಕ್ಷಪ್ರಶ್ನೆ ಎಪಿಸೋಡ್ ಮಿಸ್ಟರ್ ಮುನಿಯ. ನಾಲ್ಕು ಜನರು ನೀರು ಕುಡಿದರು; ನಾಲ್ವರೂ ಮಟಾಷ್. ಆ ಕಾಲದಲ್ಲೇ ಜಲಮಾಲಿನ್ಯ ಇತ್ತು.'

'ಒಪ್ಪಿದೆ. ಆದರೆ ಧಾರ್ಮಿಕ ಕ್ಷೇತ್ರದಲ್ಲಿ ಹೆಣ್ಣಿನ ಹಿಂದೆ ಹೋಗೋ ಸನ್ಯಾಸಿಗಳು ಇರೋದೂಂದ್ರೇನು! ರಿಯಲಿ ಡಿಸ್ಗಸ್ಟಿಂಗ್.'

'ನಿಜ. ಇದರ ಪ್ರವರ್ತಕರು ತ್ರೇತದಲ್ಲಿ ರಾವಣ, ದ್ವಾಪರದಲ್ಲಿ ಅರ್ಜುನ; ಇಬ್ಬರೂ ಸನ್ಯಾಸಿಗಳಾಗೇ ಬಂದರು, ಹುಡುಗಿಯರನ್ನ ಹಾರಿಸಿಕೊಂಡು ಹೋದರು. ಕಾಲಕ್ಕೂ ಕಾಲ್ಕೀಳಕ್ಕೂ ಏನೇನೂ ಸಂಬಂಧವಿಲ್ಲ!'

'ರಾಜಕೀಯವನ್ನ ನೋಡು... ಅಧಿಕಾರಕ್ಕೆ ಬರ್ತಿದ್ದಾಗೇ ಕೋಟಿ ಕೋಟಿ ಗುಳುಂ ಮಾಡಿ ಬೇರೆ ದೇಶದಲ್ಲಿ ತುಂಬ್ತುಂಬಿಡ್ತಾರಲ್ಲ...'

'ಕುಬೇರನ್ನ ಹೊಡೆದೂ, ಬಡಿದೂ ಅವನ ಏರೋಪ್ಲೇನನ್ನ ಲಂಕೆಗೆ ತೊಗೊಂಡ್ಹೋದ ರಾವಣ ಪ್ರಪಂಚದ ಮೊದಲ ಲೂಟಿಕೋರ.'

'ಒಪ್ಪೋಣ. ಆದರೆ ಡಿಫೆಕ್ಷನ್ನೂ...? ಇವತ್ತು ಈ ಪಾರ್ಟಿ, ನಾಳೆ ಆ ಪಾರ್ಟಿ ಅಂತ ಹಾರಾಡತ್ವಲ್ಲಾ, ಇದು ಕಾಲ ಕೆಟ್ಟಿರೋದ್ರ ಸೂಚನೆ ಅಲ್ವೇನು?'

'ಹ್ಹ! ವಿಭೀಷಣನೇ ಗೆಲ್ಲೋ ಪಕ್ಷ ಯಾವ್ದೂಂತ ಗುರುತಿಸಿ ಪಕ್ಷಾಂತರ ಮಾಡಿದ ಮೊಟ್ಟಮೊದಲ ಭಿನ್ನಮತೀಯ.'

'ಸರಿಯಪ್ಪ. ಹೋಗಲಿ, ಗ್ರೌಂಡ್ ವಾಟರ್ ಟೇಬಲ್ ಡಿಪ್ಲೀಷನ್ ಆಗೋಕ್ಕೆ ಶುರುವಾಗಿದ್ದಾದ್ರೂ ಈ ಕಾಲದಲ್ಲಿ ಅಂತ ಒಪ್ತೀಯಾ?'

'ಅದಕ್ಕೂ ಅರ್ಜುನನೇ ಫೋರ್ ರನ್ನರ್ರು. ಭೀಷ್ಮ 'ತಾಳಲಾರೆ ಇನ್ನು ತಡೆಯಲಾರೆ; ನೀಡು ನೀರು ಪಾರ್ಥ' ಎಂದಾಕ್ಷಣ ಬಾಣವನ್ನೇ ಬಿಟ್ ಮಾಡಿಕೊಂಡು ಧನುಸ್ಸನ್ನೇ ರಿಗ್ ಮಾಡಿಕೊಂಡು ಮೊಟ್ಟಮೊದಲ ಬೋರ್‌ವೆಲ್ ಕೊರೆದೇಬಿಟ್ಟ ಅರ್ಜುನ. ಅಂತರ್ಜಲದ ಆತಂಕಕ್ಕೆ ಅದೇ ಆರಂಭ.'

'ಛೆ! ಆಡಿದ್ದಕ್ಕೆಲ್ಲ ಒಂದೊಂದು ಪುರಾಣದ ಪೀಸನ್ನ ಸಿಕ್ಕಿಸ್ತಿದ್ದೀಯಲ್ಲಾ, ವಾಟ್ ಡು ಯೂ ವಾಂಟ್ ಟು ಕನ್ವೇ?'

'ಪ್ರಹ್ಲಾದನು ಉಸಿರಾಡಿದ ಗಾಳಿಯನ್ನೇ ಹಿರಣ್ಯಕಶಿಪುವೂ ಉಸಿರಾಡಿದ. ಅದೇ ಗಾಳಿಯನ್ನೇ ನರಸಿಂಹನೂ ಉಸಿರಾಡಿದ. ಅದೇ ಗಾಳಿ, ಅದೇ ಚಂದ್ರಾರ್ಕರು, ಅದೇ ಭೂಮಿ. ಯಾವುದೇ ವಾಹನಗಳಂತೆಯೇ ಆಗಾಗ್ಗೆ ಕೆಡೋದು ಮನುಷ್ಯನಷ್ಟೇ. ಕಾಲವಲ್ಲ. ಕಾಲ ಕೆಟ್ಹೋಯ್ತು ಅಂತ ಹೇಳ್ಬೇಡಿ ಸ್ವಾಮಿ!'

■



# ರಶಿಯನ್ ಮೆಟ್ರೋ ಮತ್ತು ನಕಲಿ ಪೋಲಿಸ್

ಜಯಶ್ರೀ ದೇಶಪಾಂಡೆ

"ಮೇರಾ ಜೂತಾ ಹೈ ಜಾಪಾನೀ ಯೇ ಪತಲೂನ್ ಇಂಗ್ಲಿಸ್ತಾನೀ ಸರ ಪೇ ಲಾಲ್ ಟೋಪೀ ರೂಸೀ ಫಿರ ಭೀ ದಿಲ್ ಹೈ ಹಿಂದುಸ್ತಾನೀ"

ರಾಜ್ ಕಪೂರನಿಗಾಗಿ ಮುಖೇಶ ಹಾಡಿದ್ದ ಹಾಡು ನಮ್ಮ ಮಾತ್ಕಾ (ಟ್ರಾವಲ್ಸ್) ಬಸ್ಸಿನ ಸ್ಟೀರಿಯೋದ ಸ್ಪೀಕರಲ್ಲಿ ಮಂದಮಂದವಾಗಿ ಕೇಳಿಸಿದಾಗ ಖುಶಿ ಅಚ್ಚರಿ ಎರಡೂ ಆಗಿದ್ದು ಸುಳ್ಳಲ್ಲ. ರಾಜಕಪೂರ್ ಮತ್ತು ಆತನ ಸಿನಿಮಾ,ಹಾಡು ರಶಿಯದಲ್ಲಿ ಮನೆಮಾತಾಗಿದ್ದ ಕಾಲ ಒಂದಿತ್ತು. ಭಾರತ ರಶಿಯಗಳ ನಡುವೆ ಸಾಂಸ್ಕೃತಿಕ ತಾರುತಂತಿಗಳ ವಿಭಿನ್ನ ಮಿಡಿತ ನಡೆದಿದ್ದ 2006ರ ಸುದ್ದಿ.

ಎಲ್ಲೆಲ್ಲಿ ಫೋಟೊ ತೆಗೆಯಬಹುದು ಎಲ್ಲೆಲ್ಲಿ ಬಾರದು ಅಂತ ಸರಿಯಾಗಿ ಗೊತ್ತಿಲ್ಲದೇ ರಶಿಯಕ್ಕೆ ಪ್ರವಾಸ ಹೋದವಳು ನಾನು. ಅಂಥದ್ದೆಲ್ಲ ಮೊದಲೇ ಗೊತ್ತಿರುವುದು ಅಷ್ಟು ಸುಲಭ ಅಲ್ಲ ತಾನೇ? ಅಲ್ಲ, ಹೀಗೂ ಒಂದು ಪೋಲೀಸ್ ಕಣ್ಣಿನ ಜಬರ್ದಸ್ತ್ ಕಾಮಿಡಿಯ ವಿಡಂಬನೆ ಇರ್ಲಿಕ್ಕೆ ಸಾಧ್ಯ ಎನ್ನುವ ಕಲ್ಪನೆ ಆಗುವುದಾದರೂ ಸಾಧ್ಯವೇ? ಅದೂ ವಿದೇಶದಲ್ಲಿ? ಪ್ರವಾಸ ಹೋದ ಮೇಲೆ ಆ ನೆಲದ, ಆ ದೇಶದ ವೈಶಿಷ್ಟಗಳನ್ನು ನಮ್ಮ ಕ್ಯಾಮೆರಾದಲ್ಲಿ ಬಂಧಿಸಿಟ್ಟುಕೊಳ್ಳದೆ ಮರಳಿ ಬರುವುದಾದರೂ ಸಾಧ್ಯವೇ? ಇಂಥ ಸಾಧ್ಯಾಸಾಧ್ಯತೆಗಳ ಗೊಂದಲದಲ್ಲಿ ಸೆಂಟ್ ಪೀಟರ್ಸ್ ಬರ್ಗ್ ನನಗೆ ಅವಿಸ್ಮರಣೀಯ ಚುರುಕಿನ ಅನುಭವವೊಂದನ್ನು ಕೊಟ್ಟದ್ದು ಖರೆ.

ಎರಡು ಸಾವಿರದಾ ಆರರ ಇಸವಿಯ ಸಂಗತಿ. ರಶಿಯ ಎಂದರೆ ನನಗೆ ಏನೋ ಕುತೂಹಲ, ಸೈಬೀರಿಯದ ಹಿಮಮರುಭೂಮಿಯಿಂದ ಹಿಡಿದು ಚೀನದ ನೆಲದಂಚಿಗೆ, ಯೂರೋಪಿನ ಉತ್ತರಾರ್ಧವನ್ನು ತೆರೆದಿಟ್ಟ ಅಸಂಖ್ಯ ಕೌತುಕಗಳ ನೆಲೆ ಅನಿಸುವುದು ಯಾಕೆಂದು ಗೊತ್ತಿಲ್ಲ. ಹಾಗೆ ನೋಡಿದರೆ ಆ ದಿನಗಳಲ್ಲಿ– ಹಿಂದೆ ಶತಮಾನಗಳ ವರೆಗೆ– ಹಾಸಿ ಹೊಚ್ಚಿಕೊಂಡಿದ್ದ ಕಮ್ಯೂನಿಸ್ಟ್ ವಾಸನೆಯಿಂದ ಅವರು ಪೂರ್ಣವಾಗಿ ಹೊರಬರಲು ಇನ್ನೂ ಸಮಯವಿತ್ತು, ಗೊರ್ಬಚೇವ್ ಕಾಲದ ಗ್ಲಾಸ್ ನಾಸ್ತ್–ಮತ್ತೆ ಪೆರೆಸ್ತ್ರೋಯಿಕಾ ಎರಡೂ ಆಗಿ ಮುಗಿದು ದಶಕಗಳೇ ಕಳೆದಿದ್ದರೂ ಅದರ ಹಳೆಯ ಚಾಳಿಗಳು ಅಷ್ಟು ಸುಲಭವಲ್ಲ ಮರೆಯಲು ಎಂಬ ಅನುಭವ ನನಗೆ ಒಮ್ಮೆ ಆಗೇ ಬಿಟ್ಟಿತು, ನಾನಲ್ಲಿಗೆ ಪ್ರಯಾಣಿಸಿದ್ದು ಫಿನ್ಲೆಂಡಿನ ಒಂದು ಪ್ರಮುಖ ಸಿಟಿ ಯೋಯನ್ಸುವಿನಿಂದ. ರಶಿಯದ ಇತಿಹಾಸ ಪ್ರಸಿದ್ಧ ಸೆಂಟ್ ಪೀಟರ್ಸ್ಬರ್ಗ್ ಅಲ್ಲಿಗೆ ಬಲು ಹತ್ತಿರ. ಅರ್ಥಾತ್ ಇವೆರಡೂ ದೇಶಗಳು ನೆರೆನಾಡುಗಳೇ ಆಗಿರುವಾಗ ಆ ನಾಡನ್ನು ನೋಡಿಯೇ ಬಿಡಬೇಕೆನಿಸಿದ್ದು ವಿಶೇಷವಲ್ಲ, ಆದರೆ ಫಿನ್ನಿಶ್ ರಶಿಯನ್ ಎರಡರಲ್ಲಿ ಯಾವದೇ ಭಾಷೆಯೂ ಗೊತ್ತಿಲ್ಲದಿದ್ದರೂ ಅಲ್ಲಿಗೆ ನಾನು ಒಬ್ಬಳೇ ಹೋಗಿ ಬರುವ ಸಾಹಸ ಮಾಡಿದ್ದು ಖಂಡಿತ ವಿಶೇಷವೇ!

ಬಸ್ ತುಂಬ ನಾಲ್ದಿಕ್ಕಿನಿಂದ ಬಂದ ವಿವಿಧ ದೇಶಿಗರು, ಹೆಚ್ಚಾನುಹೆಚ್ಚು ಯುರೋಪ್ ವಾಸಿಗಳೇ. ಅವರಾಡುತ್ತಿದ್ದ ಯಾವುದೇ ಮಾತು ನನಗರ್ಥವಾಗಲಿಲ್ಲ. ಮುಖ್ಯವಾಗಿ ಅಲ್ಲೆಲ್ಲ ಬಸ್ ಡ್ರೈವರ್ ಮಾತ್ರ ಇರುವುದು ವಾಡಿಕೆ. ಪ್ರಯಾಣಿಕರ ಸಮಸ್ತ ಜವಾಬ್ದಾರಿ ಆತನದ್ದೇ. ಫಿನ್ನಿಶ್‌ನಲ್ಲಿ "ಹೇಯ್ ಹುವೊಮೆಂತಾ.. ತೆರ್ವೆತ್ತುಲೋವಾ"

(ಎಲ್ಲರಿಗೂ ಶುಭೋದಯ.. ಸುಸ್ವಾಗತ) ಎಂದು ಕೈ ಚಾಚಿಚಾಚಿ ನಮ್ಮನ್ನು ನಮ್ಮ ಸೀಟಿಗೆ ಕರೆದೊಯ್ದು ಅವನಿಗೆ ಪ್ರತಿಯೊಬ್ಬರಿಂದ "ಕೀತೋಸ್ ಕೀತೋಸ್" (ಥ್ಯಾಂಕ್ಯೂ/ಧನ್ಯವಾದ) ಎನ್ನುವ ನಗೆತುಂಬಿದ ಉತ್ತರ ಹೋಗ್ತಿತ್ತು. ನಾನೂ ಅದೇ ಮಾಡಿದೆ.

ನನ್ನ ಜೊತೆ– ನನ್ನದೇ ಮಾತ್ಕಾ (ಟ್ರಾವಲ್ಸ್) ಬಸ್ಸಿನಲ್ಲಿ ಫಿನ್ಲೆಂಡಿನಿಂದ ಏರಿಕೊಂಡಿದ್ದ, ಇಂಗ್ಲಿಷ್ ಮಾತಾಡುತ್ತಿದ್ದ ಏಯಾ ತೂಲಿಯಾ ಅವಳ ಪತಿ ನನಗೆ ಒಳ್ಳೆಯ ಸಹಪ್ರಯಾಣಿಕರಾಗಿ ಆತ್ಮೀಯರಾಗಿಬಿಟ್ಟರು. ಅಪರಿಚಿತ ನೆಲದಲ್ಲಿ ಸಹಜ ಸಂಪರ್ಕ ಸಾಧ್ಯ ಇರುವ ಭಾಷೆಯೊಂದು ಎಷ್ಟು ಪ್ರಯೋಜನಕಾರಿ ಎನ್ನುವುದರ ಪ್ರತ್ಯಕ್ಷಾನುಭವ ಅದು.

ಆ ನೆಲದ ನಸುಬೆಳಕಿನ ವೈಚಿತ್ರ ಹೇಳಿಬಿಡುವೆ. ಅಲ್ಲಿ ಆಗ್ನೇಯ ದಿಕ್ಕಿನಲ್ಲಿ ಸೂರ್ಯ ಹುಟ್ಟುತ್ತಾನೆ, ಅದಕ್ಕೆ ಫಿನ್ಲೆಂಡ್ ದೇಶವಿರುವ ಉತ್ತರ ಧ್ರುವದ ಕೆಳಗಣ ಅದರ ಅಕ್ಷಾಂಶ ರೇಖಾಂಶಗಳೇ ಕಾರಣ. ಹಾಗೆ ಅವತ್ತು ನಸು ಬೆಳಗಿನ ಐದಕ್ಕೆ ಹುಟ್ಟು ಪಡೆಯುತ್ತಿದ್ದ ಸೂರ್ಯನ ಸೊಬಗು ಕಿಟಕಿಯಿಂದ ಬಿಸಿಲುಕೋಲಾಗಿ ಮೈ ಬೆಚ್ಚಗಾಗಿಸುವ ಹೊತ್ತಿನಲ್ಲಿ ಸೆಂಟ್ ಪೀಟರ್ಸ್ ಬರ್ಗ್‌ನತ್ತ ದಾರಿ ಕ್ರಮಿಸಿದೆ. ಬೆಣ್ಣೆಯಂಥ ರಸ್ತೆ, ಹಸಿರುಕಾಡು, ಸರೋವರಗಳ ನೀಲಿನೀರು, ಅಲ್ಲಲ್ಲಿ ಅಡಗಿ ಇಣುಕುವ ಕೆಂಪು ಕೆಂಪು ಮನೆಗಳ ಬಣ್ಣಕ್ಕೆ ಸೋಲುತ್ತ ಎಂಟು ತಾಸಿನ ಓಟ ಮುಗಿದು ಗಮ್ಯಸ್ಥಾನ ಮುಟ್ಟುವಷ್ಟರಲ್ಲಿ ನಾನು ತೂಲಿಯಾ ಒಳ್ಳೆಯ ಸ್ನೇಹಿತೆಯರಾಗಿಬಿಟ್ಟಿದ್ದೆವು.

ಅವಳ ಗಂಡ ಸೆರೊನೆನ್ ಹಿಂದೆ ರಶಿಯದಲ್ಲಿ ಅನೇಕ ವರ್ಷಗಳ ಕಾಲ ಇದ್ದು ಬಂದವರು, ಅಲ್ಲಿ ಸರಕಾರೀ ಆಫೀಸರ್ ಆಗಿದ್ದ ಆತನಿಗೆ ಸಹಜವಾಗಿಯೇ ರಷ್ಯನ್ ಭಾಷೆ ಗೊತ್ತಿತ್ತು. ಪ್ರಹಸನ ಶುರುವಾಗಿದ್ದು ನಾವು ಅಲ್ಲಿ ತಂಗಿದ್ದ ಮೂರನೆಯ ದಿನ. ಸಮುದ್ರದಷ್ಟು ನೀರನ್ನು ಒಯ್ದು ಸಮುದ್ರಕ್ಕೇ ಸುರಿಯುವ ಅಲ್ಲಿನ ನೆವಾ ನದಿಯ ಅಡಿಯಲ್ಲಿ ಒಂದು ಕಿಲೋಮೀಟರ್ ಆಳದ ಸುರಂಗ ಕೆತ್ತಿ ಕಟ್ಟಿರುವ ಮೆಟ್ರೋ ರೈಲೊಂದು ಅದ್ಭುತ.

"ಪುಷ್ಕಿನ್‌ಗೆ ನಾವು ಮೆಟ್ರೋದಲ್ಲಿ ಹೋಗೋಣ, ಅಲ್ಲಿರುವ ಕ್ಯಾಥರೀನ್ ಆಂಬರ್ ಪ್ಯಾಲೇಸ್ ನೋಡಿ ನಿಮ್ಮ ಮನಸ್ಸು ತುಂಬಿ ಬಂದು ಖುಶಿ ಹೆಚ್ಚಾಗದಿದ್ದರೆ ಕೇಳಿ" ಅಂದಿದ್ದಳು ನಮ್ಮ ಅಲ್ಲಿನ ಗೈಡಮ್ಮ. ಅವರವರ ಐತಿಹಾಸಿಕತೆಯ ಬಗ್ಗೆ ಹೆಮ್ಮೆ ಇರಬೇಕಾದದ್ದು ಅವರ ಸಹಜತೆ. ಪುಷ್ಕಿನ್ ಅಥವಾ ಅವರೆನ್ನುವ 'ತ್ಸಾರೋಸ್ಕೆಯೊಸೊಲೋ' ಊರಲ್ಲಿದೆ ರಶ್ಯದ ಝಾರ್ (ತ್ಸಾರ್) ಚಕ್ರವರ್ತಿಗಳ ಈ ಹೊನ್ನಿನ ಅರಮನೆ, ಅವರ ಚಳಿಗಾಲದ ನಿವಾಸ. ಅಲ್ಲಿರುವ ಮಹಾರಾಣಿ ಕ್ಯಾಥರೀನ್‌ಳ 'ಆಂಬರ್ ರೂಮ್' ಚಿನ್ನದ ಅಲಂಕರಣದ ಪರಾಕಾಷ್ಠೆಯನ್ನೇ ಮೆರೆದಿರುವಂತಿದೆ. ಒಳಗೆ ಕಾಲಿಟ್ಟರೆ ಇಂದ್ರನ ಅರಮನೆಯೋ, ಪಾಂಡವರ ಇಂದ್ರಪ್ರಸ್ಥದ ಮಯಸಭೆಯೋ ಎನಿಸಿ ತೆರೆದ ಬಾಯಿ ಮುಚ್ಚದಂತೆ ವಿಸ್ಮಯದ ಬ್ರಹ್ಮಾಂಡಕ್ಕೇರಿಸುವ ವಿಭ್ರಮೆ.. ಅದಕ್ಕೆ ಕಾರಣ ಎಲ್ಲೆಲ್ಲೂ ಚಿನ್ನದ ಹಾಳೆಗಳ ಹೊದಿಕೆ ಹೊದ್ದ ಹೊಂಬಣ್ಣದ ಒಳಾವರಣದ ಹೊಳಪಿನ ಸಂಭ್ರಮ. ಇತಿಹಾಸದ ಪುಟಗಳು ಅದರ ವರ್ಣನೆ ಮಾಡಿ ದಣಿದಿಲ್ಲ ಇನ್ನೂ.

ಈಗ ನಮ್ಮ ಸಮಾಚಾರ ಕೊಂಚ ಭಿನ್ನ. ನಾವು ಭೂಮಿಯಾಳದ ಮೆಟ್ರೋ ಸವಾರಿ ಮಾಡಿ ಒಂದು ಗಂಟೆಯಷ್ಟೊತ್ತಿಗೆ ಪುಷ್ಕಿನ್ ಗೆ ಬಂದಿಳಿದಾಯ್ತು. ತೂಲಿಯಾ ಅವಳ ಗಂಡ ನನ್ನೊಂದಿಗೇ ಇದ್ದಿದ್ದು ನನಗೊಂದು ಬಗೆಯ ನೆಮ್ಮದಿ.

ಪುಷ್ಕಿನ್ ರೈಲು ನಿಲ್ದಾಣ ಕಂಬಕಂಬಗಳಿಗೂ ಹೊನ್ನು ಚಿನ್ನದ ಅಲಂಕಾರ ಮಾಡ್ಕೊಂಡು ಎಷ್ಟು ಹಸನಾಗಿ,ಹೊಳೆಹೊಳೆಯುತ್ತ ಚಂದ ಇತ್ತೆಂದರೆ ಅದರ ಚೆಲುವಿಗೆ ಮರುಳಾಗಿ ನಾನು ಕ್ಯಾಮೆರಾ ಎತ್ತಿದವಳೇ ಪಟಪಟನೆ ನಾಲ್ಕಾರು ಬಾರಿ ಫೋಟೋ ಕ್ಲಿಕ್ಕಿಸಿದೆ ಅಷ್ಟೇ!

ಎಲ್ಲಿದ್ದರೋ– ಜಬರ್ದಸ್ತ್ ಪಾಲಿಶ್ಡ್ ಯೂನಿಫಾರ್ಮ್ ಏರಿಸಿಕೊಂಡ ಯಮದೂತರಂಥ ಇಬ್ಬರು ಪೋಲೀಸ್ ನವರು ಥೇಟ್ ಮಾರ್ವೆಲ್ ಮೂವೀಸಲ್ಲಿ ಆಕಾಶದಿಂದಿಳಿವ ಪಾತ್ರಗಳ ಹಾಗೆ ಧಿಡೀರನೆ ಪ್ರತ್ಯಕ್ಷರಾದರು. ಒಬ್ಬಾತ ದಿಡ್ ಅಂತ 'ತಾ' ಎನ್ನುವ ಹಾಗೆ ನನ್ನತ್ತ ಕೈಚಾಚಿದ, ಇನ್ನೇನು ನನ್ನ ಕೈಯೊಳಗಿನ ಕ್ಯಾಮೆರಾ ಕಸಿದೇಬಿಡುತ್ತಾರೊ ಎಂದು ದಿಗಿಲಾಗಿಬಿಟ್ಟಿತು. ಅವರೋ ಸತತವಾಗಿ ಅವರ ಭಾಷೆ – ನನಗೆ ಏನೇನೂ ತಿಳಿಯದ ಅವರ ಭಾಷೆಯಲ್ಲಿ ಹೇಳಲು ಶುರುಮಾಡಿದರು. ಅಪಾಯದ ವಾಸನೆ ಬಡಿದು ತೂಲಿಯಾ ಎಲ್ಲಿ ಎಂದು ನೋಡಿದರೆ ಅವರಿಬ್ಬರೂ ಕೊಂಚ ದೂರದಲ್ಲಿ ಕಂಡರು.

ಇಲ್ಲೊಂದು ಪ್ರಹಸನ ಶುರು ಹಚ್ಚಿಕೊಂಡಿತ್ತು.

"ರೂಬಲ್ಸ್ ..ಹಂಡ್ರೆದ್.. ಫೋತೊ ಫೊತೋ.. ಹಂಡ್ರೆದ್ ರೂಬಲ್.." ಅವರಿಬ್ಬರ ಗುರಾಯಿಸುವ ವಟವಟದಲ್ಲಿ ನನಗೆ ಇಷ್ಟು ಪದಗಳು ಮಾತ್ರ ತಿಳಿದು " ಓ ಬಹುಶ: ಇಲ್ಲಿ ಫೋಟೋ ಹಿಡಿಯಬೇಕಾದರೆ ನೂರು ರೂಬಲ್ ಕೊಡಬೇಕೇನೋ? ಅನಿಸಿ ಪರ್ಸ್ ತೆರೆದೆ, ಅದೇ ಕ್ಷಣ ತೂಲಿಯಾ ಗಂಡ ಸೆರೊನೆನ್ ಈಚೆ ಹೊರಳಿದ. ಅಷ್ಟೇ ,ಇಬ್ಬರೂ ನನ್ನ ಬಳಿ ಧಾವಿಸಿದರು.

ಮುಂದಿನ ಐದು ನಿಮಿಷಗಳ ಅವರ ನಡುವೆ ಏರುಧ್ವನಿಯ ರಷ್ಯನ್ ಸಂಭಾಷಣೆ ನಡೆದು, ಏನಾಶ್ಚರ್ಯ ಆ ಇಬ್ಬರೂ ಸೈಂಧವ ಪೋಲಿಸ್ ಬಂದಷ್ಟೇ ಫಾಸ್ಟಾಗಿ ಅಲ್ಲಿಂದ ಓಟ ಕಿತ್ತಿದರು.

ನನಗೆ ಅಚ್ಚರಿ. "ಅದು ಹೇಗೆ ಮಾಡಿದಿರಿ? ನೀವು ಪೋಲಿಸ್ ಗೆ ಹೆದರಲ್ಲವೇ" ಅಂದೆ.

"ಅವರು ಪೋಲಿಸ್ ಅಲ್ಲ ನಕಲಿ ಕಾಪ್ಸ್" ಆತ ನಕ್ಕರು.

ಟೂರಿಸ್ಟುಗಳನ್ನು ಹೀಗೆ ಕಾಪ್ಸ್ ಯೂನಿಫಾರ್ಮ ಥರ ಬಟ್ಟೆ ಹಾಕ್ಕೊಂಡು ಬಂದು ಸುಲಿಯೋದೇ ಅವರ ಧಂಧೆ.

'ನಡೀರಿ ಪೋಲಿಸ್ ಠಾಣೆಗೆ ಅಂತ ಬೆದರಿಸಿದೆ ಅಷ್ಟೆ, ಹೇಗೆ ಓಡಿಹೋದ್ರಲ್ಲ. ಅವರು ನಕಲಿ ಅನ್ನೋದಕ್ಕೆ ಇನ್ನೇನು ಸಾಕ್ಷಿ ಬೇಕು?"

ಬಾಯಿ ಮೇಲೆ ಬೆರಳಿಟ್ಟೆ ನಾನು!

ಅದೇ ಸಮಯಕ್ಕೆ ನಮ್ಮ ಟೂರ್ ಗೈಡ್ ಬಂದಳು ಅಲ್ಲಿಗೆ. ಅವಳಿಗೆ ನಡೆದ ವಿಷಯ ಹೇಳಿದೆವು, ಕಿರಿದಾಗಿ ನಕ್ಕ ಅವಳ ಆ ನಗೆಯ ಹಿಂದೆ ತನ್ನ ದೇಶದ ಪರಿಸ್ಥಿತಿಗಾಗಿ ಮೂಡಿದ ವಿಷಾದವಿದ್ದಂತೆ ಭಾಸವಾಯಿತು.

ಕೊನೆಯ ಕಿಡಿ: ಐತಿಹಾಸಿಕ ಸ್ಥಳಗಳು ಎಷ್ಟೇ ಅಮೋಘವಾಗಿದ್ದರೂ ಪ್ರಯಾಣಿಕರನ್ನು ಮೋಸಗೊಳಿಸುವುದು ಅಷ್ಟೇ ಮಾಮೂಲಿ ಅಲ್ಲವೇ! ನಮ್ಮಲ್ಲೇನು ಕಡಿಮೆ!?

■

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

● ದಂನಆ

- ✓ ಉಳಿದವರು ಬದುಕಿದಂತೆ ನಾವೂ ಬದುಕಿದರೆ ನಮ್ಮ ಜೀವಿತಾವಧಿಯ ಸಾಧನೆ ಏನು?
- ✓ ನಿಮಗೆ ಅಧ್ಯಾಪಕರು ಇಷ್ಟವಾದರೆ ಅವರು ಬೋಧಿಸುವ ಪಾಠವೂ ಇಷ್ಟವಾಗುತ್ತದೆ.
- ✓ ನೆವೆರ್ ಗೆಟ್ ಸೊ ಬ್ಯುಸಿ ಮೇಕಿಂಗ್ ಎ ಲಿವಿಂಗ್ ದಟ್ ಯು ಫರಗೆಟ್ ಟು ಮೇಕ್ ಎ ಲೈಫ್.
- ✓ ಹಣ ಕೊಳ್ಳಲಾಗದಂತಹ ವಸ್ತುಗಳು ನಿಮ್ಮ ಬಳಿ ಇಲ್ಲದಿರುವವರಿಗೂ ನೀವು ಶ್ರೀಮಂತರಲ್ಲ.
- ✓ ಹೇಳದಿದ್ದನ್ನು ಕೇಳಿಸಿಕೊಳ್ಳುವುದೇ ಸಂಹವನದಲ್ಲಿ ಬಹು ಮುಖ್ಯ ವಿಷಯವಾಗಿರುತ್ತದೆ.
- ✓ ನಿಮ್ಮ ಉಪಸ್ಥಿತಿಯನ್ನು ತೋರಿಸಿಕೊಳ್ಳಲು ಶ್ರಮಪಡಬೇಡಿ. ನಿಮ್ಮ ಅನುಪಸ್ಥಿತಿ ಎದ್ದು ಕಾಣುವಂತಿದ್ದರೆ ಸಾಕು.
- ✓ ಮದರಿಂಗ್ ಈಸ್ ಅನ್ ಆ್ಯಕ್ಷನ್. ಮದರ್‌ಹುಡ್ ಈಸ್ ಅನ್ ಇನ್ಸ್ಟಿಟ್ಯೂಷನ್.
- ✓ ನಿಮ್ಮ ಬಗ್ಗೆ ಆಡಿಕೊಳ್ಳುವವರನ್ನು ಶ್ಲಾಘಿಸಿ. ಏಕೆಂದರೆ ಅವರು ತಮ್ಮ ಕಷ್ಟಕಾರ್ಪಣ್ಯಗಳನ್ನು ಮರೆತು ನಿಮ್ಮ ಬಗ್ಗೆ ಚಿಂತಿಸುವುದು ಸುಲಭದ ಕೆಲಸವಲ್ಲ.
- ✓ ನಿಮ್ಮ ಎಲ್ಲ ಸಮಸ್ಯೆಗಳನ್ನು ವಾಟ್ಸಪ್ ಸ್ಟೇಟಸ್‌ನಲ್ಲಿ ಹಾಕಿ, ಕೇವಲ 24 ತಾಸುಗಳಲ್ಲಿ ಅವು ಮರೆಯಾಗುತ್ತವೆ.
- ✓ ಗ್ರೋನ್ ಅಪ್ಸ್ ಆರ್ ಆಬ್ಸಲೀಟ್ ಚಿಲ್ಡ್ರನ್.
- ✓ ಒಂದು ನಿಮಿಷದಲ್ಲಿ ಬದುಕು ಬದಲಾಗುವುದಿಲ್ಲ. ಆದರೆ ಒಂದು ನಿಮಿಷದಲ್ಲಿ ತೆಗೆದುಕೊಂಡ ನಿರ್ಧಾರ ಎಲ್ಲವನ್ನೂ ಬದಲಿಸಬಹುದು.
- ✓ ನಿಮ್ಮ ನೀರನ್ನು ನೀವು ಹೊತ್ತೊಯ್ಯುವಾಗಲೇ ನಿಮಗೆ ಪ್ರತಿ ಹನಿಯ ಮೌಲ್ಯ ತಿಳಿಯುವುದು.
- ✓ ದೇವಸ್ಥಾನದಲ್ಲಿ ನೀವು ಲಕ್ಷ ರೂಪಾಯಿ ಕಾಣಿಕೆ ಕೊಟ್ಟರೂ ನಿಮ್ಮನ್ನು ಭಕ್ತ ಎಂದೇ ಕರೆಯುತ್ತಾರೆ. ಅದೇ ಹಸಿದವನಿಗೆ ಊಟ ಕೊಟ್ಟರೆ ಅವನೇ ನಿಮ್ಮನ್ನು ದೇವರು ಎಂದು ಕರೆಯುತ್ತಾನೆ.
- ✓ ನೆವರ್ ಸ್ಟಾಪ್ ಲರ್ನಿಂಗ್ ಬಿಕಾಸ್ ಲೈಫ್ ನೆವರ್ ಸ್ಟಾಪ್ಸ್ ಟೀಚಿಂಗ್.
- ✓ ಪರೀಕ್ಷಾ ಕೊಠಡಿಯಲ್ಲಿ ಉತ್ತರಗಳನ್ನು ಮಾಹಿತಿ ಹಕ್ಕು ಕಾಯಿದೆಯಡಿ ಕೇಳಬಹುದೆ?
- ✓ ದಂಡ ತೆತ್ತಿ ಪಡೆದ ಕಾರ್ನರ್ ಸೈಟ್ – ಪೆನಾಲ್ಟಿ ಕಾರ್ನರ್ ಸೈಟ್!

■

# ವಿಶ್ರಾಂತ ಜೀವನ

**ಎನ್. ರಾಘವನ್**

ಬಹಳ ಕಾಲದ ನಂತರ ನಾವು ಗೆಳೆಯರು ಮತ್ತೊಬ್ಬ ಮಿತ್ರನ ಮಗಳ ಮದುವೆಯ ಸಮಾರಂಭದಲ್ಲಿ ನೆರೆದಿದ್ದೆವು. ಆದರೆ ನಮ್ಮ ಗುಂಪಿನ ಮುಖ್ಯ ಪಾಲುದಾರ ವೆಂಕ್ಟಿ, ಅರ್ಥಾತ್ ವೆಂಕಟ ನಾಪತ್ತೆ. ಸಂಭಾಷಣೆ ಕಳೆಗುಂದಿತ್ತು. ಅವನು ಇದ್ದ ಕಡೆ ನಗೆಚಟಾಕಿ, ತಮಾಷೆ, ಹಾಸ್ಯ, ಕಾಲೆಳೆಯುವುದು ಇರುತ್ತಿತ್ತು. ಈಗ ಅವನಿಲ್ಲದೆ ಸಂಭಾಷಣೆ ಕಳೆಗುಂದಿತ್ತು! ಇವನಿಗೇನಾಯಿತು ಎಂದು ಎಲ್ಲರೂ ಯೋಚಿಸುವಷ್ಟರಲ್ಲಿ, ವೆಂಕ್ಟಿ ಮಾಸ್ಕ್ ಸಮೇತ ಏದುಸಿರು ಬಿಡುತ್ತಾ ಬಂದ.

ಏನೋ ಇದು, ಅನಧಿಕೃತವಾಗಿ ಎಲ್ಲರೂ ಕೋವಿಡ್ ಇಲ್ಲ ಎಂದು ಘೋಷಿಸಿರುವಾಗ ನಿನಗಿನ್ನೂ ....? ಸಾಲದ್ದಕ್ಕೆ ತಿಂಡಿಗೂ ಬರದೇ ಮಹೂರ್ತದ ಸಮಯಕ್ಕೆ ಸರಿಯಾಗಿ ಬಂದಿದ್ದೀಯಲ್ಲಾ ಎಂದು ಹುಸಿ ಕೋಪದಿಂದ ಅವನನ್ನು ನೋಡಿದೆವು. ವೆಂಕ್ಟಿ ನಿಮಗೇನ್ರೋ, ಎಲ್ಲಾ ರಿಟೈರ್ ಆಗಿ ನೆಮ್ಮದಿಯಿಂದ ಇದ್ದೀರಿ. ನನ್ನದು ಹಾಗಲ್ಲಪ್ಪ ಎಂದ. ವೆಂಕಟ ರಿಟೈರ್ ಆಗಿ ವರ್ಷಕ್ಕೆ ಮೇಲಾಗಿತ್ತು. ಅವನ ಮಗನ ಮದುವೆಯೂ ಆಗಿ ಎರಡು ವರ್ಷದ ಮೊಮ್ಮಗನೂ ಬಂದಾಗಿತ್ತು. ಇದೇನು ಎಂದು ಎಲ್ಲರೂ ಹುಬ್ಬೇರಿಸಿದೆವು. ಇರ್ರೋ, ಸ್ವಲ್ಪ ಕಾಫಿನಾದರೂ ಕುಡಿದು ಸುಧಾರಿಸಿಕೊಳ್ತೀನಿ ಎಂದ. ಅಷ್ಟರಲ್ಲಿ, ತಾಳಿ ಕಟ್ಟಿ ಆಗಿ, ಊಟವೂ ಮುಗಿದು, ಮತ್ತೆ ಎಲ್ಲರೂ ಒಂದು ಸೇರಿದೆವು.

ಅವನನ್ನು ಬಿಡದೆ, ಏನೋ ಅದು, ನಮಗಿರುವ ನೆಮ್ಮದಿ ನಿನಗಿಲ್ಲದಿರುವುದು ಎಂದ, ಶಿವು. ವೆಂಕ್ಟಿ ಶುರು ಮಾಡಿದ: ನೋಡ್ರಯ್ಯ, ನಾನೂ ರಿಟೈರ್ ಆದೆ, ಆದರೆ ಈಗ ನನ್ನ ಕೆಲಸ ಹೆಚ್ಚಾಗಿದೆ, ಇನ್ನೂ ಜವಾಬ್ದಾರಿಯಿಂದ ಮುಕ್ತನಾಗಿಲ್ಲ ಎಂದ ವೆಂಕ್ಟಿ. ಇವನು ತಮಾಷೆ ಮಾಡುತ್ತಿದ್ದಾನೋ, ಇಲ್ಲಾ ಇನ್ನೇನು ಎಂದು ಕೇಳುವಷ್ಟರಲ್ಲಿ ಅವನೇ ಹೇಳಿದ. ನೋಡ್ರೋ, ನಾನು ಸರ್ವಿಸ್ನಲ್ಲಿ ಇದ್ದಾಗ ಒಂದು ಸೆಕ್ಷನ್‌ಗೆ ಇಂಚಾರ್ಜ್ ಆಗಿದ್ದೆ, ಈಗ ಹಲವಾರು ಸೆಕ್ಷನ್ ಗಳನ್ನು ನಿಭಾಯಿಸಬೇಕಾಗಿದೆ ಎಂದ ಗಂಭೀರವಾಗಿ. ಏನದು? ಹಲವಾರು ಸೆಕ್ಷನ್‌ನೇ? ಏನೋ ಎಂದು ರಾಗ ಎಳೆದೆವು.

ಹೌದು, ಹೇಳ್ತೀನಿ ಕೇಳಿ; ಬೆಳಗ್ಗೆ ಎದ್ದ ಮೇಲೆ ಕಾಫಿ ಗೀಫಿ ಕುಡಿದು ಫ್ರೆಶ್ ಆದ ಮೇಲೆ ಶುರುವಾಗುತ್ತೆ ನನ್ನ ಡ್ಯೂಟಿ, ಅಥವಾ ಡ್ಯೂಟಿಗಳು. ರಮಾ (ವೆಂಕಟನ ಹೆಂಡತಿ) ಇನ್ನೂ ರಿಟೈರ್ ಆಗಿಲ್ಲವಾದ್ದರಿಂದ, ಮೊದಲು ಡೇರಿ ವಿಭಾಗ; ಹೋಗಿ ಹಾಲು, ಮೊಸರು ತಂದಿಟ್ಟು, ಅದನ್ನ ಕಾಯಿಸಿಟ್ಟು ಹೆಂಡತಿಗೆ ಒಪ್ಪಿಸಬೇಕು. ಅವಳು ತಿಂಡಿ ಮಾಡಿಡುವಷ್ಟರಲ್ಲಿ, ಸ್ಯಾನಿಟರಿ ವಿಭಾಗದ ಸೂಪರ್ವಿಷನ್ನು. ಬಾತ್, ಟಾಯ್ಲೆಟ್ ಎಲ್ಲಾ ಚೊಕ್ಕಟವಾಗಿದೆಯಾ ಪರಿಶೀಲಿಸಿ, ಸ್ನಾನಕ್ಕೆ ಬಿಸಿ ನೀರು ರೆಡಿ ಮಾಡಿ ಇನ್ನೊಂದು ಡೋಸ್ ಕಾಫಿ ಎನ್ನುವಷ್ಟರಲ್ಲಿ, ನಮ್ಮ ತಾಯಿ, ಯಾವುದೋ ಒಂದು ಔಷಧಿ ಬೇಕು ಅನ್ನುತ್ತಾರೆ. ಸರಿ ಅದನ್ನು ತರಲು ಹೋಗಿ, ಹಾಗೆ ಹಾರ್ಟಿಕಲ್ಚರ್, ಸುದ್ದಿ ಸಂಚಾರ ವಿಭಾಗವನ್ನೂ ಗಮನಿಸಿ, ಅಂದರೆ, ಅಂದಿಗೆ ಬೇಕಾದ ತರಕಾರಿ ಇತ್ಯಾದಿ, ಪೇಪರ್ ತರಬೇಕು. ಅದಾದ

ಮೇಲೆ, ಮೆಕ್ಯಾನಿಕಲ್ ಇಂಜಿನಿಯರಿಂಗ್, ಡ್ರೈವಿಂಗ್ ಡ್ಯೂಟಿ. ಅಂದರೆ, ಮಗನ ಕಾರು ಸರಿಯಾಗಿದೆಯಾ ಎಂದು ಗಮನಿಸಿ, ಮಗಳನ್ನು ಸ್ಕೂಟರ್‌ನಲ್ಲಿ ಕಾಲೇಜ್‌ಗೆ ಬಿಡಬೇಕು. ನಂತರ ಖಾದ್ಯ ವಿಭಾಗ. ಬಂದು ಎಲ್ಲರಿಗೂ ತಿಂಡಿ ಕೊಟ್ಟು, ನಾನೂ ತಿಂದು, ಹೆಂಡತಿ ಅರ್ಧ ಮಾಡಿಟ್ಟ ಅಡುಗೆಯನ್ನು ನೋಡಿ, ಬಾಕಿ ಸರಿ ಪಡಿಸಬೇಕು. (ಮದುವೆಯಾದ ಹೊಸದರಲ್ಲಿ ರಮಾ ನಾನು ಚೆನ್ನಾಗಿ ಅಡುಗೆ ಮಾಡಲು ಬಲ್ಲೆ ಎಂದು ಸೂಕ್ಷ್ಮವಾಗಿ ತಿಳಿದುಕೊಂಡು, ಮನೆ ನಡೆಸುವುದರ ಜವಾಬ್ದಾರಿಯಲ್ಲಿ ನಮ್ಮಿಬ್ಬರದೂ ಸಮ ಪಾಲು ಎಂದು ನನಗೆ 'ನೈಸ್' ಆಗಿ ಮನದಟ್ಟು ಮಾಡಿ ಕೊಟ್ಟು, ಅಂದಿನಿಂದ ಅದೇ ನಡೆದುಕೊಂಡು ಬಂದಿದೆ!).

ಇರಲಿ, ಅದಾದ ನಂತರ ಆಹಾರ ಮತ್ತು ಸಿವಿಲ್ ಸಪ್ಲೈ ಡಿಪಾರ್ಟ್ಮೆಂಟ್ ಡ್ಯೂಟಿ; ಮನೆಗೆ ಬೇಕಾದ ಸಾಮಾನು ಏನಿದೆ,ಏನು ತರಬೇಕು ಎಂದು ನೋಡುವುದು. ಮಧ್ಯಾಹ್ನ ಆಯಿತು ಎಂದರೆ, ನರ್ಸಿಂಗ್ ಮತ್ತು ಚೈಲ್ಡ್ ಕೇರ್ ಡಿಪಾರ್ಟ್ಮೆಂಟ್; ಅಂದರೆ ತಾಯಿಗೆ ಕಾಲು ನೋವು ಇರುವುದರಿಂದ, ಕಾಲೊತ್ತುವುದು, ಮೊಮ್ಮಗನ ಲಾಲನೆ ಪಾಲನೆ; ಒಂದು ಘಂಟೆ ಮಲಗಿದೆ ಅಂದರೆ, ಸಾಯಂಕಾಲ, ಮಗಳನ್ನೋ, ಮಡದಿಯನ್ನೋ ಸ್ಕೂಟರ್ ನಲ್ಲಿ ಕರೆತರುವುದು. ಅದಾಯಿತು ಅಂದರೆ, ಯಾರೋ ಅತಿಥಿಗಳು ಬರ್ತಾರೆ;. ಇದೆಲ್ಲ ಮುಗಿದು ರಾತ್ರಿ ಊಟ ಮಾಡಿದ ಒಂದಷ್ಟು ಹೊತ್ತು ಟಿವಿ ನೋಡಿ ತಲೆ ಚಚ್ಚಿಕೊಂಡು ಬೆಡ್ ರೂಮ್ ಕಡೆ ಪಯಣ; ನಂತರ... ಅಷ್ಟರಲ್ಲಿ ಕಿಟ್ಟಿ ಕಿಚಾಯಿಸಿದ ಗೊತ್ತಾಯಿತು ಬಿಡು ಮಗನೆ ಮನರಂಜನೆ ವಿಭಾಗವೋ?.... ವೆಂಕ್ಟ್ರಿ ಹೇಳಿದ, ಹೌದು ಕಣೋ, ಆದರೆ ನೀನೇನು ಕಲ್ಪನೆ ಮಾಡಿಕೊಳ್ಳಬೇಕಾಗಿಲ್ಲ. ಮೊಮ್ಮಗನನ್ನು ಕೂರಿಸಿಕೊಂಡು, ಅವನಿಗೆ ನಿದ್ದೆ ಬರೋ ತನಕ ರಾಮಾಯಣ, ಮಹಾಭಾರತದ ಕಥೆ ಹೇಳುವುದೇ ಮನರಂಜನೆ ಎಂದ.

ಕೊನೆಗೆ ಹೇಳಿದ, ನೋಡ್ರೋ ರಿಟೈರ್ಡ್ ಲೈಫ್ ರಿಟೈರ್ಡ್ ಲೈಫ್ ಅನ್ನಬೇಡಿ. ವಿಶ್ರಾಂತ ಜೀವನ ಅಲ್ಲ ಮುಖ್ಯ, ಜೀವನ ಶಾಂತವಾಗಿರಬೇಕು ಅಷ್ಟೇ! ಇವನ ಪ್ರವಚನ ಕೇಳುತ್ತಿದ್ದ ಅಲ್ಲಿ ನೆರೆದಿದ್ದ ಕೆಲವು ಹೆಂಗೆಳೆಯರು ಆಹಾ, ಇಷ್ಟೆಲ್ಲಾ ಕೆಲಸ ಕಾರ್ಯ ವಹಿಸುವ ಇಂಥದೊಂದು ಪ್ರಾಣಿ ನಮಗೂ ಸಿಕ್ಕಿದ್ದರೇ ಎಂದು ಆಸೆ ಕಣ್ಣಳಲ್ಲಿ ನೋಡುತ್ತಿರೇ, ವೆಂಕ್ಟ್ರಿಯ ಹೆಂಡತಿ, ಬನ್ರೀ ಸಾಕು, ನಿಮ್ಮ ಬುರುಡೆ ಪುರಾಣ ಹೊತ್ತಾಯಿತು ಎಂದು ಅವನನ್ನು ಎಳೆದೊಯ್ದಳು. ಮತ್ತೆ ಸಿಗಣಾ ಕಂಣ್ರೋ ಎಂದು ವೆಂಕ್ಟ್ರಿ ಎಲ್ಲರಿಗೂ ಬೈ ಹೇಳಿ ಹೊರಟ.

■

ಒಂದು ಮನೆಯಲ್ಲಿ ಇದ್ದ ಇಬ್ಬರು ಮಕ್ಕಳಿಗೆ ವಿಚಿತ್ರವಾದ ಹೆಸರು ಇಟ್ಟಿದ್ದರು. ಒಬ್ಬನದು ಜೂಂಟೆನ್ ಇನ್ನೊಬ್ಬ ಮೇಟು. ಎಲ್ಲರಿಗೂ ಇದು ಅಚ್ಚರಿ. ಇದೆಂಥಾ ಹೆಸರು ಅಂತ. ಒಬ್ಬರು ಕುತೂಹಲ ತಡೆಯಲಾರದೇ ಕೇಳಿದ್ದಕ್ಕೆ ಅಯ್ಯೋ ವಿಚಿತ್ರ ಏನಿಲ್ಲರೀ, ದೊಡ್ಡವನು ಹುಟ್ಟಿದ್ದು ಜೂನ್ 10ಕ್ಕೆ ಇನ್ನೊಬ್ಬ ಹುಟ್ಟಿದ್ದ ಮೇ 2 ಕ್ಕೆ ಅಂದರಂತೆ.

# ವೃತ್ತಿಯ ಪ್ರಭಾವತಿ

ಡಾ. ಎಸ್. ಸುಧಾ

'ನೋಡಪ್ಪಾ, ಕಾಲೇಜಿನ ಪ್ರೊಫೆಸರ್‌ಗಳನ್ನು, ಪಾಠ ಹೇಳುವವರನ್ನು ಮದುವೆ ಆಗಬಾರ್ದು' ಎಂದು ಪತಿರಾಯರು ಸ್ನೇಹಿತನ ಹತ್ತಿರ ವ್ಯಾಖ್ಯಾನ ಮಾಡುತ್ತಿದ್ದರು. 'ಎಲ್ಲಾದರಲ್ಲೂ ತಪ್ಪೇ ಮೊದಲು ಕಣ್ಣಿಗೆ ಬೀಳುತ್ತೆ ಅವರಿಗೆ ಎಂದದ್ದು ನನ್ನ ಕಿವಿ ಮೇಲೇ ಟಪ್ ಅಂತ ಬಿತ್ತು. ಏನ್ಮಾಡೋದು ನಮ್ಮ ಪಾಠ ಹೇಳುವ ವೃತ್ತಿಯೇ ಹಾಗೆ. ಮೊದಲು ಸರಿಯಾಗಿಲ್ಲದ್ದೇ ಕಣ್ಣಿಗೆ ಬೀಳುತ್ತೆ, ತಕ್ಷಣ ಅದನ್ನು ಕರೆಕ್ಟ್ ಮಾಡ್ತೀವಿ. ಈ ಅಭ್ಯಾಸ ನಂಗೂ ಬಂದುಬಿಟ್ಟಿದೆ. ಅದನ್ನು ಪತಿರಾಯರ ಮೇಲೂ ಗೊತ್ತಿಲ್ಲದೇ ಆಗಾಗ ಪ್ರಯೋಗ ಮಾಡ್ತೀರ್ತಿನಿ. ನಂದೇನೂ ತಪ್ಪಿಲ್ಲ, ಇದು ವೃತ್ತಿಯ ಪ್ರಭಾವ. ನೀವು ಗಮನಿಸಿರಬಹುದು. ಕೆಲವು ಶಾಲಾ ಶಿಕ್ಷಕರು 'ಗೊತ್ತಾಯ್ತಾ' 'ಅರ್ಥ ಆಯ್ತಾ' ಅನ್ನುತ್ತಾ ನಿಮ್ಮ ಜೊತೆ ಮಾತನಾಡುತ್ತಿರುತ್ತಾರೆ. ಬಹುಶಃ ಗಣಿತದ ತರಗತಿ ಎಂದು–ಕೊಂಡಿರುತ್ತಾರೇನೋ? ಒಟ್ಟಿನಲ್ಲಿ ನಿಮಗೆ ಕನ್ಫ್ಯೂಸ್ ಆಗುವುದಂತೂ ನಿಶ್ಚಯ. ಏಕೆಂದರೆ ಗೊತ್ತಾಯ್ತಾ ಮತ್ತು ಅರ್ಥ ಆಯ್ತಾ ಎನ್ನುವ ಪದಗಳು ನಿಮ್ಮ ಕಿವಿಗಳ ತಮಟೆಯ ಮೇಲೆ ಅಷ್ಟು ಬಾರಿ ಅಪ್ಪಳಿಸಿ ನೃತ್ಯಮಾಡುತ್ತಿರುತ್ತವೆ. ನಮ್ಮ ಶಿಕ್ಷಕ ವೃತ್ತಿಯವರಿಗೆ ಸ್ವಲ್ಪ ಜೋರಾಗಿ ಮಾತನಾಡುವುದೂ ಅಭ್ಯಾಸವಾಗಿಬಿಡುತ್ತದೆ. ಹಾಗೂ ಸ್ವಲ್ಪ ಜೋರು ಮಾಡಿ ಆಜ್ಞಾಪೂರ್ವಕವಾಗಿಯೂ ಹೇಳಿಬಿಡುತ್ತೇವೆ. ಮೊನ್ನೆ ನನ್ನ ಕಾಲೇಜು ಗುರುಗಳ ಮನೆಗೆ ಹೋಗಿದ್ದೆ. ಅವರ ಪತ್ನಿಯೂ ಮಾತನಾಡಲು ಕುಳಿತರು. ನನ್ನ ಪುಸ್ತಕವೊಂದನ್ನು ಗುರುಗಳಿಗೆ ನೀಡಿದೆ. ಅವರು ಅದನ್ನು ಪತ್ನಿಗೆ ನೀಡಿ, 'ಇದನ್ನು ಮೇಜಿನ ಮೇಲಿಡು' ಎಂದು ಪತ್ನಿಗೆ ವಿದ್ಯಾರ್ಥಿಗೆ ಹೇಳುವಂತೆ ಹೇಳಿದರು. ನನಗೆ ನಗು ಬರುತ್ತಿತ್ತು. ಸ್ವಲ್ಪ ಹೊತ್ತು ಕಳೆದ ಮೇಲೆ 'ಪುಸ್ತಕ ತೆಗೆದು ಮೇಜಿನ ಮೇಲಿಡು ಎಂದೆನಲ್ಲ? ಎಂದರು. ನನಗಂತೂ ಮುಸಿಮುಸಿ ನಗುವಂತಾಯಿತು. ಆದರೆ ನಗಲಿಲ್ಲ. ನಮ್ಮ ಮೇಷ್ಟ್ರ ಕೋಪಕ್ಕೆ ಹೆಸರುವಾಸಿ!

ಬ್ಯಾಂಕ್ ಕೆಲಸ ಮಾಡುವವರು ಬೇರೆಯವರ ಹಣವನ್ನು ನಿರ್ವಹಿಸುತ್ತಿರುತ್ತಾರೆ. ಆದರೆ ತಮ್ಮ ಹಣವನ್ನು ಖರ್ಚು ಮಾಡುವಾಗ ಬಹಳ ಹಿಂದೇಟು ಹಾಕುತ್ತಾರೆ. ಗಮನಿಸಿ ನೋಡಿ. ಬ್ಯಾಂಕಿನಲ್ಲಿ ಕೆಲಸ ಮಾಡಿದವರು ಬಹಳ ಜಿಗುಟು. ಬ್ಯಾಂಕಿನಲ್ಲಿ ಠೇವಣಿ ಇಟ್ಟು ಬಡ್ಡಿ ಸಂಪಾದಿಸುವುದನ್ನು ನೋಡಿ ತಮಗೇ ಗೊತ್ತಿಲ್ಲದೆ ಇವರು ತುಂಬಾ ಪ್ರಭಾವಿತರಾಗುತ್ತಾರೆ. ಆದ್ದರಿಂದ ಬಡ್ಡಿ ಲೆಕ್ಕ ಹಾಕುತ್ತಾರೆ. ಬ್ಯಾಂಕಿನವರು ನನ್ನನ್ನು ತಪ್ಪು ತಿಳಿಯಬೇಡಿ. ನನ್ನ ಗಮನಕ್ಕೆ ಬಂದ ವಿಷಯಗಳಿವು. ಕೆಲವರು ಅಪವಾದವೆನ್ನುವಂತೆ ಇರಬಹುದು. ವೃತ್ತಿಯ ಪ್ರಭಾವ ಅಷ್ಟೇ, ಇವರದ್ದೇನೂ ತಪ್ಪಿಲ್ಲ!

ನಮ್ಮ ಸೈನಿಕರಿಗೆ ಯಾವಾಗಲೂ ಮೇಲಿನ ಅಧಿಕಾರಿಯ ಆದೇಶವನ್ನು ಪಾಲಿಸುವಂತೆ ತರಬೇತಿ ನೀಡಿರುತ್ತಾರೆ. ಇದು ತುಂಬಾ ಒಳ್ಳೆಯದು. ಯಾರಾದರೂ ಆಫೀಸರ್ ಹೆಂಡತಿಯನ್ನು ಭೆಟ್ಟಿಯಾದಾಗಲೂ ಎದ್ದು ನಿಂತು ಗೌರವ ಸಲ್ಲಿಸಬೇಕಾಗಿರುತ್ತದೆ. ಇದು ಎಷ್ಟು ಅಭ್ಯಾಸವಾಗಿರುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆ. ನನ್ನ ಕಸಿನ್ ಸೈನ್ಯದಲ್ಲಿದ್ದವನು. ಊರಿಗೆ ಬಂದಾಗಲೂ ಯಾರಾದರೂ ಕುಟುಂಬದ ಹೆಂಗಸರು ಮಾತನಾಡಿಸಿದರೂ ಎದ್ದು ನಿಲ್ಲುತ್ತಿದ್ದ! ನನ್ನ ಸಹೋದ್ಯೋಗಿಯೊಬ್ಬರು ವಾಯು ಸೈನ್ಯದಲ್ಲಿದ್ದರು. ನಾನು

ಪ್ರಾಂಶುಪಾಲಳಾಗಿದ್ದಾಗ ಅವರು ಮಾತನಾಡಬೇಕಾದರೆ ನಿಮ್ಮ ಕೈಕೆಳಗೆ ಕೆಲಸ ಮಾಡುವ.... ಎಂದು ಹೇಳುತ್ತಿದ್ದರು. ನಾನು ಅವರಿಗೆ ಇಲ್ಲಿ ನಾವೆಲ್ಲ ಸಮಾನರು' ಎಂದು ಹೇಳುತ್ತಿದ್ದೆ. ವೃತ್ತಿಯಲ್ಲಿದ್ದಾಗಿನ ಅಭ್ಯಾಸಗಳು ಹೇಗೆ ಮನಸ್ಸಿನಲ್ಲಿ ಊರುತ್ತವೆ ನೋಡಿ!

ನನ್ನ ಶಾಲಾ ದಿನಗಳಲ್ಲಿ ಆಂಗ್ಲಭಾಷೆಯ ಪುಸ್ತಕದಲ್ಲಿ ಏನು ಬರೆದಿತ್ತೆಂದರೆ, ವೈದ್ಯರು ಕಾಲಕಳೆದ ಹಾಗೆ ಮೆದುವಾಗುತ್ತಾರೆ. ಎಂಜಿನಿಯರ್‌ಗಳು ಗಡಸಾಗುತ್ತಾರೆ. ನನಗೂ ಇದು ನಿಜ ಎನ್ನಿಸುತ್ತದೆ. ವೈದ್ಯರಿಗೆ ರೋಗಿಯ ಮಾತುಗಳನ್ನು ಕೇಳಲು ಬಹಳ ತಾಳ್ಮೆ ಬೇಕು. ರೋಗಿಗೆ ಸಾಂತ್ವನದ ಮತ್ತು ಧೈರ್ಯ ತುಂಬುವ ಮಾತುಗಳನ್ನಾಡಿದರೆ ಅರ್ಧ ಕಾಯಿಲೆ ಗುಣವಾದಂತೆಯೇ. ಅದಕ್ಕೆ 'ವೈದ್ಯೋನಾರಾಯಣೋ ಹರಿಃ' ಎಂದು ಹೇಳಿದ್ದಾರೆ. ಆದರೆ ಕಾಯಿಲೆ ವಾಸಿಯಾದ ಮೇಲೆ ನಾವು ಡಾಕ್ಟರನ್ನು ನೋಡುವುದಿಲ್ಲ. ಅವರಿಗೂ ಸಾಕಾಗಿರಬಹುದು. ನಾವು ಸುಖಾಸುಮ್ಮನೆ ವೈದ್ಯರನ್ನು ನೋಡಲು ಹೋಗುವುದಿಲ್ಲ. ಹೋಗಲೂ ಬಾರದು. ಅವರ ಸಮಯ ಬಹಳ ಪ್ರಶಸ್ತ. ನೀವು ಎಂಜಿನಿಯರ್‌ಗಳನ್ನು ಗಮನಿಸಿ. ಕಟ್ಟಡ, ಸಿಮೆಂಟು ಕೆಲಸದವರು ಎಂದು ಪ್ರತಿದಿನ ಏಗುತ್ತಿರುತ್ತಾರೆ. ಇನ್ನು ಕೆಲವರು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಾರೆ. ಇವರಿಗೆಲ್ಲಾ ನಿಗದಿತ ಸಮಯದಲ್ಲಿ ಎಲ್ಲಾ ಮಾಡಬೇಕಿರುತ್ತದೆ. ಸಹಜವಾಗಿಯೇ ಮಾನಸಿಕ ಮತ್ತು ದೈಹಿಕ ಒತ್ತಡ ಉಂಟಾಗುತ್ತದೆ. ಆದ್ದರಿಂದ ಒರಟುತನ ಸ್ವಲ್ಪ ಕಾಣಿಸುತ್ತದೆ. ಆದರೆ ನಮ್ಮ ಈಗಿನ ಸಾಫ್ಟ್‌ವೇರ್ ಎಂಜಿನಿಯರ್‌ಗಳಿಗೆ ಇವುಗಳ ಬಗ್ಗೆ ಮೊದಲೇ ತರಬೇತಿ ನೀಡಿರುತ್ತಾರೆ. ಅವರು ಮೆದು ನಡತೆ ತೋರಿಸಿದರೂ ಪ್ರಾಜೆಕ್ಟ್‌ನ ಗುರಿಮುಟ್ಟಲು ಅತೀವ ಮಾನಸಿಕ ಒತ್ತಡ ಅನುಭವಿಸುತ್ತಾರೆ.

ಒಬ್ಬ ಶಿಲ್ಪಿ ಒಂದು ದೊಡ್ಡ ಕಲ್ಲನ್ನು ಅಥವಾ ಶಿಲೆಯನ್ನು ನೋಡಿದಾಗ ಏನು ಯೋಚನೆ ಮಾಡಬಹುದು? ಆ ಶಿಲೆಯಲ್ಲಿ ಎಂತಹ ವಿಗ್ರಹ ಕಡೆಯಬಹುದು ಎಂದಲ್ಲವೇ? ಅದೇ 'ಒಬ್ಬ ಭೂಗರ್ಭ ವಿಜ್ಞಾನಿ, ಅದನ್ನು ಕಲ್ಲು ಎಂದು ನೋಡುತ್ತಾನೆ. ಯಾವ ಜಾತಿಯ ಕಲ್ಲು ಮತ್ತು ಯಾವಾಗ ಉತ್ಪತ್ತಿಯಾಗಿರಬಹುದು ಎಂದು ಯೋಚನೆ ಮಾಡಬಹುದು. ಯೋಚನೆಯಲ್ಲಿ ಎಷ್ಟು ವ್ಯತ್ಯಾಸ.

ಪ್ರಾಣಿ ವಿಜ್ಞಾನ ಓದಿರುವ ನನ್ನಂತಹ ವ್ಯಕ್ತಿಗಳು ಒಂದು ಪ್ರಾಣಿಯನ್ನು ನೋಡಿದರೆ ಆ ಪ್ರಾಣಿಯ ವಿಶೇಷತೆ, ವರ್ಗೀಕರಣ ಇತ್ಯಾದಿಗಳನ್ನು ಮೆಲುಕು ಹಾಕಬಹುದು. ಆದರೆ ನಾನು ಮೊದಲು ಅದರ ಸೌಂದರ್ಯ ಮತ್ತಿತರ ವಿಷಯಗಳನ್ನು ಗಮನಿಸಿ ಸಂತೋಷಿಸುತ್ತೇನೆ. ನಂತರ ವಿಜ್ಞಾನದ ವಿಷಯ. ಏಕೆಂದರೆ ಇದು ತರಗತಿಯಲ್ಲ! ಇದೇ ರೀತಿ ಸಸ್ಯವಿಜ್ಞಾನ ಓದಿದವರು ಯಾವುದಾದರೂ ಗಿಡ ಮರಗಳನ್ನು ನೋಡಿದಾಗ ಮೊದಲು ಅದರ ಹೂವು, ಎಲೆ, ಕಾಯಿ ಮುಂತಾದವುಗಳ ಸೌಂದರ್ಯವನ್ನು ಆಸ್ವಾದಿಸಬೇಕು. ನಂತರ ಅದು ಯಾವ ಕುಟುಂಬಕ್ಕೆ ಸೇರಿದ್ದು. ಇಂತಹ ವಿಷಯಗಳ ಬಗ್ಗೆ ಯೋಚಿಸಿ ಒಳ್ಳೆಯ ಘಮಲಿನ ಹೂವಾದರೆ ಆಘ್ರಾಣಿಸಿ, ಪ್ರಕೃತಿಯನ್ನು ಸಾಮಾನ್ಯರಂತೆ ನೋಡಿ ಆನಂದಿಸೋಣ.

ಇನ್ನು ನಮ್ಮ ರಾಜಕಾರಣಿಗಳ ಬಗ್ಗೆ ಹೇಳಲೇಬೇಕು. ಯಾರನ್ನು ನೋಡಿದರೂ ಮೊದಲು ಬಲಗೈಯನ್ನು ಮೇಲೆತ್ತಿ ಹೃದಯವನ್ನು ಮುಟ್ಟಿಸುತ್ತಾರೆ.

ಇದು ರಾಜಕಾರಣಿ ಸ್ಟೈಲ್ ನಮಸ್ಕಾರ. ಅವರಿಗೆ ಇದು ಎಷ್ಟು ಅಭ್ಯಾಸವಾಗಿರುತ್ತೆಂದರೆ ಕಲ್ಲು ಅಥವಾ ಕಂಬವನ್ನು ನೋಡಿ ಮಾಡಿದರೂ ಆಶ್ಚರ್ಯವಿಲ್ಲ. ಎಳೆಯ ಮಕ್ಕಳಿಗೂ ಮಾಡಬಹುದು! ಭಾಷಣದಲ್ಲಿ ತಮ್ಮ ಎದುರಾಳಿ ಪಾರ್ಟಿಯನ್ನು ದೂರುವುದು, ಇದೂ ಅಭ್ಯಾಸವಾಗಿದೆ. ರಾಜಕಾರಣಿಯ ಮನಸ್ಸೆಲ್ಲ ಮುಂದಿನ ಚುನಾವಣೆಯ ಮೇಲಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಅವರಿಗೆ ವ್ಯಕ್ತಿಯಂತೆ ಕಾಣಿಸುವುದಿಲ್ಲ. ಬದಲಾಗಿ ಓಟಿನ ಯಂತ್ರವಾಗಿ ಅದರಲ್ಲೊಂದು ಒತ್ತುವ ಬಟನ್ ಆಗಿ ಕಾಣಿಸುತ್ತಾರೆ.

ನನ್ನ ಸೋದರಳಿಯ ಒಬ್ಬ ಹಣ್ಣುಗಳನ್ನು ಹೆಚ್ಚುವುದರಲ್ಲಿ ಪ್ರವೀಣ. ಅವನು ಶಸ್ತ್ರವೈದ್ಯ ಅಥವಾ ಸರ್ಜನ್ ಆಗಿದ್ದಾನೆ. ಅವನು ಹಣ್ಣುಗಳನ್ನು ಹೆಚ್ಚುವುದನ್ನು ನೋಡುವುದೇ ಒಂದು ಅನುಭವ. ಕಲ್ಲಂಗಡಿಯಂತಹ ಹಣ್ಣನ್ನು ಕತ್ತರಿಸುವ ಪ್ಲೇಟ್ ಮೇಲೆ ಮೊದಲು ಇಟ್ಟು ತಲೆಯಂತೆ ಕಾಣುವ ಎರಡು ಭಾಗ ಮಾಡುತ್ತಾನೆ. ನಂತರ ಅದನ್ನು ಬಹಳ ನೀಟಾಗಿ ಸ್ವಲ್ಪವೂ ಅತ್ತಿತ್ತ ಹೋಗದಂತೆ ಹಿಡಿದು, ದೊಡ್ಡ ಚಾಕುವಿನಿಂದ ಸಮನಾಗಿ ಕರಾರುವಾಕ್ಕಾಗಿ ತುಂಡುಗಳನ್ನಾಗಿ ಮಾಡುತ್ತಾನೆ. ಕೈ ಒಂದು ಮಿಲಿಮೀಟರ್‌ನಷ್ಟು ಅಲುಗುವುದಿಲ್ಲ. ಸಿಪ್ಪೆ ತೆಗೆಯುವ ಹಣ್ಣಾದರೆ ಮೇಲಿನ ಭಾಗವನ್ನು ನೀಟಾಗಿ ತೆಗೆಯುತ್ತಾನೆ. ನಂತರ ಎಲ್ಲ ತುಂಡುಗಳನ್ನೂ ಅಂದವಾಗಿ ತಟ್ಟೆಯಲ್ಲಿ ಜೋಡಿಸುತ್ತಾನೆ. ಒಮ್ಮೆ ಈ ವೈದ್ಯ ನಮ್ಮ ಮನೆಗೆ ಬಂದಾಗ ನುಗ್ಗೆ ಕಾಯಿ ಹುಳಿ ಮಾಡಿದ್ದೆ. ಮೊದಲು ಶಿಸ್ತಿನಲ್ಲಿ ನುಗ್ಗೇಕಾಯಿ ಹೋಳುಗಳು ಒಂದರ ಮೇಲೊಂದು ಚಿಕ್ಕ ಮರದ ದಿಮ್ಮಿಗಳಂತೆ ತಟ್ಟೆಯಲ್ಲಿ ಜೋಡಿಸಲ್ಪಟ್ಟವು. ನಂತರವೂ ಹಾಗೆಯೇ ಅಚ್ಚುಕಟ್ಟಾಗಿ ತಟ್ಟೆಯ ಹೊರಗೆ ಸೇರಿಸಲ್ಪಟ್ಟವು. ಇಲ್ಲಿಯೂ ವೃತ್ತಿಯ ಪ್ರಭಾವವನ್ನು ಕಾಣಬಹುದು. ನಮ್ಮ ಮನೆಯ ತೋಟವನ್ನು ನೋಡಿಕೊಳ್ಳುತ್ತಿದ್ದ ಮಾಲಿಯ ಸಂಗತಿ ಕೇಳಿ, ಅವನು ಹೂದೋಟ ಸ್ಪರ್ಧೆಗಳಿಗೆ ತೋಟಗಳನ್ನು ತಯಾರು ಮಾಡುತ್ತಿದ್ದ. ಕಾರ್ಖಾನೆಯಲ್ಲಿಯೂ ಇದೇ ಕೆಲಸ. ಯಾವ ಗಿಡಗಳನ್ನು ಹೇಗೆ ಜೋಡಿಸಿದರೆ ಚೆನ್ನಾಗಿರುತ್ತದೆ ಎಂದು ಮನಸ್ಸಿನಲ್ಲಿಯೇ ಯೋಚಿಸುತ್ತಿದ್ದ. ಅವನು ಸಿನಿಮಾ ನೋಡಲು ಹೋದರೆ ನಾಯಕ ನಾಯಕಿಯರು ತೋಟದಲ್ಲಿ ಹಾಡುತ್ತಾ ಸುತ್ತುವಾಗ ಇವನು ಅದನ್ನು ನೋಡಿ ಸಂತೋಷಪಡುವುದರ ಬದಲು ಅಲ್ಲಿ ಗಿಡ ಮರಗಳು ಹೇಗಿವೆ ಮತ್ತು ಬಣ್ಣಗಳು ಹೇಗಿವೆ, ಜೋಡಣೆ ಯಾವ ರೀತಿ ಇದೆ ಎಂದು ನೋಡಿಕೊಳ್ಳುತ್ತಿದ್ದನಂತೆ. ಅವನ ಸಂತೋಷ ತೋಟ ಸುತ್ತುವ ಕಥಾನಾಯಕ ಅಥವಾ ನಾಯಕಿ ಅಲ್ಲ. ಬದಲಾಗಿ ಗಿಡ, ಮರ ಮತ್ತು ಹೂಗಳು. ನೋಡಿದಿರಾ ವೃತ್ತಿಯು ಒಬ್ಬರನ್ನು ಹೇಗೆ ಆವರಿಸಿಕೊಳ್ಳಬಹುದು !

ಒಬ್ಬ ಬಸ್ಸಿನ ಕಂಡಕ್ಟರ್ ಕಥೆ ನಿಮಗೆ ಗೊತ್ತಿರಬಹುದು. ಟಿಕೆಟ್ ಎಂಟ್ರಿಯನ್ನು ಬಸ್ಸು ಚಲಿಸುವಾಗಲೇ ಕಂಡಕ್ಟರ್ ಹಾಕುತ್ತಿದ್ದ. ಈಗ ಡಿಜಿಟಲ್ ಆಗಿದೆ ಬಿಡಿ. ಬಸ್ಸಿನ ಅಲುಗಾಟ, ಕುಲುಕಾಟದಲ್ಲಿಯೇ ಬರೆದು ಕಂಡಕ್ಟರ್‌ಗೆ ಅಭ್ಯಾಸವಾಗಿ ಹೋಗಿತ್ತು. ಒಂದು ದಿನ ಮನೆಯಲ್ಲಿದ್ದಾಗ ಟೇಬಲ್ ಮೇಲೆ ಪೇಪರನ್ನು ಇಟ್ಟು ಬರೆಯಲು ಶುರುಮಾಡಿದ. ಊಹೂಂ, ಸರಿಯಾಗಿ ಬರೆಯಲು ಎಷ್ಟು ಪ್ರಯತ್ನಿಸಿದರೂ ಆಗಲೇ ಇಲ್ಲ. ಆಗ ಹೆಂಡತಿಯನ್ನು ಬೇಗ ಬರುವಂತೆ ಕರೆದ. ಅವಳು ಗಾಬರಿಯಿಂದ ಬಂದಳು. ಸ್ವಲ್ಪ ಟೇಬಲ್ ಹಿಡಿದು ಅಲುಗಾಡಿಸು' ಎಂದನಂತೆ. ಆಗ ಚೆನ್ನಾಗಿ ಬರೆಯಲು ಸಾಧ್ಯವಾಯಿತು. ನಗು ಬರುತ್ತಿದೆಯಾ? ಅಂದಹಾಗೆ ನಿಮ್ಮ ವೃತ್ತಿ ಯಾವುದು ಎಂದಿರಿ? ■

# ಭೀಮನ ಅಮಾವಾಸ್ಯೆ (ಕೊರವಂಜಿ ಇಂದ)

ದಾಶರಥಿ ದೀಕ್ಷಿತ್

"ಹೌದು ಭೀಮಕ್ಕ ನನಗೆ ಚೆನ್ನಾಗಿ ನೆನಪಿದೆ ನೋಡು–ಚಿಕ್ಕವಳಿದ್ದಾಗಿನಿಂದ ನಮ್ಮಮ್ಮ ಬಿಡದೆ ನನ್ನ ಕೈಯಿಂದ ಪ್ರತಿ ವರ್ಷ ಗಂಡನ ಪೂಜೆ ಮಾಡಿಸುತ್ತಿದ್ದಳು. ನಾನು ಶ್ರದ್ಧಾಭಕ್ತಿಯಿಂದ ಜರಿ ಪರಕಾರ ಚಿನ್ನದ ಸರ ಅರಿಶಿನದ ಧಾರ ಹಾಕಿಕೊಂಡು ಒಳ್ಳೆ ಗಂಡನನ್ನು ದೊರಕಿಸುವಂತೆ ಆ ಪರಾತ್ಪರಸ್ವರೂಪನನ್ನು ಪೂಜೆ ಮಾಡ್ತಾ ಇದ್ದೆ."

"ಅದಕ್ಕೇಮ್ಮ ನಿಮಗೆ ಒಳ್ಳೆ ಯಜಮಾನ್ರು ಸಿಕ್ಕಿದ್ದಾರೆ"

"........ ಇಪ್ಪತ್ತು ವರ್ಷದ ಪೂಜೆ ಫಲ ಭೀಮಕ್ಕ ಇದು. ಪ್ರತಿ ಭೀಮನ ಅಮಾವಾಸ್ಯೆ ದಿನ ತಪ್ಪದೆ ತುಪ್ಪದ ದೀಪ ಹಚ್ಚಿ ಕೈ ಜೋಡಿಸಿದ್ದರ ಫಲ. ಆದರೆ ನೋಡಿ ನಾನು ಮಂಗಳಾರತಿ ಮಾಡಿದಾಗಲೆಲ್ಲಾ ಈ ಪದ್ಧತಿ ಯಾಕೆ ಭೀಮನ ಅಮಾವಾಸ್ಯೆ ದಿನವೇ ಬಂತೂ ಅಂತ ಯೋಚಿಸಿ – ಗಂಡ ಭೀಮನ ಹಾಗೆ ಇದ್ದಾನೆಯೆ ? ಇಲ್ಲ ಅಮಾವಾಸ್ಯೆ ಬಾಬತ್ತೆ ? ಇದರ ಅರ್ಥವೇನು ಎನ್ನೋದು ಹಸೆ ಮೇಲೆ ಕೂತಾಗ ಗೊತ್ತಾಯಿತು ನೋಡಿ,–ನಮ್ಮ ಯಜಮಾನ್ರು ಭೀಮನೂ ಹೌದು ಮತ್ತೆ ಅಮಾವಾಸ್ಯೆಯ ಸಮೀಪ ಬಳಗ ಎಂದು....?"

"ಈಗ ಅಷ್ಟು ಕಪ್ಪಾಗಿ ಕಾಣೋಲ್ಲವಲ್ಲ?....ಕಾಯವು ಅಲ್ಪವಾಗಿದೆಯಲ್ಲಾ?..."

"ಆಗದೆ ಏನು ನೀನು ಹೇಳೋದು ಹನ್ನೆರಡು ವರ್ಷ ವನವಾಸ, ಒಂದು ವರ್ಷ ಅಜ್ಞಾತವಾಸ....."

"ಇದೇನು ಹೀಗಂತೀರಿ–ಭಾರತದ ಭೀಮನ ಕತೆಯೆ?...."

"ತೋಡಿಕೊಂಡೇನು ಭೀಮಕ್ಕ ಈಗಿನ ಸಂಸಾರವೇ ಧರ್ಮರಾಯನ ಪಟ್ಟಾಭಿಷೇಕ ಕಾಲ...... ಭೀಮ ಹಿಡಿಂಬಿ, ಜೊತೆಗೆ ಸರಸವಾಡ್ತಾ ವಾಕಿಂಗ್ ಹೋಗ್ತಾ ಇದ್ದ ಕಾಲ........"

"ಅರ್ಥವಾಗಲಿಲ್ಲ ಕೆಂಚಮ್ಮನೋರೆ ಅರ್ಥವಾಗಲಿಲ್ಲ...."

"....ಇಪ್ಪತ್ತು ವರ್ಷದ ಹಿಂದಿನ ಕತೆ ಭೀಮಕ್ಕ. ಪ್ರಾಯ ತುಂಬಿದ ಹದಿನೆಂಟು ವರ್ಷದ ನವಯೌವ್ವನ ಯುವತಿ ನಾನು. ಆ ಹದಿನೆಂಟು ವರ್ಷವೂ ಭೀಮನಮಾವಾಸ್ಯೆ ದಿನ ಗಂಡನ ಪೂಜೆ ಮಾಡಿದ್ದೆ. ಆದರೆ ಪ್ರತಿ ಪೂಜೆಗೂ ನನಗೆ ಎದುರುನಿಲ್ಲುತ್ತಿದ್ದ ವ್ಯಕ್ತಿ ಎಂದರೆ ಭೀಮ–ಅಮಾವಾಸ್ಯೆ. ಭಯವಾಗೋದು ಭೀಮಕ್ಕ–ಮುರಲೀಧರನ ಸುಂದರಾಕೃತಿಯೋ ಮನ್ಮಥನ ಮನೋಹರರೂಪನೆ ಕಣ್ಣು ಮುಂದೆ ನಿಲ್ಲಬಾರದೆ? ವರ್ಷಂಪ್ರತಿ ಈ ಭೀಮ–ಅಮಾವಾಸ್ಯೆಯ ರೂಪ ನನ್ನ ಮುಂದೆ ನಿಂತು ನಿಂತು ನನ್ನ ವಯಸ್ಸು ಹದಿನೆಂಟರಿಂದ ಇಪ್ಪತ್ತಕ್ಕೆ ಏರಿತು (ನಿಜವಾದ ವಯಸ್ಸು 20, ಹೇಳುವ ವಯಸ್ಸು ಹದಿನಾರೇ ಇತ್ತು) ನಮ್ಮ ತಂದೆ ಊರೂರು ಕೇರಿ ಕೇರಿ ಅಲೆದರು ನನ್ನ ಬಾಳ ಸಂಗಾತಿಗಾಗಿ– ಕಾದರೂ ಚಿಂತೆ ಇಲ್ಲ ಏಸೂಳಾದ ಹುಡುಗ ಸಿಗಲೆಂದು ನನ್ನ ಆಸೆ.... ಕಡೆಗೊಂದು ದಿನ ನಮ್ಮ ತಂದೆ ಒಂದು ವರನನ್ನು ಹಿಡಿದು ತಂದರು..."

"ಯಾಕೆ ನಿಲ್ಲಿಸಿಬಿಟ್ಟಿರಿ ಹೇಳಿ ಕೆಂಚಮ್ಮ ರಮ್ಯವಾದ ಕಾದಂಬರಿ ಇದ್ದಾಗಿದೆ ನೀವು ಹೇಳ್ತಿರೋದು......ಆ ಹುಡುಗನೇ ನಿನ್ನ ಕೈಹಿಡಿದನೆ?...."

"......ಅದಕ್ಕೆ ಮಾತು ಹೊರಡದಾಯ್ತು ಭೀಮಕ್ಕ......ಆ ಹುಡುಗ ಇಲ್ಲ ಮಾಡ್ಕೊಳ್ಳೊಲ್ಲಾಂತ ಹೇಳಿ ಸುಮ್ಮನೆ ಬಂದದಾರಿಗೆ ಸುಂಕವಿಲ್ಲದೆ ಹೋಗಬಾರದೆ?....." "ಅಯ್ಯೋ ಈ ಹಿಡಿಂಬಿನ ಕೈಹಿಡಿಯೋಕೆ ನಾನು ಭೀಮನಲ್ಲ......" ಎಂದು ಬಿಟ್ಟು ಕರುಳು ಚುರುಕ ಎನ್ನಿಸಿದ ಆ ಪಾಪಿ. ಈಗ ಯಾವಳೋ ಗಂಡ ಸತ್ತವಳನ್ನು ಕಟ್ಕೊಂಡು ವಿಧವೋದ್ಧಾರಾಂತ ಅಲೀತಿದಾನೇನ್ನಿ..... ಆದರೂ ಅವನು ಹಾಗನ್ನಬಹುದೋ?....ಅಂ...."

"ಹುಡುಗಾಟ................"

"ಹುಡುಗಾಟವಲ್ಲ ಭೀಮಕ್ಕೆ ಮೈಯೊಳಗಿನ ತಿಮುರು. ತಲೆ ತಾಕಿರಲಿಲ್ಲ ಆ ಬಿಸಿರಕ್ತಕ್ಕೆ. ಒಂದು ಹೆಣ್ಣು ಜೀವದ ನಿಜ ಸ್ವರೂಪ ಎತ್ತಿ ಎಲ್ಲರಿಗೂ ಕೇಳುವಂತೆ ಹೇಳಿಬಿಟ್ಟ ಅವನು.....ಕೂಡಲೆ ನನಗೆ ನೆನಪಿಗೆ ಬಂದದ್ದು ಭೀಮನಮಾವಾಸ್ಯೆ ಭೀಮಕ್ಕ.......ನಾನೇನು ಹೇಳಲಿ.......ಅದೇ ಆಕೃತಿ ಮುಂದೆ ಬಂದು ನಿಂತ ಹಾಗಾಯಿತು......"

"...........ಸರಿ ಆಮೇಲೆ........""

"..........ಆಮೇಲೇನು ನಮ್ಮ ತಂದೆ ಮತ್ತೆ ಹುಡುಕಲು ಪ್ರಾರಂಭ ನನ್ನ ಭೀಮನಿಗಾಗಿ, ಸರಿ ಕಾರ್ತಿಕ ಮಾಸ ಹರಿಹರದಲ್ಲಿ ಸಂತರ್ಪಣೆ ದೇವರ ಗುಡಿಯಲ್ಲಿ. ಎಲೆ ಬಡಿಸಿದ್ದಾಗಿದೆ, ಮಧ್ಯೆ ಕಂಭಕ್ಕೆ ಒರಗಿ ಕುಳಿತ ವ್ಯಕ್ತಿ ಕೇಳಿತಂತೆ "ತಿಂದಷ್ಟೋ ಹಾಕಿದಷ್ಟೋ..." ಎಂದು ದರ್ಪದಿಂದ. "ತಿಂದಷ್ಟು" ಎಂದರಂತೆ ಬಡಿಸುವವರು. ಆ ವ್ಯಕ್ತಿ ನಲವತ್ತು ಹೋಳಿಗೆ ಎಂಭತ್ತು ಆಂಬಡೆ ಮೇಲೆ ಯಥಾವಿಧಿ ಊಟ ಮಾಡಿದ್ದು ನಮ್ಮ ತಂದೆ ಸ್ವತಹ ನೋಡಿದರು. ಅವರನ್ನು ವಿಚಾರಿಸಿದರು. ದೇಶಸ್ಥರು ಲಗ್ನವಿಲ್ಲ ಎಂದು ತಿಳಿಯಿತು. ಹೀಗೆ ಕನ್ಯಾದಾನ ಮಾಡಬೇಕೆಂದಿದ್ದೇನೆ ತಾವು ನನ್ನ ಮಗಳ ಕನ್ಯಾಸೆರೆ ಬಿಡಿಸಬೇಕೆಂದು ಕೇಳಿದರಂತೆ. ನನ್ನ ಎತ್ತರ ನನ್ನ ಊಟ ನನ್ನ ಬಣ್ಣ ಕೇಳಿಕೊಂಡು 'ಹೆಣ್ಣು ನೋಡುವುದು ಬೇಡ; ಮುಂದಿನ ಲಗ್ನ ಮಾಸದಲ್ಲಿ ಲಗ್ನ, ಲಗ್ನವಾದ ಮರುದಿವಸವೇ ನಿಷೇಕ, ನಿಷೇಕವಾದ ಮರು ದಿನ ಊರು ಬಿಡುತ್ತೇವೆ, ಗಂಡಹೆಂಡತಿ' ಎಂದು ಹೇಳಿದರಂತೆ ಅವರು. ಮತ್ತೆ ಅವರನ್ನು ಕದ್ದು ನೋಡಿದ್ದು ಹಸೆಮೇಲೆ ಕೂತಾಗ. ಭೀಮನ ಅಮಾವಾಸ್ಯೆ ತನಕ ಯಾತಕ್ಕೆ ಕಾಯಲಿ ಈಗಲೆ ಪೂಜೆಮಾಡಲಾ ಎಂದೆನಿಸಿತು. ನನ್ನ ಪುಣ್ಯ ನೋಡು ಭೀಮಕ್ಕ ಅವರ ಹೆಸರೂ ಭೀಮಸೇನಾಚಾರ್ರು..... ಅವರು ಕಟ್ಟಿಬಿಗಿದ ಜುಟ್ಟು ಅವರ ಭಾರೀಮೀಸೆ..... ಎತ್ತರದ ನಿಲುವು ಆಜಾನು ಬಾಹುತ್ವ ಇನ್ನೂ ಕಣ್ಣಿಗೆ ಕಟ್ಟಿದಂತದೆ. ಭೂಮಕ್ಕೆ ಕೂತಾಗ ನನಗೂ ಅವರಿಗೂ ಪಂದ್ಯ ಬಿದ್ದು ಅವರಿಗಿಂತ ಒಂದೇ ಲಾಡು ಕಡಿಮೆ ತಿಂದೆ ನಾನು–ಅರ್ಧವೇ ಆಂಬಡೆ ಕಡಿಮೆ ತಿಂದೆ. ಅವರಷ್ಟೇ ಚಿರೋಟಿ ಹೊಡೆದೆ. ನನಗೆ ಕೇಳುವಂತೆ ಶಹಭಾಶ್ ಎಂದು ಹಿಗ್ಗಿದರು ನನ್ನ ಯಜಮಾನರು ನನ್ನ ಊಟ ನೋಡಿ,....."

"ಮದುವೆಯಾದ ಕೂಡಲೆ ಅವರ ಜೊತೆಗೆ ಹೊರಟೆಯಾ–ಕೆಂಚಮ್ಮ...."

"ಹೊರಟದ್ದು ವನವಾಸಕ್ಕೆ ಭೀಮಕ್ಕೆ ತೌರುಮನೆಗೆ......"

"ವನವಾಸಕ್ಕೆ? ಇದೇನು ಹೀಗಂತಿ ಕೆಂಚು......"

"ಹೌದು, ಅವರ ಮನೆಯೋ–ಧರ್ಮರಾಯ ಅರ್ಜುನ ನಕುಲ ಸಹದೇವ –ಎಲ್ಲರಿಗೂ ಹೆಂಡಂದಿರು, ಎರಡೋ ಮೂರೋ ಮರಿಗಳು–ಪಾಂಡುರಾಜ

ಸ್ವರ್ಗಾರೋಹಣ ಪರ್ವ. ಕುಂತಿ ಕಾವಿ ಬಣ್ಣ ಉಟ್ಟು ಹುಡುಗರನ್ನು ಸಾಕಿದಳು ಕೌರವರೊಡನೆ ಜೂಜಾಡುವ ಬದಲು ಇದ್ದ ನಾಲ್ಕು ಎಕರೆ ಒಂದು ಮನೆಗೆ ಈ ಪಂಚಪಾಂಡವರೂ ಕಿತ್ತಾಡಿದರು. ನಮ್ಮ ಯಜಮಾನರು ನೀವು ನಾಲ್ವರೂ ಒಂದು ತೂಕ ನಾನೇ ಒಂದು ತೂಕ ಎಂದು ಮೂರು ಎಕರೆ ಕಾಲು ಮನೆ ನನಗೆ ಬೇಕು ಎಂದು ಬಡಿದಾಡಿದರು. ಆ ಮುದುಕಿ ಕುಂತಿ ಎಲ್ಲರೂ ಮರಿಗಳೇ ಕಾಣ್ರೊ ಯಾಕೆ ಕಿತ್ತಾಡ್ತೀರೀಂತ ಕಿರ್ಲಿದ್ರೂ ಯಾರು ಕಿವಿಗೆ ಹಾಕಿಕೋಬೇಕು ?.... ಕಡೆಗೆ ಬೈಗಳಿಂದ ಕೈಕೈ ಮಿಲಾಯಿಸಿತು ನನ್ನ ಪ್ರಾಣ ಪ್ರಿಯರು ಸಹದೇವನನ್ನು ಸದೆಬಡಿದರು – ಅರ್ಜುನನ ಅಂಗಿ ಹರಿದರು, ಧರ್ಮರಾಯನ ದವಡೆಗೊದ್ದು, ನನ್ನನ್ನೂ ಕರೆದುಕೊಂಡು ರೈಲು ಹತ್ತಿಬಿಟ್ಟರು. ಪೂನಾ–ಬೊಂಬಾಯಿ–ಲೋಂಡ –ಮನ್ಮಾಡ್–ಗಯಾ–ಪ್ರಯಾಗ–ಪೂರಿ ಜಗನ್ನಾಥ–ಬೆಜವಾಡ ಮದರಾಸು–ಚಿದಂಬರ ನಟರಾಜ ಎಂದು ಹನ್ನೆರಡು ವರ್ಷ ಸುತ್ತಿಸಿದರು...ಎಲ್ಲೆಲ್ಲಿ ಹೋದರೂ ಒಂದೊಂದು ಹೋಟಲಲ್ಲದೆ ಬೇರೆ ಎಲ್ಲಿ ಇವರಿಗೆ ಕೆಲಸ ಸಿಗಬೇಕು?..... ಇವರ ಹೊಟ್ಟೆಗೆ ನನ್ನ ಹೊಟ್ಟೆಗೆ ಹಾಕಲು ಹೋಟಲುಗಳಿಗೇ ಸಾಧ್ಯ. ಈಚಲಕರಂಜಿಯಲ್ಲಿ ಘಟೋದ್ಗಜ ಹುಟ್ಟಿದ. ಅಲ್ಲಿ ಹೋಟಲಿನವನಿಗೂ ಇವರಿಗೂ ಯಾವುದೋ ವಿಷಯಕ್ಕೆ ಕೈಕೈ ಮಿಲಾಯಿಸಿ ರಾತ್ರಿ ಹನ್ನೆರಡಕ್ಕೆ ಅವನನ್ನು ಸ್ವಾಮಿಪಾದ ಸೇರಿಸಿದರು. ಅವನು ಸೇರಿಸಿಟ್ಟ ಹಣದ ಗಂಟನೊಡನೆ ನನ್ನನ್ನೂ ಮಗನನ್ನೂ ಕರೆದೊಯ್ದರು. ಅಲ್ಲಿಂದ ಅಜ್ಞಾತವಾಸಕ್ಕೆ ಪ್ರಾರಂಭ ಭೀಮಕ್ಕ......"

"......ಎಷ್ಟು ಕಷ್ಟಪಟ್ಟಿದ್ದೀಯೆ ಕೆಂಚಮ್ಮ......"

"ಈ ಅಜ್ಞಾತವಾಸದಲ್ಲೇ ನಮ್ಮವರು ಮೀಸೆ ತೆಗಿಸಿ ಕ್ರಾಪು ಬಿಟ್ಟು ಈಚಲ ಕರಂಜಿಯಿಂದ ತಂದ ಗಂಟಿನಿಂದ ಮಿಲಿಟರಿ ಕಂಟ್ರಾಕ್ಟ್ ಪ್ರಾರಂಭಿಸಿದರು, ಅಪ್ಪಟ ಬೆಣ್ಣೆ ಸರಬರಾಜಿಗೆ ನಿಂತರು ನನ್ನ ಪ್ರಾಣಪ್ರಿಯರು. ಮೈದಾ–ಡಾಲ್ಡಾ ನಾದಿ ನಾದಿ ನನ್ನ ಕೈಯೆಲ್ಲಾ ಸೋತು ಹೋಯಿತು. ಆಮೇಲೆ ತುಪ್ಪ ಸಪ್ಲೈಗೆ ನಿಂತರು. ಇನ್ನೂ ಅನುಕೂಲವಾಯಿತು ನಾದುವುದು ತಪ್ಪಿ ಸೀದಾ ಡಾಲ್ಡಾಕ್ಕೆ ಕೊಂಚ ತುಪ್ಪ ಬೆರಸಿ ಸಪ್ಲೈ ಮಾಡಿದರು..... ಆಮೇಲೆ ಬಟ್ಟೆ ವ್ಯಾಪಾರಕ್ಕಿಳಿದು ಆಗಲೆ ನೋಡಿ ಈ ಮನೆ ಕೊಂಡದ್ದು.....ಘಟೋದ್ಗಜನ ಜನ ಉಪನಯನ ಮುಂದಿನ ತಿಂಗಳು...... ಮಂತ್ರಿಗಳಿಗೂ ಆಹ್ವಾನ ಕಳಿಸುತ್ತಾರೆ......ಈಗ ಅರ್ಜುನ......ನಕುಲ ಬಾಯಿ ಬಾಯಿ ಬಿಡ್ತಾರೆ.......ಯಾತಕ್ಕೆ ಹೇಳಿದೇಂದರೆ........ಯಾವ ಪೂಜೆಮಾಡಲಿ ಭಕ್ತಿಯಿಂದ ಮಾಡಬೇಕೂನ್ನೋದಕ್ಕೆ ಹೇಳ್ತೀನಿ.......ಮುಂದಿನ ತಿಂಗಳು ಕ್ರಿಷ್ಣೇಂದ್ರ ಭವನ ಪ್ರಾರಂಭಿಸುತ್ತಾರೆ. ಬಾಡಿಗೆ ಐನೂರು....."

"ಇನ್ನೂ ಅಜ್ಞಾತವಾಸದಲ್ಲೇ ಇದ್ದಿರಾ?......."

"ಇಲ್ಲ ಈಚಲಕರಂಜಿ ಮೊಕದ್ದಮೆ ಹೂಡಲೇ ಇಲ್ಲ. ಪೊಲೀಸರಿಗೆ ಹಸಿರುನೋಟು ತೋರಿಸಿದರು........ಎಲ್ಲಾ ಸರಿಹೋಯ್ತು....."

"..........ಎಲ್ಲದಕ್ಕೂ ಕಾಲ ಬರಬೇಕು ಕೆಂಚಮ್ಮ......"

"ನಾಳೆ ಭೀಮನ ಅಮಾವಾಸ್ಯೆ......ನಿಮ್ಮ ಹುಡುಗೀನೂ ಶ್ರದ್ಧೆಯಿಂದ ಪೂಜೆ ಮಾಡ್ಲಿ ಹೇಳಿ......ಬರ್ತೀರಾ.....ಕುಂಕುಮಕೊಳ್ಳಿ....."

"ನಮಸ್ಕಾರ ಕೆಂಚಮ್ಮ......ಬತ್ತೇನೆ......"

"ನಮಸ್ಕಾರ......."

■

# ಎಲ್ಲಿಂದ ಆರಂಭವೋ

ಸುಕೇಶವ

ಸೋಮು ಅವತ್ತು ಮನೆಯಿಂದಲೇ ಕೆಲಸ. ಹೀಗಾಗಿ ಕೋಣೆ ಬಾಗಲು ಹಾಕಿಕೊಂಡು ಕೆಲಸ ಮಾಡುತ್ತಿದ್ದ. ಯಾರೋ ಜೊರಾಗಿ ಬಾಗಿಲು ತೆಗೆದುಕೊಂಡು ಒಳಬಂದಂತಾಯಿತು. ಹಿಂದೆಯೇ ಮಾತು ಕೇಳಿಸಿತು.

ತಗೊಳಿ ಕಾಫಿ ತಂದಿದೀನಿ. ನಿಮ್ಮ ಕೆಲಸದ ಮಧ್ಯೆ ಕಾಫಿ ಕುಡೀದೇ ಹಾಗೇ ಇಟ್ಟು ಆಮೇಲೆ ನನಗೆ ಇದೇನೇ ಇಂಥಾ ತಣ್ಣನೆ ಕಾಫಿ ತಂದಿದೀಯ ಅಂತ ದೂರಬೇಡಿ. ತಲೆ ಎತ್ತಿ ನೊಡಿದ ಸೋಮಿ ನಿಂತಿದ್ದಳು. ಇದೇನೇ ಇವತ್ತು ರಾಂಗ್ ಮೂಡಲ್ಲಿ ಇರೋ ಹಾಗಿದೀಯ ಅಂದ. ರಾಂಗೂ ಇಲ್ಲ ರೈಟೂ ಇಲ್ಲ. ನಮ್ಮ ಮೂಡು ಸರಿಯಾಗೇ ಇರುತ್ತೆ. ಅದನ್ನು ರಾಂಗು ರೈಟು ಮಾಡೋರು ನೀವೇ ಅಂದಳು. ಆಯ್ತು ಹೊಗಿಬಾ ನನಗೂ ಕೆಲಸ ಇದೆ ನಿನಗೂ ಕೆಲಸ ಇದೆ ಅಂದ ಸೋಮು. ನೋಡಿ ನಾನು ಕಾಫಿ ಕೊಟ್ಟಿದೀನಿ ನೀವು ಕಾಫಿ ಕುಡಿದಿದೀರ ನೆನಪಿಟ್ಕೊಳಿ. ಆಮೇಲೆ ನನಗೆ ನನ್ನ ಹೆಂಡ್ತಿ ಕಾಫಿ ಕೊಡೋದೇ ಇಲ್ಲ ಅಂತ ಊರೆಲ್ಲಾ ಸಾರ್ಕೊಂಡು ಬರಬೇಡಿ ಅಂದಳು. ಲೇ ನಾನ್ಯಾವಾಗ್ಲೇ ಸಾರ್ಕೊಂಡು ಬಂದೆ, ನಾನು ಸಾರ್ಕೊಂಡೂ ಬರಲಿಲ್ಲ ಸಾಂಬಾರ್ಕೊಂಡೂ ಬರಲಿಲ್ಲ.

ಸೋಮಿ ಅಣಕಿಸುವಂತೆ ಒಂದು ಕೈ ಸೊಂಟದ ಮೇಲೆ ಇನ್ನೊಂದು ಕೈ ಸೋಮು ಮೂತಿ ತಿವಿಯುವಂತೆ ಮಾಡಿ ಆಹಾಹಾಹಾಹಾಹಾಹ ! ಹೇಳೋದು ನೋಡು. ನಿಮ್ಮ ಸ್ನೇಹಿತರು ಮನೆಗೆ ಬಂದಾಗ ಅವರೆದುರಿಗೇ ನನ್ನ ಕಡೆ ನೋಡಿ ನನ್ನ ಹೆಂಡ್ತಿ ನನಗೆ ಕಾಫಿ ಕೊಡೋದೇ ಇಲ್ಲ ಅಂತ ಹೇಳ್ಲಿಲ್ವಾ ಪಾಪ. ಅಯ್ಯೋ ಭಗವಂತಾ ನಾನು ಯಾವಾಗ ಹೇಳಿದ್ನೋ ನನಗೇ ಜ್ಞಾಪ್ಕ ಆಗ್ತಿಲ್ಲ. ಅದು ಹೇಗೆ ಜ್ಞಾಪ್ಕ ಆಗುತ್ತೆ. ಅದು ನೀವು ಆಡಿದ ಮಾತಲ್ವ ಅದಿಕ್ಕೇ ಜ್ಞಾಪ್ಕ ಆಗ್ತಿಲ್ಲ. ಅದೇ ನಾನು ಏನಾದರೂ ಒಂದು ಮಾತಾಡಿದ್ರೆ ಅದನ್ನು ನೀವು ಮರೆಯೋದೇ ಇಲ್ಲ. ಅದ್ಯಾವುದಪ್ಪಾ ನಾನು ಮರೆಯದೇ ಇರೋ ಮಾತು ನೀನು ಆಡಿರೋ ಮಾತು. ಅದೇರೀ ಅವತ್ತು ನಿಮ್ಮ ಅಪ್ಪ ಅಮ್ಮ ಬಂದಿದ್ರು. ನೀವು ಅವರಿಗೆ ಬೇಗ ಬೇಗ ತಿಂಡಿ ಮಾಡಿ ಕೊಡು ಅಂದ್ರಿ. ನಾನು ಕಾವಲಿ ಇಟ್ಟು ಅದು ಕಾಯೋ ಹೊತ್ತಿಗೆ ದೋಸೆ ಹಿಟ್ಟು ತೊಳಸೋಣ ಅಂತಿದ್ದೆ. ಅಷ್ಟರಲ್ಲೇ ನಿಮ್ಮತ್ತೆ ಇನ್ನೂ ತಿಂಡಿ ಆಗಿಲ್ವೇನಮ್ಮಾ ಅಂತ ಕೇಳಿದ್ದೇ ತಡ ನೀವು ಅದೆಲ್ಲಿದ್ರೋ ಬಂದು ಲೇ ಸೋಮಿ ಅಮ್ಮ ಹಸಿವು ಅಂತಿದಾಳೆ ಬೇಗ ತಿಂಡಿ ಮಾಡಿ ಕೊಡಬಾರದೇನೇ, ಯಾವತ್ತೂ ನಿನ್ನದು ಜಡಭರತತನ ಕಣೆ ಅನ್ಲಿಲ್ವಾ. ಸೋಮಿ ಮಾತಿಗೆ ಸೋಮು ಅವಳ ಕಡೆ ತಿರುಗಿ ಲೇ ಸೋಮಿ ಇದೇನೇ ಯಾವುದೋ ರಾಯನ ಕಾಲದ ಮಾತು ಈಗ ಆಡ್ತಿದೀಯ. ನಮ್ಮಮ್ಮ ಈ ಲೋಕಾನೇ ಬಿಟ್ಟು ಹೋಗಿ ಆರು ವರ್ಷ ಆಯ್ತಲ್ಲೇ. ಆರು ವರ್ಷ ಆದರೇನಂತೆ ಅದು ಇನ್ನೂ ನನ್ನ ಕಿವಿಯಲ್ಲಿ ಗುಂಯ್‌ಗುಡ್ತಿದೆ ಗೊತ್ತಾ.

ಆಯ್ತು ಅವತ್ತು ನಾನೇನಂದೆ ಅಂತ ನೆನಪಿದ್ರೆ ಹೇಳಿಬಿಡು. ನೋಡಿದ್ರಾ ನೀವು ಆಡಿದ ಮಾತನ್ನು ನನ್ನ ಬಾಯಿಂದ ಕೇಳಬೇಕು ಅಂತ ಹೇಳ್ತಿದೀರ. ಅವತ್ತು ನೀವು ನನ್ನ ಕಡೆ ಕೆಂಪು ಕಣ್ಣು ಮಾಡಿಕೊಂಡು ನೋಡಿ ಲೇ, ಬೇಗ ಬೇಗ ತಿಂಡಿ ಮಾಡೆ. ಅದ್ಯಾವ ಘಳಿಗೇಲಿ ನಿಮ್ಮಮ್ಮ ನಿನ್ನ ಹೆತ್ಲೋ ಎಲ್ಲಾದಕ್ಕೂ ಲೇಟು, ಲೇಟು, ಲೇಟು. ಇನ್ನೊಂದ್ಸಾರಿ ಹೀಗೆ ಮಾಡಿದರೆ ನಾನು ಏನು ಮಾಡ್ತೀನೋ ನನಗೇ

ಗೊತ್ತಿಲ್ಲ ಅಂದ್ರಿ. ಸೋಮು ಬೆವೆತುಹೋದ. ಇವಳ ತಲೇಲಿ ಬರೀ ಮೆದುಳು ಇದೆಯೋ ಇಲ್ಲಾ ಯಾವುದಾದರೂ ಮೆಮೋರಿ ಚಿಪ್ ಕೂಡಾ ಇಟ್ಟು ಕಳಿಸಿದಾನೋ ಆ ಭಗವಂತ ಅಂತ.

ಸರಿ ಅದು ನಾನು ಆಡಿದ ಮಾತು ಅದಕ್ಕೆ ನಿನೇನಂದೆ. ನಾನಾ, ನಾನೂ ನಿಮ್ಮ ಕಡೆ ನೋಡಿ, ರೀ ನನಗೆ ಇರೋದು ಎರಡೇ ಕೈ. ನಾನು ಮಾಡೋದು ಹೀಗೇ. ಬೇಕಾದ್ರೆ ನನ್ನನ್ನು ಇಟ್ಕೊಳಿ ಇಲ್ಲದಿದ್ರೆ ಡೈವೋರ್ಸ್ ಕೊಟ್‌ಬಿಡಿ ಅಂದೆ. ಇರಬಹುದು ಅಂದಿರಬಹುದು, ನೀನು ಅಂಥೋಳೇ, ಅನ್ನೋದಕ್ಕೆ ಹಿಂದೆ ಮುಂದೆ ನೊಡೋದೇ ಇಲ್ಲ. ಸರಿ ನೀನು ಹಾಗೆ ಆಡಿದ್ದಕ್ಕೆ ನಾನೇನಂದೆ ಅದನ್ನು ಹೇಳು. ಹಾಗೆ ಬನ್ನಿ ದಾರಿಗೆ. ನೋಡಿ ಗಂಡ ಹೆಂಡ್ತಿ ಜಗಳ ಆಡುವಾಗ ಆಡುವ ಯಾವ ಮಾತಿಗೂ ಅರ್ಥ ಇರೋಲ್ಲ. ಮಾತುಗಳು ಹಾಗೆ ಬರುತ್ವೆ ಹೀಗೆ ಹೋಗುತ್ವೆ. ಆದರೆ ನೀವು ಅವತ್ತು ಆಡಿದ ಮಾತನ್ನು ಮರೆಯದೇ ಸೋಮಿ ನೀನು ಕೇಳಿದ್ಯಲ್ಲ ಯಾವಾಗ ಕೊಡ್ಲಿ ಯಾವಾಗ ಕೊಡ್ಲಿ ಅಂತ ಕೇಳ್ತನೇ ಇದ್ರಲ್ಲ. ಮೊನ್ನೆ ಮೊನ್ನೆನೂ ಕೇಳಿದ್ರಿ. ನೋಡು ನನಗೆ ಮರೆತುಹೋಗಿದೆ. ನಾನೇನಂದೆ ಅದನ್ನು ಹೇಳಿ ನನ್ನನ್ನು ಕೆಲಸ ಮಾಡಲು ಬಿಡು.

ಅದೇರೀ ಮಾಡಿದೋರ ಪಾಪ ಆಡಿದೋರ ಬಾಯಲ್ಲಿ ಅನ್ನೋ ಹಾಗೆ ನೀವು ಮಾಡೋದು. ಅಲ್ಲಾರೀ ನಾನೇನೋ ಬೇಕಾದ್ರೆ ಇಟ್ಕೊಳಿ ಇಲ್ಲದಿದ್ರೆ ಡೈವೋರ್ಸ್ ಕೊಟ್ಟುಬಿಡಿ ಅಂದೆ. ಹಾಗಂದ ತಕ್ಷಣ ನೀವು ಪದೇ ಪದೇ ನನ್ನ ಹತ್ರ ಬಂದು ಸೋಮಿ ನಾನು ನಿನಗೆ ಯಾವಾಗ ಡೈವೋರ್ಸ್ ಕೊಡ್ಲಿ ಡೈವೊರ್ಸ್ ಕೊಡ್ಲಿ ಅಂತ ಕೇಳ್ತಾನೇ ಇದೀರ. ಕಡೇ ಪಕ್ಷ ಹದಿನೈದು ದಿನಕ್ಕೊಮ್ಮೆಯಾದರೂ ಕೇಳ್ತಿದೀರ ತಾನೇ. ಈಗ ಹದಿನೈದು ದಿನಗಳ ಕೆಳಗೆ ಕೂಡಾ ಕೇಳಿದ್ರಿ ಸೋಮಿ ಹಾಗಂದ ತಕ್ಷಣ ಸೋಮು ಜೋರಾಗಿ ನಕ್ಕ. ಲೇ ಅದು ಡೈವೋರ್ಸ್ ಕೊಡ್ಲ ಅಂತಲ್ಲ ಕಣೆ. ನೀನು ಎಲ್ಲಾ ಕಲಿತೆ, ನನ್ನ ಜೊತೆ ಸಂಸಾರ ಮಾಡೋದು ಕಲಿತೆ, ಜಗಳ ಆಡೋದು ಕಲಿತೆ, ನನ್ನನ್ನು ಗೋಳು ಹುಯ್ಕೊಳೋದು ಕಲಿತೆ, ನನ್ನ ಜೋಬಿಂದ ದುಡ್ಡು ತೆಗೆಯೋದು ಕಲಿತೆ, ಮುಖ ಊದಿಸಿ ಕೂತುಕೊಂಡು ನಿನಗೇನು ಬೇಕೋ ಅದನ್ನು ಪಡೆಯುವುದನ್ನು ಕಲಿತೆ. ಆದರೆ ಹದಿನೈದು ದಿನಕ್ಕೊಮ್ಮೆ ಡೈ ಮಾಡ್ಕೊತೀಯಲ್ಲ ಅದನ್ನು ಸರಿಯಾಗಿ ಮಾಡ್ಕೊಳೋದನ್ನು ಕಲೀಲಿಲ್ಲ. ಹದಿನೈದು ದಿನಕ್ಕೊಮ್ಮೆ ನಿನ್ನ ಒಂದು ಹಳೇ ಸೀರೆ ಎಲ್ಲಾ ಡೈ ಬಣ್ಣ ಆಗಿಹೊಗುತ್ತೆ. ಅದನ್ನು ನೊಡೀ ನೋಡೀ ಸಾಕಾಗಿ ನಾನು ಸೋಮಿ ನಿನಗೆ ಡೈ ವರೆಸಿ ಕೊಡ್ಲಾ ಅಂತ ಕೇಳ್ತಾ ಇದ್ದದ್ದು ನೀನು ನೊಡಿದರೆ ಅದನ್ನು ಡೈವೋರ್ಸ್ ಕೊಡ್ಲಾ ಅಂದೆ ಅಂತ ಅಂದ್ಕೊಂಡಿದೀಯ. ರೀ ಸಾಕು ಮಾಡಿ ನಿಮ್ಮ ವಿವರಣೆ. ಮಾಡೋದೆಲ್ಲಾ ಅನಾಚಾರ ಮನೆ ಮುಂದೆ ಬೃಂದಾವನ ಅನ್ನೋ ಹಾಗಿದೆ ನಿಮ್ಮ ಮಾತು. ಅಲ್ಲಾರೀ ನಿಮಗೆ ನಾನು ಬೇಡದಿದ್ರೆ ನಮ್ಮಪ್ಪನ ಬಳಿ ಹಾಗೆ ಹೇಳಬೇಕಿತ್ತು, ಅದು ಬಿಟ್ಟು ಬಂದೋರ ಎದುರಿಗೆಲ್ಲಾ ಎಂಥದ್ರಿ ನಿಮ್ಮ ಮಾತು. ಇದೇನೇ ಹೊಸ ವರಸೆ, ಯಾರೇ ಬಂದೋರು, ಅವರ ಎದುರಿಗೆ ನಾನೇನೇ ಅಂದೆ.

ಅವತ್ತು ನಿಮ್ಮ ಹಳೇ ಸ್ನೇಹಿತ ಬಂದಿದ್ದರು. ನಮ್ಮ ಮನೇಲೇ ಉಳ್ಕೊತೀನಿ ಅಂದರು. ನೀವು ನನಗೆ ಸೋಮಿ ರಾತ್ರಿ ವಿಶೇಷವಾದ ಅಡುಗೆ ಮಾಡು ನನ್ನ ಸ್ನೇಹಿತ ಬಂದಿದಾನೆ ಅಂದ್ರಿ. ನಾನು ನಿಮಗೆ ಕಾಫಿ ಜೊತೆಗೆ ಚಕ್ಲಿ ಕೊಟ್ಟು ತಿನ್ತಾ ಇರಿ ಅಡುಗೆ ಮಾಡಿಬಿಡ್ತೀನಿ ಅಂದು ಅಡುಗೆ ಮನೆಗೆ ಬಂದೆ. ಮತ್ತೆ ಯಾಕೋ

ರೂಮ್ ಕಡೆ ಬಂದಾಗ ನೀವು ನಿಮ್ಮ ಸ್ನೇಹಿತನಿಗೆ ನಾನೂ ಕೆಲಸದಲ್ಲಿರೋ ಹುಡುಗಿ ಬೇಕು ಅಂತನೇ ಹುಡುಕ್ತಾ ಇದ್ದೆ ಆದರೆ ಇದ್ಯಾವ್ದೋ ನನಗೆ ಗಂಟು ಬಿತ್ತು. ಅವರಪ್ಪ ನನ್ನ ಕಾಲಿಗೆ ಬೀಳೋದೊಂದು ಬಾಕಿ. ಸರಿ ಹುಡುಗಿ ನೋಡೋಕೆ ಚನ್ನಾಗಿದಾಳಲ್ಲ ಅಂತ ಒಪ್ಕೊಂಡೆ ಅಂತ ಇದ್ದುದ್ದು ನನಗೆ ಕೇಳಿಸಿತು. ಅವತ್ತೇ ಅಡುಗೆ ಮನೆ ಪದಾರ್ಥನೆಲ್ಲಾ ಬಿಸಾಕಿ ನಮ್ಮಪ್ಪನ ಮನೆಗೆ ಹೊರಟು ಹೋಗೋಣ ಅಂತ ಇದ್ದೆ. ಆದರೆ ನಿಮ್ಮ ಸ್ನೇಹಿತನ ಮುಂದೆ ನೀವು ನನ್ನ ಮರ್ಯಾದಿ ತೆಗೆದರೂ ನಾನು ನಿಮ್ಮ ಮರ್ಯಾದಿ ಹೋಗೋಂಥ ಕೆಲಸ ಮಾಡಲಿಲ್ಲ. ಅಚ್ಚುಕಟ್ಟಾಗಿ ಅಡುಗೆ ಮಾಡಿ ನಗುನಗುತ್ತಾ ಊಟ ಬಡಿಸಿದೆ. ಊಟ ಮಾಡಿದ ನಿಮ್ಮ ಸ್ನೇಹಿತ ನನ್ನನ್ನು ಅನ್ನಪೂರ್ಣೇಶ್ವರಿ ಅಂದರು. ನಿಮಗೆ ನೆನಪಿದೆಯೋ ಅಥವಾ ಅದೂ ಜಾಣಮರೆವೋ. ಅಲ್ಲಾರೀ ನಿಮಗೆ ಕೆಲಸದಲ್ಲಿರೋ ಹುಡುಗೀನೇ ಬೇಕು ಅಂತಿದ್ರೆ ಹಾಗೆ ನಮ್ಮಪ್ಪನ ಮುಂದೆ ನೇರವಾಗಿ ಹೇಳಬೇಕಿತ್ತು. ಅಯ್ಯೋ ಪಾಪ ಅಂತ ನನ್ನನ್ನು ಯಾಕೆ ಮದುವೆ ಆದ್ರಿ. ಸೋಮು ಸಿಕ್ಕಾಪಟ್ಟೆ ಬೆವತು ಫ್ಯಾನ್ ಜೋರಾಗಿ ಹಾಕಿದ. ಮುಖ ಚನ್ನಾಗಿ ಒರೆಸಿಕೊಂಡ. ಇವತ್ತು ನನ್ನ ವರ್ಕ್ ಫ್ರಂ ಹೋಂ ನೆಗೆದುಬಿತ್ತು ಅಂದುಕೊಂಡ. ಮತ್ತೆ ಸೋಮಿಯ ಕಡೆ ನೋಡಿ ಸೋಮಿ ಯಾಕೆ ಇವತ್ತು ನೀನು ಸಖತ್ ಜಗಳ ಆಡೋ ಮೂಡಲ್ಲಿ ಇದೀಯ ಅಂದ. ನಾನೆಲ್ರೀ ಜಗಳ ಆಡೋ ಮೂಡಲ್ಲಿ ಇದೀನಿ. ಅಂಥಾ ಮುಡ್ ತರಿಸೋರು ನೀವೇ ಅಲ್ವೇ. ನೀವು ರೂಮಲ್ಲಿ ಕೂತ್ಕೊಂಡು ಕೂಗ್ತೀರ ನನಗೆ ಅಡುಗೆ ಮನೇಲಿ ಕುಕ್ಕರ್ ಕೂಗುವಾಗ, ಮಿಕ್ಸಿ ಆನ್ ಆಗಿರುವಾಗ ಹೇಗೆ ಕೇಳಬೇಕು. ಅಷ್ಟಕ್ಕೇ ನೀವು ಏನೇ ಕೂಗಿದರೆ ಬರೋಕೆ ಆಗಲ್ವಾ ಅಂತ ಕುಕ್ಕರ್‌ಗಿಂತ ಜೋರಾಗಿ ಮಿಕ್ಸಿಗಿಂತ ಜೋರಾಗಿ ಕೂಗ್ತೀರ.

ನೋಡೇ ತನ್ನ ಹೆಂಡ್ತಿ ತಾನು ಕೂಗಿದಾಗ ಬಂದು ಹತ್ತಿರ ನಿಂತ್ಕೊಂಡು ಏನೂಂದ್ರೆ ಅಂತ ಕೇಳಬೇಕು ಅಂತ ಪ್ರತಿಯೊಬ್ಬ ಗಂಡನಿಗೂ ಆಸೆ ಕಣೆ. ಅದೆಲ್ಲಾ ಮದುವೆಯಾದ ಹೊಸದರಲ್ಲಿ, ಅದೂ ಒಂದೆರಡು ತಿಂಗಳುಗಳೊಳಗೆ. ನರಸಿಂಹಸ್ವಾಮಿ ಅವರ ಕವನ ಇದೆಯಲ್ಲಾ. ಮದುವೆಯಾಗಿ ತಿಂಗಳಿಲ್ಲ ನೊಡಿರಣ್ಣ ಹೇಗಿದೆ ನಾನು ಕೂಗಿದಾಗಲೆಲ್ಲ ಬರುವಳೆನ್ನ ಶಾರದೆ ಹಿಂದೆ ಮುಂದೆ ನೋಡದೇ ಮರುಮಾತಾಡದೇ ಆಮೇಲಾಮೇಲೆ ಅಷ್ಟೇ ಕಣ್ರೀ. ನೀವು ಗಂಡಸರು ಇನ್ನೇನು. ನಾವು ಕರೆದ ತಕ್ಷಣ ಬಂದುಬಿಡ್ತೀರಾ. ಕರೆದ್ರೆ ಆ ಅನ್ನಲ್ಲ ಓ ಅನ್ನಲ್ಲ ಇನ್ನೊಂದು ಸಾರಿ ಕೂಗಿದರೆ ಏನೇ ನಿನ್ನ ಗೋಳು ಅಂತೀರ. ಏನ್ರೀ ನಿಮ್ಮಂಥ ಗಂಡಸರಿಗೆ ಹೆಂಡತಿ ಕೂಗು ಅಂದ್ರೆ ಅದೇನು ಗೋಳಿನ ಕರೇನಾ. ಆಯ್ತು ಮಹರಾಯಿತಿ, ಇನ್ನೇನಾದರೂ ಹೇಳೋದು ಇದ್ರೆ ಹೇಳಿ ನನಗೆ ಕೆಲಸ ಮಾಡಲು ಬಿಡು. ಹೌದ್ರೀ ನಿಮ್ದೆಲ್ಲಾ ಬೇಕಾದಾಗ ಬೇಕು, ಬೇಡದಾಗ ಬೇಡ ಅನ್ನೋ ಲೆಕ್ಕಾಚಾರ. ನಾನು ಸುಮ್ನೆ ಇದ್ರೆ ಏನಾದರೂ ಮಾತಾಡು ಸೋಮಿ, ನೀನು ಮಾತಾಡ್ತಾ ಇದ್ರೆ ಕೇಳ್ತಾನೇ ಇರಬೇಕು ಅನಿಸುತ್ತೆ ಅಂತೀರ. ಮಾತಾಡ್ತಾ ಇದ್ರೆ ರಾಮರಾಮ ಅದೆಷ್ಟು ಮಾತಾಡ್ತೀಯೇ ಅಂತೀರ. ಏನ್ರೀ ನಾನು ನಿಮ್ಮ ಸೌಂಡ್ ಬಾಕ್ಸಾ, ಸೌಂಡ್ ಮಾಡು ಅಂದಾಗ ಮಾಡೋಕೆ, ಆಫ್ ಮಾಡಿದಾಗ ಸುಮ್ನೆ ಇರೋಕೆ ಸೋಮು ರಪರಪ ಅಂತ ತಲೆ ಚಚ್ಚಿಕೊಂಡ ಆಯ್ತು ತಾಯೀ ಎಲ್ಲಾ ನಿನ್ನದೇ ಸರಿ, ನನ್ನದೇ ತಪ್ಪು ಆಯ್ತಾ ಈಗ್ಲಾದ್ರೂ ನನಗೆ ಕೆಲಸ ಮಾಡೋಕೆ ಬಿಡ್ತೀಯಾ. ಆಹಾಹಹಹಹಹ. ನನ್ನ ಎದುರಿಗೆ ಮಾತ್ರ ಎಲ್ಲಾ ನಿನ್ನದೇ ಸರಿ

ಅಂದುಬಿಡ್ತೀರ, ಯಾರಾದ್ರೂ ಮನೆಗೆ ಬಂದಾಗ ನಿಮ್ಮದೇ ಸರಿ ಅನ್ನೋ ಹಾಗೆ ಅವರ ಮುಂದೆ ಕೊಚ್ಕೊತೀರ ಇದೆಲ್ಲಾ ಸರೀನಾ.

ಆಯ್ತು ಅಂದ್ನಲ್ಲ. ಈಗ ನೀನು ಸುಮ್ನೆ ಇದ್ದು ಒಳಗೆ ಹೋಗಿ ನಿನ್ನ ಕೆಲಸ ನೀನು ನೋಡ್ಕೊಂಡು ನನಗೆ ಕೆಲಸ ಮಾಡೋಕೆ ಬಿಡೋಕೆ ಏನು ತಗೋತೀಯ. ಹಾಗೆ ಬನ್ನಿ ದಾರಿಗೆ, ಹೋದ ವಾರ ಅಪೇರ ಸಿಲ್ಕ್ಸ್ ಅಂಡ್ ಸ್ಯಾರೀಸ್ ಅಂಗಡೀಲಿ ನೊಡಿಕೊಂಡು ಬಂದಿದ್ವಲ್ಲ ರೇಷ್ಮೆ ಸೀರೆ ಅದು. ಅದರ ಎದುರು ಜ್ಯೂವಲರಿ ಷಾಪಲ್ಲಿ ಆ ಸೀರೆಗೆ ಮ್ಯಾಚ್ ಆಗೋ ಒಂದು ನೆಕ್ಲೇಸು, ಅದರ ಪಕ್ಕದ ಅಂಗಡೀಲಿ ನೆಕ್ಲೇಸಿಗೆ ಮ್ಯಾಚ್ ಆಗೋ ಒಂದು ಜೊತೆ ಹೊಸಾ ಪಾದರಕ್ಷೆ, ಅದರ ಮೂಲೆ ಅಂಗಡೀಲಿ ಆ ಪಾದರಕ್ಷೆಗೆ ಮ್ಯಾಚ್ ಆಗೋ ಅಂಥಾ ಒಂದು ಕ್ಯಾಪ್. ಸೋಮು ಮತ್ತೆ ಬೆಚ್ಚಿದ ಕ್ಯಾಪಾ ಅದು ಯಾರಿಗೇ. ಇನ್ಯಾರಿಗೆ ನಿಮಗೇ ಅಂದು ನಗುತ್ತಾ ಸೋಮಿ ಒಳಗೆ ಹೋದಳು. ಸೋಮು ಕೋಣೆಯ ಬಾಗಿಲು ಹಾಕಿ ಚಿಲಕಾನೂ ಹಾಗಿ ತಣ್ಣಗಾಗಿದ್ದ ಕಾಫಿನ ಗಟಗಟಾಂತ ಒಂದೇ ಸಾರಿಗೆ ಕುಡಿದು ಇವಳನ್ನು ಇವಳ ಅಪ್ಪ ನನಗೆ ಯಾವತ್ತು ಗಂಟುಹಾಕಿದನೋ ಅವತ್ತೇ ನಾನು ಟೋಪಿ ಹಾಕ್ಕೊಂಡೆ ಮತ್ತೆ ಆಗಾಗ ಇವಳಿಂದ ಹಾಕಿಸಿಕೊಳ್ತಿದೀನಿ ಅಂದುಕೊಂಡ. ಅದು ಹೇಗೋ ಸೋಮಿಗೆ ಅದು ಕೇಳಿಸಿ ಅದೇನ್ರೀ ಟೋಪಿ ಅಂತ ಗೊಣಗ್ತಾ ಇದೀರ ಅಂದು ಕೂಗಿದಳು. ಎಲ್ಲಿಂದಲೋ ಆರಂಭವಾಗಿದ್ದು ಹೇಗೋ ಏನೋ ಎಂತೋ ಅಂತ್ಯವಾಗುವ ಲಕ್ಷಣ ಕಾಣುತ್ತಿದೆ. ಈಗ ನಾನು ಬಾಯಿ ಮುಚ್ಚಿಕೊಂಡಿರೋದು ಬಹಳ ಒಳ್ಳೇದು ಅಂತ ಕೆಲಸದಲ್ಲಿ ಮಗ್ನನಾದ.

■

